ಶುಕ್ರವಾರ, ಡಿಸೆಂಬರ್ 29, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 359 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ದರ್ಶನ್ ಅಭಿನಯದ 'ಕಾಟೇರ' 500ಕ್ಕೂ ಅಧಿಕ ಚಿತ್ರಮಂದಿರಗಳ ಸಾವಿರಕ್ಕೂ ಅಧಿಕ ಪರದೆಗಳಲ್ಲಿ ಪ್ರದರ್ಶನವಾಗಲಿದೆ



2023 ಮರೆಯುವ ಮುನ್ನ... 9

ನೇಪಥ್ಯಕ್ಕೆ ಸರಿದ 'ಕ್ಯಾಪ್ಟನ್' 4

ಬಾಲ ಗರ್ಭಿಣಿಯರು: 3 ದಿನ, 39 ಎಫ್‌ಐಆರ್ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,410 ▲	21,778 ▲	₹65,700 (ಬೆಂಗಳೂರು) ▲	₹77,100 (ಬೆಂಗಳೂರು) ▲	83.20 ▲

ದಂಡ, ಶಿಕ್ಷೆ ನಿಗದಿ ಪಡಿಸಲು ಕಾನೂನಿಗೆ ತಿದ್ದುಪಡಿ: ಸಚಿವ ಈಶ್ವರ ಖಂಡ್ರೆ ಪ್ರಸ್ತಾವ

ಅಕ್ರಮ ಬಡಾವಣೆಗೆ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಬಂಧಪಟ್ಟ ಪ್ರಾಧಿಕಾರಗಳ ಅನುಮೋದನೆ ಪಡೆಯದೇ ಅನಧಿಕೃತವಾಗಿ ಬಡಾವಣೆಗಳನ್ನು ನಿರ್ಮಿಸಿದವರಿಗೆ ಜೈಲುಶಿಕ್ಷೆ ಮತ್ತು ದಂಡ ವಿಧಿಸಲು ಸರ್ಕಾರ ಸಿದ್ಧತೆ ನಡೆಸಿದೆ. ಇಂತಹ ಅಕ್ರಮಗಳಿಗೆ ಕಡಿವಾಣ ಹಾಕಲು ಕಠಿಣ ನಿಯಮಗಳನ್ನು ರೂಪಿಸಲಿದೆ.

ಬಿಬಿಎಂಪಿ ಕಾಯ್ದೆ 2020ರ ಕಲಂ 144(6) ಮತ್ತು (21)ರ ಅಂಶಗಳನ್ನು ರಾಜ್ಯದ ಇತರ ಮಹಾನಗರ ಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೂ ವಿಸ್ತರಿಸುವ ಸಂಬಂಧ ಸರ್ಕಾರ ರಚಿಸಿರುವ ಸಂಪುಟ ಉಪಸಮಿತಿಯ ಸಭೆಯಲ್ಲಿ ಸಮಿತಿಯ ಅಧ್ಯಕ್ಷ, ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಸಭೆ ಗುರುವಾರ ನಡೆಯಿತು.

'ಸ್ಥಳೀಯ ಸಂಸ್ಥೆಗಳಿಂದ ನಕ್ಷೆ ಮಂಜೂರಾತಿ ಪಡೆಯದೇ ಬಡಾವಣೆಗಳನ್ನು ನಿರ್ಮಿಸುವುದು ಗಂಭೀರ ವಿಚಾರ. ಇದಕ್ಕೆ ಕಡಿವಾಣ ಹಾಕಲು ಕಾನೂನಿಗೆ ತಿದ್ದುಪಡಿ ತರುವುದು ಅಗತ್ಯ. ಇಲ್ಲವಾದರೆ ಅನಧಿಕೃತ ಬಡಾವಣೆಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಲೇ ಇರುತ್ತವೆ. ಆದ್ದರಿಂದ ಕಟ್ಟುನಿಟ್ಟಿನ ಕಾನೂನು ಅಗತ್ಯ' ಎಂದು ಅವರು ಸಭೆಯಲ್ಲಿ ಪ್ರತಿಪಾದಿಸಿದರು.

'ಒಂದು ವೇಳೆ ನಕ್ಷೆಗೆ ಮಂಜೂರಾತಿ ಪಡೆದ ಬಳಿಕ ನಿಯಮ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಿಸುವವರ ವಿರುದ್ಧವೂ ಕ್ರಮ ಜರುಗಿಸಬೇಕು. ನಿರ್ಮಾಣ ಹಂತದಲ್ಲಿಯೇ ಇಂತಹ ಕಟ್ಟಡಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲು ಅನುವಾಗುವಂತೆ ನಿಯಮಗಳಿಗೆ ತಿದ್ದುಪಡಿ ತರಬೇಕಾಗಿದೆ' ಎಂದೂ ಖಂಡ್ರೆ ತಿಳಿಸಿದರು.

ನ್ಯಾಯಸಮ್ಮತವಾಗಿ ಸಾರ್ವಜನಿಕ ಉದ್ದೇಶಕ್ಕೆ ಜಾಗ ಬಿಟ್ಟು ಬಡಾವಣೆ ನಿರ್ಮಿಸಲು ಮುಂದಾದರೆ ಮತ್ತು ಮನೆಯನ್ನು ನಿರ್ಮಿಸಲು ನಿಯಮಾನುಸಾರ ನಕ್ಷೆಗೆ ಮಂಜೂರಾತಿ ಬಯಸಿದಲ್ಲಿ ನಿಯಮ ಸರಳೀಕರಣ ಮಾಡಿ, ನಿರ್ದಿಷ್ಟ ಕಾಲಮಿತಿಯೊಳಗೆ ಮಂಜೂರಾತಿ ನೀಡುವಂತೆ ಮಾಡಲು ತಂತ್ರಾಂಶವೊಂದನ್ನು ಅಭಿವೃದ್ಧಿ ಪಡಿಸುವ ಅಗತ್ಯವಿದೆ ಎಂದು ಹೇಳಿದರು.

ನಕಲಿ ಖಾತೆ ಮಾಡಿಸಿಕೊಂಡು ನೋಂದಣಿ ಮಾಡಿಸಲು ಯಾರಿಗೂ ಅವಕಾಶ ಇರದಂತೆ 'ಕಾವೇರಿ' ತಂತ್ರಾಂಶದಲ್ಲಿ ಮಾರ್ಪಾಡು ಮಾಡಿದರೆ ಆಗ ಅನಧಿಕೃತ ಬಡಾವಣೆ, ಕಟ್ಟಡಗಳನ್ನು ನಿಯಂತ್ರಿಸಬಹುದು ಎಂದು ಸಚಿವರು ಸಲಹೆ ನೀಡಿದರು.


ಯಾವುದೇ ಸಮುಚ್ಚಯಗಳನ್ನು, ಗುಂಪು ಮನೆಗಳು ಮತ್ತು ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸುವಾಗ ಜಲಕಾಯ್ದೆ, ವಾಯುಕಾಯ್ದೆ ಮತ್ತು ಪರಿಸರ ಸಂರಕ್ಷಣೆ ಕಾಯ್ದೆ ಉಲ್ಲಂಘಿಸಿ ಕಟ್ಟಡ ನಿರ್ಮಿಸುವವರ ವಿರುದ್ಧ ಕಾನೂನು ರೀತ್ಯ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅವರು ಸೂಚಿಸಿದರು.

ಸಭೆಯಲ್ಲಿ ಪೌರಾಡಳಿತ ಸಚಿವ ರಹೀಂ ಖಾನ್ ಮತ್ತು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಮತ್ತು ಇತರ ಅಧಿಕಾರಿಗಳು ಇದ್ದರು.



ಅಕ್ರಮ: ಮೊದಲ ವರ್ಷ ದಂಡದ ಜತೆ ದುಪ್ಪಟ್ಟು ತೆರಿಗೆ

ಬಡಾವಣೆ ಅನುಮೋದನೆ, ನಕ್ಷೆ ಮಂಜೂರಾತಿ ಇಲ್ಲದೆ ನಿಯಮ ಉಲ್ಲಂಘಿಸಿ, ಕಂದಾಯ ಭೂಮಿಯಲ್ಲಿ ನಿರ್ಮಿಸಿದ ಕಟ್ಟಡಗಳಿಗೆ ಬಿಬಿಎಂಪಿಯ ರೀತಿಯಲ್ಲೇ ರಾಜ್ಯದಾದ್ಯಂತ ಏಕರೂಪದ ತೆರಿಗೆ ವಿಧಿಸುವುದು ಸೂಕ್ತ ಎಂದು ಸಚಿವ ಈಶ್ವರ ಖಂಡ್ರೆ ಸಲಹೆ ನೀಡಿದರು.



ಅನಧಿಕೃತವಾಗಿ ಕಟ್ಟಿರುವ ಕಟ್ಟಡಗಳನ್ನು ಸಕ್ರಮಗೊಳಿಸಲು ಒಂದು ಬಾರಿ ಅವಕಾಶ ನೀಡುವುದು ಸೂಕ್ತ. ಅಕ್ರಮಕ್ಕೆ ತಕ್ಕಂತೆ ದಂಡ ನಿಗದಿ ಮಾಡಿ, ಮೊದಲ ವರ್ಷ ದುಪ್ಪಟ್ಟು ತೆರಿಗೆ ವಿಧಿಸಿ, ನಂತರದ ವರ್ಷಗಳಲ್ಲಿ ನಿಯಮಿತವಾಗಿ ತೆರಿಗೆ ವಿಧಿಸಬಹುದು ಎಂದೂ ಹೇಳಿದರು.

ಈವರೆಗೆ ನಡೆದಿರುವ ಎಲ್ಲ ಸಭೆಗಳಲ್ಲಿ ನಡೆದ ಚರ್ಚೆಯ ಅಂಶಗಳನ್ನು ಕ್ರೋಡೀಕರಿಸಿ, ಮಸೂದೆ ರೂಪಿಸಲು ಮತ್ತು ಬಿಬಿಎಂಪಿಯಲ್ಲಿ ಕಟ್ಟಡಗಳಿಗೆ ತೆರಿಗೆ ವಿಧಿಸುತ್ತಿರುವ ರೀತಿಯಲ್ಲೇ ರಾಜ್ಯದ ಇತರ ಪ್ರದೇಶಗಳಲ್ಲೂ ತೆರಿಗೆ ಸಂಗ್ರಹಿಸಲು ನಿಯಮ ರೂಪಿಸುವಂತೆ ಅವರು ಸೂಚಿಸಿದರು.





ನಾಮಫಲಕ: ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ–ಸಿ.ಎಂ

ಶೇ 60ರಷ್ಟು ಕನ್ನಡ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಎಲ್ಲ ಅಂಗಡಿ, ಆಸ್ಪತ್ರೆ, ಹೋಟೆಲ್, ವ್ಯಾಪಾರಿ ಸಂಸ್ಥೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಭಾಷೆ ಇರಬೇಕು. ಇದರ ಅನುಷ್ಠಾನಕ್ಕೆ 2024ರ ಫೆ.28ರ ಗಡುವು ವಿಧಿಸಲು ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಾಮಫಲಕಗಳಲ್ಲಿ ಕನ್ನಡ ಬಳಕೆ ಕುರಿತು ಗುರುವಾರ ಉನ್ನತ ಮಟ್ಟದ ಸಭೆ ನಡೆಸಿದರು. ಬಳಿಕ ಮಾತನಾಡಿದ ಅವರು, 'ನಾಮಫಲಕಗಳಲ್ಲಿ ಕನ್ನಡ ಕಡ್ಡಾಯಗೊಳಿಸಲು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ ಹೊರಡಿಸಲಾಗುವುದು. ಕಾಯ್ದೆಯ ಸೆಕ್ಷನ್ 17 (6)ಕ್ಕೆ ತಿದ್ದುಪಡಿ ತಂದು ಅಧಿಸೂಚನೆ ಹೊರಡಿಸಲು ಮತ್ತು ನಿಯಮಗಳನ್ನು ರೂಪಿಸಲು ತಕ್ಷಣ ಕ್ರಮ ಕೈಗೊಳ್ಳಲಾಗುವುದು' ಎಂದರು.

4ನೇ ಪುಟ ನೋಡಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ಸಭೆಯಲ್ಲಿ ವಿವರಣೆ ನೀಡಿದರು

ಆಸ್ತಿಪಾಸ್ತಿಗೆ ಹಾನಿ ಸಹಿಸಲ್ಲ– ಡಿಕೆಶಿ

'ಕನ್ನಡ ಉಳಿಸಿ, ಬೆಳೆಸುವ ಹೋರಾಟಕ್ಕೆ ಅಭ್ಯಂತರವಿಲ್ಲ. ಆದರೆ, ಹೋರಾಟದ ಹೆಸರಿನಲ್ಲಿ ಆಸ್ತಿಗೆ ಹಾನಿ ಮಾಡುವುದನ್ನು ಸಹಿಸುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದರು.

'ನಾಮಫಲಕ ಶೇ 60ರಷ್ಟು ಕನ್ನಡದಲ್ಲಿರಬೇಕು ಎನ್ನುವುದನ್ನು ಕೇಳಲು ಇತಿಮಿತಿ ಇದೆ. ಹಿಂದೆ ಯಾರೋ ದೂರು ನೀಡಿದ್ದರು ಎಂದು ಕರವೇ ಅಧ್ಯಕ್ಷ ನಾರಾಯಣಗೌಡರ ಮೇಲೆ ಪ್ರಕರಣ ದಾಖಲಾದಾಗ, ಅವರ ವಿರುದ್ಧ ಪ್ರಕರಣ ದಾಖಲಿಸುವುದು ಸರಿಯಲ್ಲ ಎಂದು ಪೊಲೀಸ್ ಅಧಿಕಾರಿಗಳ ಜತೆ ನಾನೇ ಮಾತನಾಡಿದ್ದೆ. ಕನ್ನಡ ಭಾಷೆ ಕಡ್ಡಾಯಕ್ಕೆ ನೋಟಿಸ್ ನೀಡೋಣ. ಆದರೆ, ಕಾನೂನು ಕೈಗೆತ್ತಿಕೊಳ್ಳಬಾರದು. ನಾರಾಯಣಗೌಡರಿಗೆ ಈ ಮಾತನ್ನು ಇವತ್ತೂ ಹೇಳುತ್ತೇನೆ, ಮುಂದೆಯೂ ಹೇಳುತ್ತೇನೆ' ಎಂದರು.

ಒಳ ಪುಟಗಳು



ಮಲದ ಗುಂಡಿ ಸ್ವಚ್ಛತೆಗೆ ಮಕ್ಕಳು: ಮತ್ತಿಬ್ಬರ ಬಂಧನ

ಕೋಲಾರ: ಮಾಲೂರು ತಾಲ್ಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಲದ ಗುಂಡಿ ಸ್ವಚ್ಛತೆಗೆ ಮಕ್ಕಳನ್ನು ಇಳಿಸಿದ್ದ ಪ್ರಕರಣ-ದಲ್ಲಿ ಪೊಲೀಸರು ಮತ್ತಿಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. 4

ಕತಾರ್: ಮರಣದಂಡನೆಯಿಂದ 8 ಮಂದಿ ಭಾರತೀಯರು ಪಾರು

ನವದೆಹಲಿ (ಪಿಟಿಐ): ಭಾರತೀಯ ನೌಕಾಪಡೆಯ ಎಂಟು ಮಾಜಿ ಅಧಿಕಾರಿಗಳಿಗೆ ಬೇಹುಗಾರಿಕೆ ನಡೆಸಿದ ಪ್ರಕರಣದಲ್ಲಿ ವಿಧಿಸಲಾಗಿದ್ದ ಮರಣ ದಂಡನೆಯನ್ನು ಕತಾರ್ ಮೇಲ್ಮನವಿ ನ್ಯಾಯಾಲಯವು ರದ್ದು ಮಾಡಿದೆ. ಶಿಕ್ಷೆಯ ಪ್ರಮಾಣವನ್ನು ಈಗ ಕಡಿಮೆ ಮಾಡಲಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಇಸ್ರೇಲ್‌ಗಾಗಿ ಬೇಹುಗಾರಿಕೆ ನಡೆಸಿದ ದಹ್ರಾ ಗ್ಲೋಬಲ್ ಪ್ರಕರಣದಲ್ಲಿ, 2022ರ ಆಗಸ್ಟ್‌ನಲ್ಲಿ ವಶಕ್ಕೆ ಪಡೆದಿದ್ದ ಎಂಟು ಮಂದಿಗೆ ವಿಚಾರಣಾ ನ್ಯಾಯಾಲಯವು ಈ ವರ್ಷದ ಅಕ್ಟೋಬರ್‌ನಲ್ಲಿ ಮರಣ ದಂಡನೆ ವಿಧಿಸಿತ್ತು. ಇವರು ದೋಹಾ ಮೂಲದ ಅಲ್ ದಹ್ರಾ ಗ್ಲೋಬಲ್ ಟೆಕ್ನಾಲಜೀಸ್ ಕಂಪನಿಯಲ್ಲಿ ನೌಕರರಾಗಿದ್ದರು. ಇದು ಕತಾರ್‌ನ ಸಶಸ್ತ್ರ ಪಡೆಗಳು ಮತ್ತು ಭದ್ರತಾ ಏಜೆನ್ಸಿಗಳಿಗೆ ತರಬೇತಿ ಹಾಗೂ ಇತರ ಸೇವೆಗಳನ್ನು ಒದಗಿಸುತ್ತಿತ್ತು.

ಮಾಜಿ ಅಧಿಕಾರಿಗಳ ಮೇಲಿನ ಆರೋಪಗಳು ಏನು ಎಂಬುದನ್ನು ಕತಾರ್ ಅಧಿಕಾರಿಗಳು ಬಹಿರಂಗಪಡಿಸಿಲ್ಲ. ಭಾರತ ಸರ್ಕಾರವು ಶಿಕ್ಷೆ ಪ್ರಶ್ನಿಸಿ ಕಳೆದ ತಿಂಗಳು ಕತಾರ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿತ್ತು.

ತೀರ್ಪಿನ ವಿವರದ ಪ್ರತಿ ಇನ್ನೂ ಬಿಡುಗಡೆಯಾಗದಿರುವ ಕಾರಣ, ದೀರ್ಘಾವಧಿ ಶಿಕ್ಷೆಯಾಗಿ ಪರಿವರ್ತಿಸಲಾಗಿದೆಯೇ ಅಥವಾ ಯಾವ ಮಟ್ಟಿಗೆ ಶಿಕ್ಷೆ ಪ್ರಮಾಣ ತಗ್ಗಿಸಲಾಗಿದೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ.

ಕ್ಯಾಪ್ಟನ್ ನವತೇಜ್ ಗಿಲ್, ಕ್ಯಾಪ್ಟನ್ ಸೌರಭ್ ವಸಿಷ್ಠ, ಕಮಾಂಡರ್‌ಗಳಾದ ಪೂರ್ಣೇಂದು ತಿವಾರಿ, ಅಮಿತ್ ನಾಗಪಾಲ್, ಎಸ್.ಕೆ. ಗುಪ್ತಾ, ಬೀರೇಂದ್ರ ಕುಮಾರ್ ವರ್ಮಾ, ಸುಗುಣಕರ್ ಪಕಾಲಾ ಮತ್ತು ನಾವಿಕ ರಾಗೇಶ್ ಅವರು ಶಿಕ್ಷೆಗೆ ಒಳಗಾಗಿದ್ದ ಅಧಿಕಾರಿಗಳು.

ಪ್ರಮುಖಾಂಶಗಳು

- 2015ರಲ್ಲಿ ಭಾರತ ಮತ್ತು ಕತಾರ್ ಒಪ್ಪಂದಕ್ಕೆ ಸಹಿ ಹಾಕಿದ್ದು, ಜೈಲು ಶಿಕ್ಷೆಗೆ ಗುರಿಯಾದವರು ಸ್ವದೇಶದಲ್ಲಿ ಶಿಕ್ಷೆ ಪೂರ್ಣಗೊಳಿಸಲು ಇದು ಅವಕಾಶ ನೀಡುತ್ತದೆ
- ಶಿಕ್ಷೆಗೊಳಗಾದ ವ್ಯಕ್ತಿಗೆ ಮರಣ ದಂಡನೆ ವಿಧಿಸದಿದ್ದರೆ ಶಿಕ್ಷೆಗೊಳಗಾದ ವ್ಯಕ್ತಿಯನ್ನು ಸ್ವದೇಶಕ್ಕೆ ಕಳುಹಿಸಬಹುದು. ಆದರೆ, ತೀರ್ಪು ಅಂತಿಮ.
- ಈ ಒಪ್ಪಂದವು ಜೀವಾವಧಿ ಶಿಕ್ಷೆ ವಿಧಿಸಲಾದ ವ್ಯಕ್ತಿಗಳಿಗೂ ಅನ್ವಯ

10 ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ




ಕೆರೆ, ರಾಜಕಾಲುವೆ ಒತ್ತುವರಿ ಆರೋಪ: ಹೈಕೋರ್ಟ್ ಆದೇಶ

ರವಿಶಂಕರ್ ಗುರೂಜಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆ ಮತ್ತು ಕೆರೆ ಒತ್ತುವರಿ ಮಾಡಿ ಅಪಾರ್ಟ್‌ಮೆಂಟ್ ನಿರ್ಮಾಣ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಆರ್ಟ್ ಆಫ್ ಲಿವಿಂಗ್ ಆಶ್ರಮದ ಶ್ರೀ ಶ್ರೀ ರವಿಶಂಕರ ಗುರೂಜಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರು ದಕ್ಷಿಣ ತಾಲ್ಲೂಕಿನ ಉಡಿಪಾಳ್ಯದ ಎನ್. ಚಂದ್ರಶೇಖರ್ ಮತ್ತು ಬಿ.ಮಹೇಶ್ ಹಾಗೂ ಸಾಲುಣಸೆಯ ಎಚ್.ಎಸ್. ಮಂಜುನಾಥ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಆರ್. ನಟರಾಜ್ ಮತ್ತು ಕೆ.ವಿ.



ಅರವಿಂದ ಅವರಿದ್ದ ರಜಾಕಾಲದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ರಾಜ್ಯ ಸರ್ಕಾರದ ಕಂದಾಯ ಇಲಾಖೆ ಕಾರ್ಯದರ್ಶಿ, ಬಿಎಂಟಿಎಫ್, ಮೆಸರ್ಸ್ ಸುಮೇರು ಗ್ಲೋಬಲ್ ಸಪೋರ್ಟ್ ಸಲ್ಯೂಷನ್ ಪ್ರೈವೆಟ್ ಲಿಮಿಟೆಡ್ ಕಂಪನಿಯೂ ಸೇರಿದಂತೆ ಪ್ರಕರಣದ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಅರ್ಜಿದಾರರ ಆರೋಪದ ಬಗ್ಗೆ ನಿಲುವು ತಿಳಿಸುವಂತೆ ಸರ್ಕಾರಕ್ಕೆ ಸೂಚಿಸಿ ವಿಚಾರಣೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: 'ಬೆಂಗಳೂರು ನಗರ ಜಿಲ್ಲೆಯ, ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಕಗ್ಗಲೀಪುರ ಗ್ರಾಮದ ಸರ್ವೆ ನಂಬರ್ 160, 164/1, 164/2, 150, 137, 135 ಮತ್ತು 46ರ ಸ್ಥಿರ ಸ್ವತ್ತನ್ನು ಪ್ರತಿವಾದಿ 'ಆರ್ಟ್ ಆಫ್ ಲಿವಿಂಗ್'ನ ಶ್ರೀ ಶ್ರೀ ರವಿಶಂಕರ್ ಗುರೂಜಿ ಒತ್ತುವರಿ ಮಾಡಿದ್ದಾರೆ. ಸರ್ಕಾರಿ ಜಾಗ, ಕೆರೆ, ರಾಜಕಾಲುವೆ, ನೀರು ಹರಿಯುವ ಹಳ್ಳ ಹಾಗೂ ಇತರೆ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ವಸತಿ ಸಮುಚ್ಚಯ ಹಾಗೂ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ. ಇವುಗಳ ತೆರವಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಪೊಲೀಸರಿಗೆ ನೀಡಿದ ದೂರುಗಳ ಕುರಿತಂತೆ ಯಾವುದೇ ಕ್ರಮ ಜರುಗಿಸಿಲ್ಲ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.



'ಈ ಕಟ್ಟಡಗಳನ್ನು ತೆರವುಗೊಳಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದ್ದಾರೆ. 'ಈ ಅರ್ಜಿ ವಿಲೇವಾರಿ ಆಗುವತನಕ ಅಪಾರ್ಟ್‌ಮೆಂಟ್‌ಗಳ ಮಾರಾಟ, ಗುತ್ತಿಗೆ ಅಥವಾ ಬಾಡಿಗೆಗೆ ನೀಡದಂತೆ ನಿರ್ದೇಶಿಸಬೇಕು' ಎಂದು ಮಧ್ಯಂತರ ಮನವಿ ಮಾಡಿದ್ದಾರೆ.

ಎಲ್. ಹನುಮಂತಯ್ಯಗೆ 'ಕನ್ನಡ ತೇಜಸ್ ಪ್ರಶಸ್ತಿ'


ಹನುಮಂತಯ್ಯ

ಬೆಂಗಳೂರು: ತೇಜಸ್ ಕನ್ನಡ ಸಂಘ ನೀಡುವ 'ಕನ್ನಡ ತೇಜಸ್ ಪ್ರಶಸ್ತಿ'ಗೆ ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹ 10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ (ಎಚ್.ಎ.ಎಲ್) ಈ ಸಂಸ್ಥೆ ದಶಮಾನೋತ್ಸವದ ಸ್ಮರಣಾರ್ಥ ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಗಣನೀಯ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ನೀಡುತ್ತಿದೆ. ಜ.7ರಂದು ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಡಾ.ವಿ.ಎಂ. ಘಾಟ್ಗೆ ಸಭಾಂಗಣದಲ್ಲಿ ಸಮಾರಂಭ ನಡೆಯಲಿದ್ದು, ಈ ವೇಳೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಘದ ಅಧ್ಯಕ್ಷ ಚಂದ್ರಶೇಖರಯ್ಯ ಎಂ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಐಡಿ ಹೆಗಲಿಗೆ ತನಿಖೆ ಹೊಣೆ

ಚನ್ನಪಟ್ಟಣ (ರಾಮನಗರ): ತಾಲ್ಲೂಕಿನ ವಡ್ಡರದೊಡ್ಡಿಯ ತೋಟದ ಮನೆಯಲ್ಲಿ ಡಿ. 10ರಂದು ನಡೆದಿದ್ದ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಭಾವ ಮಹದೇವಯ್ಯ ಕೊಲೆ ಪ್ರಕರಣದ ತನಿಖೆಯನ್ನು ಸಿಐಡಿಗೆ ಒಪ್ಪಿಸಲಾಗಿದೆ.

ಆದೇಶದ ಹಿಂದೆಯೇ ಸಿಐಡಿ ಡಿವೈಎಸ್‌ಪಿ ಎಚ್.ಪಿ. ಕುಲಕರ್ಣಿ ನೇತೃತ್ವದ ತಂಡ ಗುರುವಾರ ಚನ್ನಪಟ್ಟಣಕ್ಕೆ ಭೇಟಿ ನೀಡಿತ್ತು. ಪ್ರಕರಣ ಸಂಬಂಧಿತ ಕಡತಗಳನ್ನು ಪಡೆದುಕೊಂಡಿದ್ದು, ಬಂಧಿತ ಆರೋಪಿ ಗಣದ ಮುದುಗೇಶನ್, ಪತ್ನಿ ರಾಧಾ ಪ್ರಭಾಕರ್, ಮದನ್‌ಕುಮಾರ್ ಅವರನ್ನು ಸಿಐಡಿ ಅಧಿಕಾರಿಗಳ ತಂಡ ಕೋರ್ಟ್ ಅನುಮತಿ ಮೇರೆಗೆ ಮೂರು ದಿನ ವಶಕ್ಕೆ ಪಡೆದಿದೆ. ಎಲ್ಲರನ್ನೂ ವಿಚಾರಣೆಗೆ ಒಳಪಡಿಸಿದೆ.

ನಿರೀಕ್ಷೆ ಹಲವು: ಗುರಿ ತಲುಪಿದ್ದು ಕೆಲವು

• ಬಾಲಕೃಷ್ಣ ಪಿ.ಎಚ್.



ಬೆಂಗಳೂರು: ನಗರದ ಜನದಟ್ಟಣೆಯನ್ನು ಕಡಿಮೆಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಮೆಟ್ರೊ ನೇರಳೆ ಮಾರ್ಗ ವೈಟ್‌ಫೀಲ್ಡ್‌ವರೆಗೆ ವಿಸ್ತರಣೆಗೊಂಡಿರುವುದು ಈ ವರ್ಷದ ಮಹತ್ವದ ಬೆಳವಣಿಗೆ. ಆದರೆ, ನಿರೀಕ್ಷಿತ ವೇಗದಲ್ಲಿ ಕಾಮಗಾರಿ ನಡೆಯದ ಕಾರಣ ಹಳದಿ ಮಾರ್ಗ ಡಿಸೆಂಬರ್ ಒಳಗೆ ಪೂರ್ಣಗೊಂಡಿಲ್ಲ. ಈ ಮಾರ್ಗ ಪೂರ್ಣಗೊಳ್ಳಲು ಇನ್ನೂ ಆರು ತಿಂಗಳು ಬೇಕಾಗಿದೆ.

ನೇರಳೆ ಮಾರ್ಗದಲ್ಲಿ ಕೆಂಗೇರಿ- ಚಲ್ಲಘಟ್ಟ ನಡುವಿನ ತೊಡಕು ನಿವಾರಣೆಗೊಂಡು ಮೆಟ್ರೊ ಸಂಪರ್ಕ ಏರ್ಪಟ್ಟಿದೆ. ಹಸಿರು ಮಾರ್ಗದಲ್ಲಿ ನಾಗಸಂದ್ರದಿಂದ ಮಾದಾವರದವರೆಗೆ ವಿಸ್ತರಿಸುವ ಕಾಮಗಾರಿ ಕುಂಟುತ್ತಾ ಸಾಗಿದೆ. 2024ರಲ್ಲಿ ಪೂರ್ಣಗೊಂಡು ಸಂಚಾರ ಆರಂಭವಾಗುವ ಸಾಧ್ಯತೆ ಇದೆ.

'ಶಕ್ತಿ' ಯೋಜನೆ ಜಾರಿಯಾಗಿ ಬಿಎಂಟಿಸಿಯಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವುದು ಈ ವರ್ಷದ ದೊಡ್ಡ ಬದಲಾವಣೆ. ಅಲ್ಲದೇ ಮೆಟ್ರೊ ನಿಲ್ದಾಣಗಳಿಗೆ ಫೀಡರ್‌ಬಸ್‌ಗಳನ್ನು ಒದಗಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲಾಗಿದೆ. ಅಧಿಕಾರಿಗಳು, ಸಿಬ್ಬಂದಿ ಲಂಚ ಸಹಿತ ವಿವಿಧ ಕಾರಣಕ್ಕೆ ಅಮಾನತಾಗಿರುವುದು ಕಪ್ಪುಚುಕ್ಕೆ. ಕೆಎಸ್‌ಆರ್‌ಟಿಸಿ ಟ್ರಕ್‌ಗಳನ್ನು ಖರೀದಿಸಿ ಪಾರ್ಸೆಲ್ ಕ್ಷೇತ್ರದಲ್ಲಿ ಹೊಸ ಪ್ರಯೋಗಕ್ಕೆ ಮುಂದಾಗಿದೆ. ಇವುಗಳ ಜೊತೆಗೆ, 2023ರಲ್ಲಿ ಮಹಾನಗರದ ಸಾರಿಗೆ ವಿಭಾಗಗಳಲ್ಲಿ ನಡೆದ ಪ್ರಮುಖ ಬೆಳವಣಿಗೆಗಳ ಹಿನ್ನೋಟ ಇಲ್ಲಿದೆ.

- **ಜ.13:** ಬ್ರಿಗೇಡ್ ರಸ್ತೆಯಲ್ಲಿ ಮೆಟ್ರೊ ಸುರಂಗ ಮಾರ್ಗದ ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ದಿಢೀರ್ ರಸ್ತೆ ಕುಸಿಯಿತು. ಬೈಕ್ ಸವಾರ ಗಾಯಗೊಂಡಿದ್ದರು. ದೊಡ್ಡ ಮಟ್ಟದ ಅಪಾಯ ಸ್ವಲ್ಪದರಲ್ಲೇ ತಪ್ಪಿತ್ತು.
- **ಫೆ.15:** ಗೊಟ್ಟಿಗೆರೆ-ನಾಗವಾರ ಮೆಟ್ರೊ ರೈಲು ಮಾರ್ಗದ ಸುರಂಗ ಕೊರೆಯುವ ಕಾಮಗಾರಿ ಪೂರ್ಣಗೊಂಡಿದ್ದು, ಎಂ.ಜಿ.ರಸ್ತೆಯಿಂದ ಕಾಮಗಾರಿ ಆರಂಭಿಸಿದ್ದ ಸುರಂಗ ಕೊರೆಯುವ ಯಂತ್ರ(ಟಿಬಿಎಂ) 'ಲಾವಿ' ರಾಷ್ಟ್ರೀಯ ಮಿಲಿಟರಿ ಶಾಲೆ ನಿಲ್ದಾಣದ (ವೆಲ್ಲಾರ ಜಂಕ್ಷನ್) ಬಳಿ ಹೊರಬಂತು.
- **ಮಾ.25:** ಕೆ.ಆರ್.ಪುರ-ವೈಟ್‌ಫೀಲ್ಡ್ ನಡುವಿನ ಮೆಟ್ರೊ ರೈಲು ಮಾರ್ಗಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು. ಬಳಿಕ ವೈಟ್ ಫೀಲ್ಡ್‌ನಿಂದ ಸತ್ಯಸಾಯಿ ಹಾಸ್ಪಿಟಲ್‌ವರೆಗೆ ಮೆಟ್ರೊ ರೈಲಿನಲ್ಲಿ ಪ್ರಯಾಣ ಮಾಡಿದರು.
- **ಮೇ.4:** 'ನಮ್ಮ ಮೆಟ್ರೊ' ನೇರಳೆ ಮಾರ್ಗದ ಬೈಯಪ್ಪನಹಳ್ಳಿಯಲ್ಲಿ ಎಲೆಕ್ಟ್ರಿಕ್ ಸಿಗ್ನಲ್‌ನಿಂದ ಅರ್ಧ ದಿನ ರೈಲು ಸಂಚಾರ ಸ್ಥಗಿತಗೊಂಡಿತು. ಇದರಿಂದ ಪ್ರಯಾಣಿಕರು ಪರದಾಡಿದರು.
- **ಆ.30:** ಲಕ್ಕಸಂದ್ರದಿಂದ ಲ್ಯಾಂಗ್‌ಫೋರ್ಡ್ ಟೌನ್ ನಿಲ್ದಾಣದವರೆಗಿನ ಮೆಟ್ರೊ ರೈಲು ಮಾರ್ಗಕ್ಕಾಗಿ ಸುರಂಗ ಕೊರೆಯುವ ಕಾರ್ಯವನ್ನು 'ವಮಿಕ' ಪೂರ್ಣಗೊಳಿಸಿತು.
- **ಅ.3:** ರಾಜಾಜಿನಗರ ಸಮೀಪ (ನವರಂಗ್ ವೃತ್ತ) 'ನಮ್ಮ ಮೆಟ್ರೊ'ದ ಹಸಿರು ಮಾರ್ಗದಲ್ಲಿ ಆರ್.ಆರ್.ವಿ (ರೋಡ್ ಕಂ ರೈಲು ವೆಹಿಕಲ್) ಹಳಿ ತಪ್ಪಿದ ಪರಿಣಾಮ, ಈ ಮಾರ್ಗದಲ್ಲಿ ಸಂಚಾರ ವ್ಯತ್ಯಯ ಉಂಟಾಯಿತು.


ರಾಜಾಜಿನಗರ ಸಮೀಪ 'ನಮ್ಮ ಮೆಟ್ರೊ'ದ ಹಸಿರು ಮಾರ್ಗದಲ್ಲಿ ಹಳಿ ತಪ್ಪಿದ ರಸ್ತೆ ರೈಲು ವಾಹನವನ್ನು ಸಿಬ್ಬಂದಿ ತೆರವುಗೊಳಿಸಿದರು.


ವೈಟ್‌ಫೀಲ್ಡ್–ಕೆ.ಆರ್‌.ಪುರ ಮೆಟ್ರೊ ರೈಲು ಸಂಚಾರಕ್ಕೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ಮೆಟ್ರೊ ಕೆಲಸ ಮಾಡಿದ ಕಾರ್ಮಿಕರೊಂದಿಗೆ ಮೆಟ್ರೊದಲ್ಲಿ ಪ್ರಯಾಣಿಸಿದರು.

- **ಅ.9:** ನೇರಳೆ ಮಾರ್ಗದಲ್ಲಿ ಬೈಯಪ್ಪನ ಹಳ್ಳಿ–ಕೆ.ಆರ್. ಪುರ ನಡುವೆ 2.10 ಕಿ.ಮೀ. ಕಾಮಗಾರಿ ಪೂರ್ಣಗೊಳ್ಳದೇ ಇದ್ದಿದ್ದರಿಂದ ನೇರ ಸಂಪರ್ಕ ಇಲ್ಲದೇ ತೊಡಕಾಗಿತ್ತು. ಬೈಯಪ್ಪನಹಳ್ಳಿವರೆಗೆ ಮೆಟ್ರೊದಲ್ಲಿ ತೆರಳಿ, ಅಲ್ಲಿ ಇಳಿದು ಎರಡು ಕಿ.ಮೀ. ಬಸ್‌ನಲ್ಲಿ ತೆರಳಿ ಕೆ.ಆರ್.ಪುರದಲ್ಲಿ ಮತ್ತೆ ಮೆಟ್ರೊ ಹಿಡಿಯಬೇಕಿತ್ತು. ನಂತರ ಕಾಮಗಾರಿ ಪೂರ್ಣಗೊಳಿಸಿ ಉದ್ಘಾಟನೆ ಇಲ್ಲದೆಯೇ ಮೆಟ್ರೊ ಚಾಲನೆ ಶುರುವಾಯಿತು. ಅಂದೇ ಕೆಂಗೇರಿ–ಚಲ್ಲಘಟ್ಟ ನಡುವಿನ ವಿಸ್ತರಿತ ಮಾರ್ಗದಲ್ಲಿಯೂ ರೈಲು ಸಂಚಾರ ಆರಂಭವಾಯಿತು.
- **ಅ.26:** ಲಕ್ಕಸಂದ್ರದಿಂದ ಲ್ಯಾಂಗ್‌ಫೋರ್ಡ್ ನಿಲ್ದಾಣದವರೆಗಿನ 718 ಮೀಟರ್ ಮೆಟ್ರೊ ಸುರಂಗ ಮಾರ್ಗ ಕೊರೆಯುವ ಕಾರ್ಯವನ್ನು 'ರುದ್ರ' ಯಂತ್ರ ಪೂರ್ಣಗೊಳಿಸಿತು.
- **ನ.23:** 'ನಮ್ಮ ಮೆಟ್ರೊ' ರೈಲಿನಲ್ಲಿ ಭಿಕ್ಷೆ ಬೇಡುತ್ತಿದ್ದ ಯುವಕನಿಗೆ ಬಿಎಂಆರ್‌ಸಿಎಲ್ ಭದ್ರತಾ ಸಿಬ್ಬಂದಿ ₹ 500 ದಂಡ ವಿಧಿಸಿದರು. ಮೆಟ್ರೊದಲ್ಲಿ ಭಿಕ್ಷೆ ಬೇಡಿದ ಮೊದಲ ಪ್ರಕರಣ ಇದಾಗಿದೆ.
- **ಡಿ.6:** ವೆಂಕಟೇಶಪುರ ನಿಲ್ದಾಣದಿಂದ –ಕಾಡುಗೊಂಡನಹಳ್ಳಿ ನಿಲ್ದಾಣ-ವರೆಗಿನ 1.18 ಕಿ.ಮೀ(1184.4 ಮೀಟರ್) ಮೆಟ್ರೊ ಸುರಂಗ ಮಾರ್ಗ ಕೊರೆಯುವ ಕಾರ್ಯವನ್ನು 'ತುಂಗಾ' ಯಂತ್ರ ಪೂರ್ಣಗೊಳಿಸಿತು.
- **ಡಿ.16:** ಪೀಣ್ಯ ಇಂಡಸ್ಟ್ರಿಯಲ್ ಮೆಟ್ರೊ ನಿಲ್ದಾಣದ ಸಿಗ್ನಲಿಂಗ್‌ನಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿದ್ದರಿಂದ ಮೆಟ್ರೊ ಹಸಿರು ಮಾರ್ಗದಲ್ಲಿ ಯಶವಂತಪುರದಿಂದ ನಾಗ-ಸಂದ್ರವರೆಗೆ ರೈಲು ಸಂಚಾರ ಅರ್ಧ ಗಂಟೆ ಸ್ಥಗಿತಗೊಂಡಿತು.

ಕೆಎಸ್‌ಆರ್‌ಟಿಸಿ ವಿಶೇಷ

- **ಜೂನ್ 11:** ಕೆಎಸ್‌ಆರ್‌ಟಿಸಿ ಸೇರಿದಂತೆ ಎಲ್ಲ ನಿಗಮಗಳ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ನೀಡುವ 'ಶಕ್ತಿ' ಯೋಜನೆಯನ್ನು ಜಾರಿ ಮಾಡಲಾಯಿತು.
- **ಡಿ.15:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 'ಕೆಎಸ್‌ಆರ್‌ಟಿಸಿ' ಸಂಕ್ಷೇಪಣಾ ಗುರುತು ಬಳಸಬಾರದು ಎಂದು ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಲ್ಲಿಸಿದ ಮನವಿಯನ್ನು ಮದ್ರಾಸ್ ಹೈಕೋರ್ಟ್ ವಜಾಗೊಳಿಸಿತು. ಕೆಎಸ್‌ಆರ್‌ಟಿಸಿ ಎಂದು ಬಳಸುವುದನ್ನು ಮುಂದುವರಿಸಲು ಕಾನೂನಿನ ತೊಡಕು ಇಲ್ಲದಂತಾಯಿತು.
- **ಡಿ.23:** ಕೆಎಸ್‌ಆರ್‌ಟಿಸಿ 'ನಮ್ಮ ಕಾರ್ಗೋ-ಟ್ರಕ್ ಸೇವೆ' ಯೋಜನೆ ಆರಂಭಿಸಿತು.


ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣಿಸಿ ಜನರೊಂದಿಗೆ ಸಂವಾದ ನಡೆಸಿದರು

ಬಿಎಂಟಿಸಿಯಲ್ಲಿ ಹೆಚ್ಚಿದ ಅಮಾನತು


ಬಿಎಂಟಿಸಿಗೆ ರಸ್ತೆಗಿಳಿಸಿದ ಎಲೆಕ್ಟ್ರಿಕ್ ಬಸ್

- **ಜ.27:** ಮೂವರು ಐಎಎಸ್ ಅಧಿಕಾರಿಗಳ ಸಹಿಯನ್ನು ಬಿಎಂಟಿಸಿಯ ಹಿರಿಯ ಅಧಿಕಾರಿಗಳೇ ನಕಲು ಮಾಡಿ ಟೆಂಡರ್ ನವೀಕರಣ ಮಾಡಿ ಕೋಟ್ಯಂತರ ರೂಪಾಯಿ ವಂಚಿಸಿರುವುದು ಬೆಳಕಿಗೆ ಬಂದಿತ್ತು.
- **ಮಾ.12:** ದೇಶದಲ್ಲಿ ಮೊದಲ ಮಿಥೆನಾಲ್ ಮಿಶ್ರಿತ ಇಂಧನ ಆಧಾರಿತ ಬಸ್‌ಗಳ ಸಂಚಾರವನ್ನು ಬಿಎಂಟಿಸಿ ಆರಂಭಿಸಿದ್ದು, ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಚಾಲನೆ ನೀಡಿದರು.
- **ಮೇ 8:** ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರಕ್ಕೆ ರಾಜ್ಯಕ್ಕೆ ಬಂದಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಬಿಎಂಟಿಸಿ ಬಸ್ಸಿನಲ್ಲಿ ಜನಸಾಮಾನ್ಯರ ಜೊತೆ ಪ್ರಯಾಣಿಸಿ ಅಚ್ಚರಿ ಮೂಡಿಸಿದರು.
- **ಆ.15:** ಕೆಎಸ್‌ಆರ್‌ಟಿಸಿಯಿಂದ ಪ್ರತ್ಯೇಕಗೊಂಡು 'ಬಿಎಂಟಿಸಿ' ಉದಯವಾಗಿ 25 ವರ್ಷಗಳನ್ನು ಪೂರೈಸಿತು.
- **ಅ.3:** ಚಾಲಕರು ಹಾಗೂ ನಿರ್ವಾಹಕರಿಂದ ಆನ್‌ಲೈನ್ ಮೂಲಕ ಲಂಚ ಪಡೆದಿದ್ದ ಬಿಎಂಟಿಸಿಯ ಘಟಕ 33ರ ಏಳು ಮಂದಿಯನ್ನು ಅಮಾನತು ಮಾಡಲಾಯಿತು.
- **ಅ.7:** ಬಿಎಂಟಿಸಿ ಚಾಲನಾ ಸಿಬ್ಬಂದಿಯಿಂದ ಲಂಚ ಪಡೆದ ಆರೋಪದ ಮೇಲೆ ಬಿಎಂಟಿಸಿ ಬನಶಂಕರಿ ಘಟಕದ (20ನೇ ಘಟಕ) 10 ಮಂದಿಯನ್ನು ಅಮಾನತು ಮಾಡಲಾಯಿತು.
- **ಡಿ.26:** ಬಿಎಂಟಿಸಿಯ 100 ವಿದ್ಯುತ್ ಚಾಲಿತ ಬಸ್‌ಗಳಿಗೆ ಚಾಲನೆ ನೀಡಲಾಯಿತು.

ನಗರದಲ್ಲಿ ಇಂದು

ರಾಷ್ಟ್ರಕವಿ ಕುವೆಂಪು ಜಯಂತಿ


ಕುವೆಂಪು ಪ್ರತಿಮೆಗೆ ಮಾಲಾರ್ಪಣೆ: ಅಧ್ಯಕ್ಷತೆ: ಎ.ಎಸ್. ನಾಗರಾಜಸ್ವಾಮಿ, ಉಪಸ್ಥಿತಿ: ನಲ್ಲೂರು ಪ್ರಸಾದ್ ಆರ್.ಕೆ., ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಸಿ.ಕೆ. ರಾಮೇಗೌಡ, ಎಂ. ಪ್ರಕಾಶಮೂರ್ತಿ, ತಾ.ಸಿ. ತಿಮ್ಮಯ್ಯ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಕುವೆಂಪು ಪ್ರತಿಮೆ, ಲಾಲ್‌ಬಾಗ್ ಪಶ್ಚಿಮದ್ವಾರ, ಬೆಳಿಗ್ಗೆ 8.30

ನವೀಕೃತ ಕುವೆಂಪು ಸಭಾಂಗಣದ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ಟಿ.ಎ. ನಾರಾಯಣಗೌಡ, ಅತಿಥಿ: ವೈ.ಕೆ. ಮುದ್ದುಕೃಷ್ಣ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಕುವೆಂಪು ಜಯಂತಿ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಕೆ. ಮರುಳ ಸಿದ್ಧಪ್ಪ, ಅತಿಥಿಗಳು: ಎಲ್. ಹನುಮಂತಯ್ಯ, ಎಂ. ತಿಮ್ಮಯ್ಯ, ಎಸ್. ಮಹದೇವಯ್ಯ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10

'ಕುವೆಂಪು ವರ್ತಮಾನದ ಓದು' ಕುರಿತು ಉಪನ್ಯಾಸ: ನರಹಳ್ಳಿ ಬಾಲಸುಬ್ರಹ್ಮಣ್ಯ, ಆಯೋಜನೆ ಮತ್ತು ಸ್ಥಳ: ಸುರಾನ ಕಾಲೇಜು, ಸೌತ್‌ಎಂಡ್ ರಸ್ತೆ, ಬೆಳಿಗ್ಗೆ 10.30

'ಕುವೆಂಪು ಅವರ ಸಂಕ್ಷಿಪ್ತ ಜೀವನ ಮತ್ತು ಸಾಹಿತ್ಯ' ಕುರಿತು ಉಪನ್ಯಾಸ: ಎಸ್. ರಾಮಲಿಂಗೇಶ್ವರ, ಉಪಸ್ಥಿತಿ: ಎಸ್.ಟಿ. ನಾರಾಯಣಗೌಡ, ಎಂ.ಆರ್. ಲಕ್ಷ್ಮೀಮನೋಹರ್, ಅಧ್ಯಕ್ಷತೆ: ಎಚ್. ಜಿ. ಬಾಲಗೋಪಾಲ್, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಕಾನೂನು ಮಹಾವಿದ್ಯಾಲಯದ ಆವರಣ, ಗಾಯತ್ರಿನಗರ, ಬೆಳಿಗ್ಗೆ 10.30



ಕುವೆಂಪು ಜನ್ಮದಿನ, ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ 'ಸಂವಿಧಾನ ರಕ್ಷಣೆಗಾಗಿ ಪ್ರಜಾಪ್ರಭುತ್ವ ಉಳಿವಿಗಾಗಿ' ಜಾಗೃತಿ ಸಮಾವೇಶ: ಉದ್ಘಾಟನೆ: ಎಚ್. ಎನ್. ನಾಗಮೋಹನದಾಸ್, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಅತಿಥಿಗಳು: ಕೆ.ಎಂ. ರಾಮಚಂದ್ರಪ್ಪ, ಎಚ್. ಆಂಜನೇಯ, ನಸೀರ್ ಅಹಮದ್, ಇಂದಿರಾ ಕೃಷ್ಣಪ್ಪ, ರವಿಕುಮಾರ್ ಬಾಗಿ, ಶ್ರೀಪಾದ್ ಭಟ್, ರಮೇಶ್ ಡಾಕುಳಗಿ, ಬಿ. ರಾಜಶೇಖರಮೂರ್ತಿ, ನಿರ್ಮಲ, ಮಣಿಪಾಲ್ ರಾಜಪ್ಪ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11

ಕವಿ, ಕಾವ್ಯ, ಗೀತ, ನೃತ್ಯ ಸಂಜೆ: ಉದ್ಘಾಟನೆ: ರಾಜಶೇಖರ ಮಠಪತಿ, ಅಧ್ಯಕ್ಷತೆ: ಶೀಲಾದೇವಿ ಎಸ್. ಮಳೀಮಠ, ಅತಿಥಿಗಳು: ವೈ. ವೆಂಕಟೇಶಪ್ಪ, ಕೆ. ದೇವರಾಜು, ಆಯೋಜನೆ: ರಂಗೋತ್ರಿ ಮಕ್ಕಳ ರಂಗಶಾಲೆ, ಸ್ಥಳ: ಕುಮಾರ್ ಅಂಗಳ, ಗೊಲ್ಲರಹಟ್ಟಿ, ಕೊಡಿಗೇಹಳ್ಳಿ, ಮಾಗಡಿ ರಸ್ತೆ, ಸಂಜೆ 5.30

ವಿಶ್ವಮಾನವ ದಿನಾಚರಣೆ: ಬಹುಮಾನ ವಿತರಣೆ: ಆರ್.ಪಿ. ಮೋಹನ್, ಅತಿಥಿ: ಕೆ.ಸಿ. ಶಿವಾರೆಡ್ಡಿ, ಅಧ್ಯಕ್ಷತೆ: ನರಸಿಂಹ ನಾಯ್ಕ, 'ಬೊಮ್ಮನಹಳ್ಳಿ ಕಿಂದರಿಜೋಗಿ' ನಾಟಕ ಪ್ರದರ್ಶನ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಸಂಜೆ 6

ಕುವೆಂಪು, ಸಿ. ಅಶ್ವತ್ಥ ಅವರಿಗೆ 'ಮನುಜಮತ ವಿಶ್ವಪಥ' ಗೀತ ಗೌರವ: ಅತಿಥಿಗಳು: ಚಲುವರಾಯಸ್ವಾಮಿ, ಜಿ.ಎಸ್. ಸಿದ್ಧಲಿಂಗಯ್ಯ, ಚಂದ್ರ ಅಶ್ವತ್ಥ, ಗಾಯನ: ವೈ.ಕೆ. ಮುದ್ದುಕೃಷ್ಣ, ಮುದ್ದು ಮೋಹನ್, ಕಿಕ್ಕೇರಿ ಕೃಷ್ಣಮೂರ್ತಿ, ನಗರ ಶ್ರೀನಿವಾಸ ಉಡುಪ, ಪ್ರವೀಣ್ ಬಿ.ವಿ., ನಿತಿನ್ ರಾಜಾರಾಂ ಶಾಸ್ತ್ರಿ, ಎಂ.ಡಿ. ಪಲ್ಲವಿ, ಸುನೀತಾ ಮುರಳಿ, ನಾಗಚಂದ್ರಿಕಾ ಭಟ್, ಶಶಿಕಲಾ ಸುನೀಲ್, ಪೂರ್ಣಿಮಾ, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ: ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 6

ಆಯೋಜನೆ: ಉದಯಭಾನು ಕಲಾಸಂಘ, ನುಡಿನಮನ: ಜಿ.ಬಿ. ಹರೀಶ, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಸಂಜೆ 6

ಪೂರ್ಣಚಂದ್ರ ತೇಜಸ್ವಿ ಅವರ 'ಅಣ್ಣನ ನೆನಪು' ಸಾಕ್ಷ್ಯ ನಾಟಕ ಪ್ರದರ್ಶನ: ರಂಗರೂಪ: ಕರಣಂ ಪವನ್ ಪ್ರಸಾದ್, ಸಂಗೀತ: ಅಕ್ಷಯ್ ಭೊಂಸ್ಲೆ, ನಿರ್ದೇಶನ: ಹನು ರಾಮಸಂಜೀವ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7

***

ಹಿಮವತ್ ಕೇದಾರ ಜಗದ್ಗುರುಗಳ ಸಂಗೀತಯುಕ್ತ ಇಷ್ಟಲಿಂಗ ಪೂಜೆ: ಸಾನ್ನಿಧ್ಯ: ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ, ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಬಸವರಾಜೇಂದ್ರ, ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ದಿನದರ್ಶಿಕೆ ಬಿಡುಗಡೆ: ಯು.ಬಿ. ವೆಂಕಟೇಶ್, ಅತಿಥಿಗಳು: ವಿ. ಸೋಮಣ್ಣ, ಶಿವರಾಜು ಪಿ., ಗಂಗಾಂಬಿಕೆ ಮಲ್ಲಿಕಾರ್ಜುನ, ಚಂದನ್ ಶರ್ಮ, ಸ್ಥಳ: ನಿಜಗುಣ ಕಲ್ಯಾಣ ಮಂಟಪ, ದೊಡ್ಡಗಣೇಶ ದೇವಸ್ಥಾನದ ಎದುರು, ಬಸವನಗುಡಿ, ಬೆಳಿಗ್ಗೆ 8ರಿಂದ

ದಾಸಗಾನ ವೈವಿಧ್ಯ: ಉದ್ಘಾಟನೆ: ಗೋಪಿ, ಅತಿಥಿಗಳು: ಸತೀಶ್ ಹಂಪಿಹೊಳಿ, ರೇಣುಕಾ ಪ್ರಸನ್ನ, ಅಧ್ಯಕ್ಷತೆ: ಬಂಡ್ಲಹಳ್ಳಿ ವಿಜಯಕುಮಾರ್, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 10

8ನೇ ಘಟಿಕೋತ್ಸವ: ಅತಿಥಿಗಳು: ಜೆ.ಎನ್. ರೆಡ್ಡಿ, ಎಂ.ಆರ್. ಜಯರಾಮ್, ಆಯೋಜನೆ: ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ಸ್ಥಳ: ರಾಮಯ್ಯ ಮೆಡಿಕಲ್ ಕಾಲೇಜು, ಜ್ಞಾನಗಂಗೋತ್ರಿ ಆವರಣ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 10.30

'ಕನ್ನಡ ಸಾಹಿತ್ಯ ಮತ್ತು ಬೂಸಾ ಸಾಂಸ್ಕೃತಿಕ ದಂಗೆ' ದುಂಡು ಮೇಜಿನ ಗೋಷ್ಠಿ: ಉದ್ಘಾಟನೆ: ಪಿ.ಎಂ. ನರೇಂದ್ರಸ್ವಾಮಿ, ಉಪಸ್ಥಿತಿ: ಜ್ಞಾನಪ್ರಕಾಶ ಸ್ವಾಮೀಜಿ, ಅಧ್ಯಕ್ಷತೆ: ಜಯಕರ ಶೆಟ್ಟಿ, ಅತಿಥಿಗಳು: ಬಿ. ಪ್ರಸನ್ನಕುಮಾರ್, ಬಿ. ಸೋಮಶೇಖರ್, ಕೋಟಗಾನಹಳ್ಳಿ ರಾಮಯ್ಯ, ಬಿ. ಗೋಪಾಲ್, ಕಾಳೇಗೌಡ ನಾಗವಾರ, ಎಂ. ವೆಂಕಟಸ್ವಾಮಿ, ಆಯೋಜನೆ: ಬಿ. ಬಸಲಿಂಗಪ್ಪ ಅಭಿವೃದ್ಧಿ ಅಧ್ಯಯನ ಸಂಸ್ಥೆ, ಸ್ಥಳ: ಎಚ್. ನರಸಿಂಹಯ್ಯ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ಸಂಗೀತ ಕಾರ್ಯಕ್ರಮ: ವೀಣೆ: ಎಸ್.ವಿ. ಸಹನಾ, ಮೃದಂಗ: ಅರ್ಜುನ್ ಕುಮಾರ್, ಘಟ: ಜಿ.ಎಸ್. ರಾಮಾನುಜನ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6

ಕಥಕ್ ಯುಗಳ ನೃತ್ಯ ಪ್ರದರ್ಶನ: ಪ್ರಸ್ತುತಿ: ನಿಧಿನಾ, ಸೊನಾಲಿ ಲೂಂಬಾ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6.30

ಸಂಕ್ಷಿಪ್ತ ಸುದ್ದಿ

ದಾಖಲಾತಿ ಪರಿಶೀಲನೆಗೆ ಅಂತಿಮ ಅವಕಾಶ

ಬೆಂಗಳೂರು: ತಾಂತ್ರಿಕ ಸಹಾಯಕ ಹುದ್ದೆಗಳ ನೇರ ನೇಮಕಾತಿಗೆ ಅರ್ಹ ಅಭ್ಯರ್ಥಿಳಿಗೆ ಮೂಲ ದಾಖಲಾತಿ , ದೇಹದಾರ್ಢ್ಯತೆ ಪರಿಶೀಲಿಸಲು ಜ.3ರಂದು ಅಂತಿಮ ಅವಕಾಶ ನೀಡಲಾಗಿದೆ.

ಡಿ.26ರಿಂದ 28ರ ವರೆಗೆ ಅವಕಾಶ ನೀಡಲಾಗಿತ್ತು. ಗೈರಾದ ಅಭ್ಯರ್ಥಿಗಳಿಗೆ ಈಗ ಅಂತಿಮ ಅವಕಾಶ ಒದಗಿಸಲಾಗಿದೆ. ಜ.3ರಂದು ಶಾಂತಿನಗರದ ಕೆಎಸ್‌ಆರ್‌ಟಿಸಿ ಸಭಾಂಗಣದಲ್ಲಿ ದಾಖಲಾತಿ, ದೇಹದಾರ್ಢ್ಯತೆ ಪರಿಶೀಲನೆ ನಡೆಯಲಿದೆ.

ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್ ksrtcjobs.com ನಿಂದ ಕರೆಪತ್ರ ಡೌನ್‌ಲೋಡ್ ಮಾಡಿಕೊಂಡು ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ಸೂಚಿಸಲಾಗಿದೆ. ಮಾಹಿತಿಗಾಗಿ ನಿಗಮದ ಸಹಾಯವಾಣಿ ಸಂಖ್ಯೆ 080 22221321/321, 7760990061, 7760990044 ಸಂಪರ್ಕಿಸಬಹುದು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಉಚಿತ ಕೃತಕ ಕಾಲು, ಮುಂಗೈ ಜೋಡಣಾ ಶಿಬಿರ

ಬೆಂಗಳೂರು: ರೋಟರಿ ಬೆಂಗಳೂರು ಪೀಣ್ಯ ಮತ್ತು ಜೈಪುರದ ಭಗವಾನ ಮಹಾವೀರ್ ವಿಕಲಾಂಗ್ ಸಹಾಯತಾ ಸಮಿತಿ ಸಹಯೋಗದಲ್ಲಿ 2024ರ ಜನವರಿ 3ರಿಂದ 9ರವರೆಗೆ 'ಉಚಿತ ಕೃತಕ ಕಾಲು ಹಾಗೂ ಮುಂಗೈ ಜೋಡಣಾ ಶಿಬಿರ'ವನ್ನು ಆಯೋಜಿಸಲಾಗಿದೆ.

ಬೆಂಗಳೂರಿನ ಶಿವಾಜಿನಗರದ ಭಗವಾನ್ ಮಹಾವೀರ್ ರಸ್ತೆಯಲ್ಲಿರುವ ಗಣೇಶ್ ಬಾಗ್, ಎಸ್‌ಎಸ್‌ಬಿಎಸ್ ಜೈನ್ ಸಂಘ ಟ್ರಸ್ಟ್‌ನಲ್ಲಿ ಶಿಬಿರ ನಡೆಯಲಿದೆ. ಅವಶ್ಯಕತೆ ಇರುವವರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ: 93412 14915, 98450 52554ಗೆ ಸಂಪರ್ಕಿಸಬಹುದು.

ವೃಂದ, ನೇಮಕಾತಿ ನಿಯಮ ತಿದ್ದುಪಡಿ ಮಾಡಲು ಗಡುವು

ಬೆಂಗಳೂರು: ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿ 13 ವರ್ಷಗಳಿಂದ ತಿದ್ದುಪಡಿಯಾಗಿಲ್ಲ. ಇನ್ನು ಒಂದು ತಿಂಗಳ ಒಳಗೆ ಅಂತಿಮಗೊಳಿಸದಿದ್ದರೆ ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಕೆಲಸ ಸ್ಥಗಿತಗೊಳಿಸಲಾಗುವುದು ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ ಎಚ್ಚರಿಸಿದೆ.

ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ಅವರು ನಗರಾಭಿವೃದ್ಧಿ ಇಲಾಖೆ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿದ್ದಾರೆ.

ಈ ನಿಯಮಾವಳಿಯನ್ನು 2011 ರಲ್ಲಿ ಅಂತಿಮಗೊಳಿಸಿದ್ದು, ಸರ್ಕಾರ ಆದೇಶದ ಪ್ರಕಾರ ಪ್ರತಿ 3 ವರ್ಷಕ್ಕೊಮ್ಮೆ ವೃಂದ-ನೇಮಕಾತಿ ನಿಯಮಾವಳಿ ರಚಿಸಬೇಕು. ಹಾಗೆ ಮಾಡದಿರುವ ಕಾರಣ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು, ನೌಕರರು ಮುಂಬಡ್ತಿಯಿಂದ ವಂಚಿತರಾಗಿದ್ದಾರೆ. ಎರವಲು ಮೇಲೆ ಕಾರ್ಯನಿರ್ವಹಿಸುತ್ತಿರುವರಿಂದ ಕಾಯಂ ನೌಕರರು ಆಡಳಿತ ಸೌಲಭ್ಯ ಪಡೆಯಲು ವಂಚಿತರಾಗಿದ್ದಾರೆ ಎಂದು ಮನವಿಯಲ್ಲಿ ದೂರಿದ್ದಾರೆ.

ನಿಯಮಾವಳಿ ಕರಡನ್ನು 30 ದಿನದಲ್ಲಿ ಪ್ರಕಟಿಸದಿದ್ದರೆ ಮಹಾನಗರ ಪಾಲಿಕೆಗಳ ಎಲ್ಲ ಕೆಲಸ ಕಾರ್ಯಗಳನ್ನು ಸ್ಥಗಿತ ಮಾಡಲಾಗುವುದು ಎಂದು ಅವರು ಎಚ್ಚರಿಸಿದರು.

ಸ್ಮಾರ್ಟ್‌ಸಿಟಿ ಯೋಜನೆಯಡಿ ಕಾಮಗಾರಿ ನಡೆದಿದ್ದರೂ ತಪ್ಪದ ಗೋಳು

ಅವೆನ್ಯೂ ರಸ್ತೆಗೆ ನಿತ್ಯ ಚರಂಡಿ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿದಿನ ಸಂಜೆಯಾಗುತ್ತಿದ್ದಂತೆ ಅವೆನ್ಯೂ ರಸ್ತೆಯ ಈ ಭಾಗ ಕೊಳಚೆಮಯವಾಗುತ್ತಿದೆ. ಸುತ್ತಮುತ್ತಲಿನ ವ್ಯಾಪಾರಿಗಳು ದುರ್ವಾಸನೆಯಲ್ಲೇ ವ್ಯಾಪಾರ ಮಾಡುವಂತಾಗಿದೆ. ವಾಹನ ಸವಾರರು ಮೂಗುಮುಚ್ಚಿಕೊಂಡು ಸಾಗುತ್ತಿದ್ದಾರೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ಕಾಮಗಾರಿ ನಡೆದಿದ್ದರೂ, ಸಮಸ್ಯೆ ಪರಿಹಾರವಾಗಿಲ್ಲ, ನಿತ್ಯದ ಗೋಳು ತಪ್ಪಿಲ್ಲ.

ಸ್ಮಾರ್ಟ್‌ಸಿಟಿ ಕಾಮಗಾರಿಗಳು ನಡೆದ ಬಳಿಕ ರಸ್ತೆಯ ಉಳಿದ ಭಾಗದಲ್ಲಿದ್ದ ಸಮಸ್ಯೆಗಳು ಸರಿ ಹೋಗಿವೆ. ಆದರೆ, ಮೈಸೂರು ಬ್ಯಾಂಕ್ ಸರ್ಕಲ್ ಕಡೆಯಿಂದ ಅವೆನ್ಯೂ ರಸ್ತೆಗೆ ಪ್ರವೇಶಿಸುವಲ್ಲಿರುವ ಮ್ಯಾನ್‌ಹೋಲ್‌ನಲ್ಲಿ ಕೊಳಚೆ ನೀರು ಉಕ್ಕುವುದು ತಪ್ಪಿಲ್ಲ. ಸುತ್ತಲಿನ ಪ್ರದೇಶ ಎತ್ತರವಿದ್ದು, ಮ್ಯಾನ್‌ಹೋಲ್ ಇರುವ ಭಾಗ ತಗ್ಗಿನಲ್ಲಿರುವುದರಿಂದ ಕೊಳಚೆನೀರು ಆಗಾಗ್ಗೆ ರಸ್ತೆಗೆ ಹರಿಯಲು ಕಾರಣವಾಗುತ್ತಿದೆ. ವೈಜ್ಞಾನಿಕವಾಗಿ ಕಾಮಗಾರಿ ನಡೆಸಿದ್ದರೆ ಈ ಸಮಸ್ಯೆ ಉಂಟಾಗುತ್ತಿರಲಿಲ್ಲ ಎಂದು ಸ್ಥಳೀಯರಾದ ಸುರೇಶ್ ದೂರಿದರು.

‘ಮೊದಲು ವಾರಕ್ಕೊಮ್ಮೆ ಮ್ಯಾನ್‌ಹೋಲ್‌ನಿಂದ ಕೊಳಚೆನೀರು ಉಕ್ಕಿ ಹರಿಯುತ್ತಿತ್ತು. ಕಳೆದ ಒಂದು ವಾರದಿಂದ ಪ್ರತಿದಿನ ಹರಿಯುತ್ತಿದೆ. ಬಿಬಿಎಂಪಿ ಅಧಿಕಾರಿಗಳಿಗೆ, ಒಳಚರಂಡಿ ಮಂಡಳಿ ಎಂಜಿನಿಯರ್‌ಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ನಾವು ದೂರು ನೀಡಿದಾಗ ಒಮ್ಮೆ ಬಂದು ಫೋಟೊ ತೆಗೆದುಕೊಂಡು ಹೋಗುತ್ತಾರೆ. ಒತ್ತಡ ಹಾಕಿದರೆ ಒಳಚರಂಡಿಯನ್ನು ಸ್ವಲ್ಪ ಸ್ವಚ್ಛ ಮಾಡಿಸುತ್ತಾರೆ. ಅವರು ಅತ್ತ ಹೋದ ಮೇಲೆ ಮತ್ತೆ ಸಮಸ್ಯೆ ಹಾಗೇ ಮುಂದುವರಿಯುತ್ತದೆ’ ಎಂದು ಬೀದಿ ಬದಿ ವ್ಯಾಪಾರಿ ರಿಯಾಜ್ ಅಹ್ಮದ್ ದೂರಿದರು.

‘ಕೊಳಚೆನೀರಿನದುರ್ನಾತದಿಂದಾಗಿ ಗ್ರಾಹಕರು ಸಂಚರಿಸಲು ಅಸಹ್ಯಪಡುತ್ತಿದ್ದಾರೆ. ವ್ಯಾಪಾರಿಗಳು ದುರ್ವಾಸನೆ ಸಹಿಸಿಕೊಂಡು ವ್ಯಾಪಾರ ಮಾಡುತ್ತಿದ್ದರೂ, ಜನರೇ ಬರುತ್ತಿಲ್ಲ. ಈ ಸಮಸ್ಯೆಯನ್ನು ಕೂಡಲೇ ಸರಿಪಡಿಸಬೇಕು’ ಎಂದು ಬಟ್ಟೆ ವ್ಯಾಪಾರಿ ಸಾಹಿದ್ ಆಗ್ರಹಿಸಿದರು.

ಕೊಳಚೆ ನೀರಿನ ರಭಸಕ್ಕೆ ಮ್ಯಾನ್‌ಹೋಲ್‌ನ ಮುಚ್ಚಳವೇ ಸರಿದು ಹೋಗುತ್ತಿದೆ. ದ್ವಿಚಕ್ರವಾಹನ ಸವಾರರು, ಪಾದಚಾರಿಗಳು ಈ ಗುಂಡಿಗೆ ಬೀಳುವುದನ್ನು ತಪ್ಪಿಸಲು ಪೊಲೀಸರು ಬ್ಯಾರಿಕೇಡ್ ಅಳವಡಿಸಿದ್ದಾರೆ.

ದುರಸ್ತಿ ಮಾಡಿದರೂ ನಿಲ್ಲದ ಕೊಳಚೆ: ಸಾರ್ವಜನಿಕರ ದೂರಿನ ಮೇರೆಗೆ ಬಿಬಿಎಂಪಿ ಒಳಚರಂಡಿ ಮಂಡಳಿಯ ಎಂಜಿನಿಯರ್‌ಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ಕಾರ್ಮಿಕರು ಬುಧವಾರ ಸಂಜೆ ಬಂದು ಒಳಚರಂಡಿಯೊಳಗೆ ಸೇರಿದ್ದ ಮಣ್ಣು ತೆಗೆದು ಹೊರಗೆ ಹಾಕಿದ್ದರು. ಕೊಳಚೆ ಸರಾಗವಾಗಿ ಹರಿದು ಸಮಸ್ಯೆ ಪರಿಹಾರವಾಗಲಿದೆ ಎಂದು ಸ್ಥಳೀಯ ವ್ಯಾಪಾರಿಗಳು ಅಂದುಕೊಂಡಿದ್ದರು. ಗುರುವಾರ ಸಂಜೆ ಮತ್ತೆ ಮ್ಯಾನ್‌ಹೋಲ್‌ನಲ್ಲಿ ಕೊಳಚೆನೀರು ಉಕ್ಕಿ ಹರಿದಿದೆ.





ಅವೆನ್ಯೂ ರಸ್ತೆಯಲ್ಲಿ ಒಳಚರಂಡಿ ನೀರು ರಸ್ತೆ ಮೇಲೆ ಹರಿದಿದ್ದು ಸಾರ್ವಜನಿಕರು ಓಡಾಡಲು ಕಷ್ಟಪಡುತ್ತಿರುವ ದೃಶ್ಯ. (ಮೊದಲ ಚಿತ್ರ) ಗುರುವಾರ ಸಂಜೆ ಕೊಳಚೆನೀರು ಹರಿಯುತ್ತಿರುವುದು ಕಂಡುಬಂತು —ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ವೈಜ್ಞಾನಿಕವಾಗಿ ಕಾಮಗಾರಿ ಆಗದಿರುವುದೇ ಸಮಸ್ಯೆಗೆ ಕಾರಣ ಎಂದು ಆರೋಪ
- ಬಿಬಿಎಂಪಿ ಅಧಿಕಾರಿಗಳಿಗೆ ದೂರು ನೀಡಿದರೂ ಸಮಸ್ಯೆಗೆ ಸಿಗದ ಪರಿಹಾರ
- ಗ್ರಾಹಕರು ಬರುತ್ತಿಲ್ಲ, ನಿತ್ಯ ವ್ಯಾಪಾರಕ್ಕೂ ಸಮಸ್ಯೆ

ಪರಮೇಶ್ವರ ಭೇಟಿಯಾದ ಸೋಮಶೇಖರ್, ಹೆಬ್ಬಾರ್

ಬೆಂಗಳೂರು: ಗೃಹ ಸಚಿವ ಜಿ. ಪರಮೇಶ್ವರ ಅವರನ್ನು ಬಿಜೆಪಿ ಶಾಸಕರಾದ ಎಸ್.ಟಿ. ಸೋಮಶೇಖರ್, ಶಿವರಾಮ ಹೆಬ್ಬಾರ್ ಗುರುವಾರ ಭೇಟಿ ಮಾಡಿದರು. ಬಿಜೆಪಿಯಿಂದ ಅಂತರ ಕಾಯ್ದುಕೊಂಡಿರುವ ಇಬ್ಬರೂ ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ.

ಬೆಳಗಾವಿಯಲ್ಲಿ ನಡೆದ ಅಧಿವೇಶನದ ವೇಳೆ ಕಾಂಗ್ರೆಸ್ ಶಾಸಕಾಂಗ ಸಭೆಯ ಸದಸ್ಯರಿಗೆ ಆಯೋಜಿಸಿದ್ದ ಭೋಜನ ಕೂಟದಲ್ಲೂ ಈ ಇಬ್ಬರು ಭಾಗಿಯಾಗಿದ್ದರು.

ಗೃಹ ಸಚಿವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಸೋಮಶೇಖರ್, ‘ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಚಿವರ ಜೊತೆ ಚರ್ಚೆ ಮಾಡಿದ್ದೇನೆ. ಸಂಚಾರ ದಟ್ಟಣೆ ಹೆಚ್ಚಿರುವ ಮಾಗಡಿ ರಸ್ತೆಗೆ ಪ್ರತ್ಯೇಕ ಪೊಲೀಸ್ ಠಾಣೆ ಮತ್ತು ಬ್ಯಾಡರಹಳ್ಳಿ ಪೊಲೀಸ್ ಠಾಣೆ ವಿಭಜಿಸಿ ಹೊಸದಾಗಿ ಅಂದ್ರಳ್ಳಿ ಪೊಲೀಸ್ ಠಾಣೆ ಮಾಡುವಂತೆ ಸಚಿವರ ಗಮನಕ್ಕೆ ತಂದಿದ್ದೇನೆ’ ಎಂದರು.

‘ಪಕ್ಷ ವಿರೋಧಿ ಚಟುವಟಿಕೆ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳುವ ಕಾಲ ಬಂದಿದೆ’ ಎಂದು ಸಂಸದ ಸದಾನಂದ ಗೌಡರ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಅವರು ಸರಿಯಾಗಿ ಹೇಳಿದ್ದಾರೆ. ನಾವೇನು ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿಲ್ಲ’ ಎಂದರು.

‘ಪಕ್ಷದಲ್ಲಿ ಹೇಳುವವರಿಲ್ಲ, ಕೇಳುವವರಿಲ್ಲ ಎಂಬುದು ಸರಿಯಲ್ಲ. ವಿಜಯೇಂದ್ರ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ. ಆರ್. ಅಶೋಕ ಅವರು ವಿಧಾನಸಭೆಯ ವಿರೋಧಪಕ್ಷದ ನಾಯಕ. ಇತ್ತೀಚೆಗೆ ಹೊಸ ಕಾರ್ಯಕಾರಿ ಸಮಿತಿ ರಚಿಸಲಾಗಿದೆ. ಬಿಜೆಪಿ ರಾಷ್ಟ್ರೀಯ ಪಕ್ಷ. ಕಾಲಕ್ಕೆ ಅನುಗುಣವಾಗಿ ಎಲ್ಲವೂ ನಡೆಯುತ್ತವೆ’ ಎಂದರು.

‘ಬಿಜೆಪಿಯಲ್ಲಿ ಆರಾಮವಾಗಿ ಇದ್ದೇವೆ’ ಎಂದ ಸೋಮಶೇಖರ್, ‘ಕೋವಿಡ್ ಸಂದರ್ಭದಲ್ಲಿ ₹40 ಸಾವಿರ ಕೋಟಿ ಹಗರಣ ನಡೆದಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಹೇಳಿಕೆ ನೀಡಿದ ವೇಳೆ ನಾನು ಊರಿನಲ್ಲಿ ಇರಲಿಲ್ಲ’ ಎಂದರು.

‘ನನ್ನ ಕ್ಷೇತ್ರದಲ್ಲಿ ಪೊಲೀಸ್ ಇಲಾಖೆಯಿಂದ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಚಿವರ ಜೊತೆ ಚರ್ಚೆ ನಡೆಸಿದ್ದೇನೆ’ ಎಂದು ಶಿವರಾಮ ಹೆಬ್ಬಾರ್ ಹೇಳಿದರು.

ಜಾಗತಿಕ ಕಾನೂನು ಕೌಶಲ ಅಕಾಡೆಮಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾನೂನು ಶಾಲೆಗಳು ಸಂಸತ್ತು ಮತ್ತು ರಾಜ್ಯ ಶಾಸಕಾಂಗಕ್ಕೆ ಸಲಹೆ ನೀಡಲು ಅಗತ್ಯವಿರುವ ಕಾನೂನುಗಳ ಸಂಶೋಧನೆ ಮಾಡಬೇಕು’ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಹೇಳಿದರು.

ರಾಮಯ್ಯ ಕಾನೂನು ಕಾಲೇಜಿನಲ್ಲಿ ಗುರುವಾರ ನಡೆದ ‘ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಜಾಗತಿಕ ಕಾನೂನು ಕೌಶಲ ಅಕಾಡೆಮಿ’ಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ಕಾನೂನು ತಜ್ಞರು ಅಂತರ್ಜಾಲ ಮತ್ತು ತಂತ್ರಜ್ಞಾನ ಬಳಸಿಕೊಂಡು ಸಂಶೋಧನೆ ಕೈಗೊಳ್ಳಬೇಕು. ಇದರಿಂದ, ಶೀಘ್ರವಾಗಿ ಮಾಹಿತಿ ದೊರೆಯುವುದರಿಂದ ವ್ಯಾಜ್ಯ ಪ್ರಕರಣಗಳ ಇತ್ಯರ್ಥ ಮಾಡಲು ಅನುಕೂಲವಾಗಲಿದೆ’ ಎಂದರು.

ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್. ಜಯರಾಂ, ‘ರಾಜ್ಯದಲ್ಲಿ ಪ್ರತಿವರ್ಷ 1.2 ಲಕ್ಷ ಎಂಜಿನಿಯರಿಂಗ್ ಪದವೀಧರರು ಹೊರ ಬರುತ್ತಾರೆ. ಆದರೆ, ಕೇವಲ 19 ಸಾವಿರ ಜನರಿಗೆ ಮಾತ್ರ ಉದ್ಯೋಗ ದೊರೆಯುತ್ತದೆ. ಪದವಿಗಿಂತ ಕೌಶಲ ಬಹಳ ಮುಖ್ಯವಾಗಿದೆ. ಕಾನೂನು ಕ್ಷೇತ್ರದಲ್ಲಿ ಕೌಶಲ ನೀಡುವ ಉದ್ದೇಶದಿಂದ ದೇಶದಲ್ಲಿಯೇ ಮೊದಲ ಬಾರಿಗೆ ಕೌಶಲ ಅಕಾಡೆಮಿ ಆರಂಭಿಸಲಾಗಿದೆ’ ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಂ. ವೆಂಕಟಾಚಲಯ್ಯ, ಕಾನೂನು ಕಾಲೇಜಿನ ನಿರ್ದೇಶಕ ಎಂ.ಆರ್. ಆನಂದರಾಮ್, ಪ್ರಾಂಶುಪಾಲ ಉಮಾಮಹೇಶ್ ಎಸ್., ಗೋಕುಲ ಶಿಕ್ಷಣ ಪ್ರತಿಷ್ಠಾನದ ಹಣಕಾಸು ವಿಭಾಗದ ಮುಖ್ಯಸ್ಥ ರಾಮಚಂದ್ರ ಜಿ., ಮುಖ್ಯ ಕಾರ್ಯನಿರ್ವಾಹಕ ಬಿ.ಎಸ್. ರಾಮಪ್ರಸಾದ್ ಪಾಲ್ಗೊಂಡಿದ್ದರು.



ಎಂ.ಎಸ್. ರಾಮಯ್ಯ ಕಾನೂನು ಕಾಲೇಜಿನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ (ಎಡದಿಂದ) ಉಮಾಮಹೇಶ್, ಎಂ.ಆರ್. ಆನಂದರಾಮ್, ಬಿ.ವಿ. ನಾಗರತ್ನ, ಎಂ.ಆರ್. ಜಯರಾಂ, ಬಿ.ಎಸ್. ರಾಮಪ್ರಸಾದ್ ಭಾಗವಹಿಸಿದ್ದರು.

ಮನೆ ಮಾರಾಟ ಶೇ 29 ಹೆಚ್ಚಳ

ಬೆಂಗಳೂರು: ಪ್ರಸಕ್ತ ವರ್ಷದಲ್ಲಿ 63,980 ಗೃಹ ಮಾರಾಟ

ನವದೆಹಲಿ (ಪಿಟಿಐ): ಬೆಂಗಳೂರು ಸೇರಿದಂತೆ ದೇಶದ ಪ್ರಮುಖ ಏಳು ನಗರಗಳಲ್ಲಿ ಪ್ರಸಕ್ತ ವರ್ಷದಲ್ಲಿ ಮನೆ ಮಾರಾಟವು ಶೇ 31ರಷ್ಟು ಹೆಚ್ಚಳವಾಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಹೇಳಿದೆ.

2022ರಲ್ಲಿ ಈ ನಗರಗಳಲ್ಲಿ ಒಟ್ಟು 3,64,870 ಮನೆಗಳು ಮಾರಾಟವಾಗಿದ್ದವು. ಈ ವರ್ಷ 4,76,530 ಮನೆಗಳು ಮಾರಾಟವಾಗಿವೆ ಎಂದು ಗುರುವಾರ ಸಂಸ್ಥೆಯು ಬಿಡುಗಡೆಗೊಳಿಸಿರುವ ತನ್ನ ವಾರ್ಷಿಕ ವರದಿಯಲ್ಲಿ ವಿವರಿಸಿದೆ.

ಮುಂಬೈ, ಪುಣೆ, ದೆಹಲಿ, ಬೆಂಗಳೂರು, ಹೈದರಾಬಾದ್, ಕೋಲ್ಕತ್ತ ಮತ್ತು ಚೆನ್ನೈ ನಗರದಲ್ಲಿನ ಮನೆಗಳ ಮಾರಾಟದ ಆಧಾರದ ಮೇಲೆ ಸಂಸ್ಥೆಯು ಈ ವರದಿ ಸಿದ್ಧಪಡಿಸಿದೆ.

2022ರಲ್ಲಿ ಬೆಂಗಳೂರಿನಲ್ಲಿ 49,480 ಮನೆಗಳ ಮಾರಾಟವಾಗಿತ್ತು. ಪ್ರಸಕ್ತ ವರ್ಷ ಈ ಸಂಖ್ಯೆ 63,980ಕ್ಕೆ ಮುಟ್ಟಿದೆ. ಒಟ್ಟಾರೆ ಮಾರಾಟವು ಶೇ 29ರಷ್ಟು ಹೆಚ್ಚಳವಾಗಿದೆ ಎಂದು ವರದಿ ಹೇಳಿದೆ.

ಮುಂಬೈನಲ್ಲಿ ಅತಿಹೆಚ್ಚು ಮನೆಗಳು ಮಾರಾಟವಾಗಿವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮಾರಾಟವು ಶೇ 40ರಷ್ಟು ಹೆಚ್ಚಳವಾಗಿದೆ. ಈ ನಗರದಲ್ಲಿ ಕಳೆದ ವರ್ಷ 1,09,730 ಮನೆಗಳು ಮಾರಾಟವಾಗಿದ್ದರೆ, ಈ ಬಾರಿ 1,53,870 ಮನೆಗಳು ಮಾರಾಟವಾಗಿವೆ.

ಪ್ರಸಕ್ತ ವರ್ಷ ಪುಣೆಯಲ್ಲಿ 57,245, ದೆಹಲಿ 63,710, ಹೈದರಾಬಾದ್ 61,715, ಕೋಲ್ಕತ್ತ 23,030 ಮತ್ತು ಚೆನ್ನೈನಲ್ಲಿ 21,630 ಮನೆಗಳು ಮಾರಾಟವಾಗಿವೆ.

‘ಗೃಹ ವಲಯದ ಪಾಲಿಗೆ ಇದು ಉತ್ತಮ ವರ್ಷವಾಗಿದೆ. ಜಾಗತಿಕ ಬಿಕ್ಕಟ್ಟು, ದೇಶೀಯವಾಗಿ ಆಸ್ತಿ ಮೌಲ್ಯ ಹೆಚ್ಚಳ ಹಾಗೂ ಗೃಹ ಸಾಲದ ಮೇಲಿನ ಬ್ಯಾಂಕ್‌ಗಳ ಬಡ್ಡಿದರ ಹೆಚ್ಚಳದ ನಡುವೆಯೂ ಈ ವಲಯ ಅತ್ಯುತ್ತಮ ಪ್ರಗತಿ ಸಾಧಿಸಿದೆ’ ಎಂದು ಅನರಾಕ್ ಸಂಸ್ಥೆಯ ಮುಖ್ಯಸ್ಥ ಅನುಜ್ ಪುರಿ ಹೇಳಿದ್ದಾರೆ.

ಖರೀದಿ ದರ ಎಷ್ಟು?: ಪ್ರಸಕ್ತ ವರ್ಷ ಈ ಏಳು ನಗರಗಳಲ್ಲಿ ಹೊಸ ಮನೆಗಳ ನಿರ್ಮಾಣವು ಶೇ 25ರಷ್ಟು ಹೆಚ್ಚಳವಾಗಿದೆ. ಒಟ್ಟು 4,45,770 ಮನೆಗಳ ನಿರ್ಮಾಣಕ್ಕೆ ಚಾಲನೆ ಸಿಕ್ಕಿದೆ.

ಅಲ್ಲದೇ, ಮನೆ ಖರೀದಿಯ ಸರಾಸರಿ ದರವೂ ಹೆಚ್ಚಳವಾಗಿದೆ. ಹಿಂದಿನ ಸಾಲಿನಲ್ಲಿ ಒಂದು ಚದರ ಅಡಿಗೆ ₹6,150 ಇತ್ತು. ಈ ವರ್ಷ ₹7,080ಕ್ಕೆ ಮುಟ್ಟಿದೆ ಎಂದು ಹೇಳಿದೆ.

ಸಿಇಟಿ ಅರ್ಜಿ ಭರ್ತಿ: ಉಪನ್ಯಾಸಕರಿಗೆ ತರಬೇತಿ

ಬೆಂಗಳೂರು: ಸಿಇಟಿಗೆ ಅರ್ಜಿಗಳನ್ನು ಭರ್ತಿ ವೇಳೆ ಆಗುವ ತಪ್ಪು ತಡೆಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಪಿಯು ಉಪನ್ಯಾಸಕರನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿದ್ಧಗೊಳಿಸುತ್ತಿದೆ.

ಗುರುವಾರ ತರಬೇತಿ ಕಾರ್ಯಕ್ರಮದ ಮೊದಲ ಹಂತದಲ್ಲಿ 250 ವಿಜ್ಞಾನ ಉಪನ್ಯಾಸಕರು ತರಬೇತಿ ಪಡೆದರು. ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಿದರು.

ತರಬೇತಿ ಪಡೆದವರು ತಮ್ಮ ಜಿಲ್ಲೆಯಲ್ಲಿ ಇಬ್ಬರು ಉಪನ್ಯಾಸಕರಿಗೆ, ನಂತರ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬೇಕು. ಸಿಬಿಎಸ್‌ಇ, ಐಸಿಎಸ್‌ಇ, ಐಜಿಎಸ್‌ಇ ಪಿಯು ಕಾಲೇಜುಗಳಲ್ಲಿನ ಉಪನ್ಯಾಸಕರಿಗೂ ತರಬೇತಿ ಕೊಡಬೇಕು ಎಂದು ಸೂಚಿಸಿದರು.

ವಿಶ್ವಮಾನವೋತ್ಸವ ಕಾರ್ಯಕ್ರಮದಲ್ಲಿ ಸಾಹಿತಿ ಚಂದ್ರಶೇಖರ ಕಂಬಾರ

ಕನ್ನಡ ವಿ.ವಿಗೆ ಕುವೆಂಪು, ಟ್ಯಾಗೋರ್ ಸ್ಫೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟುವಾಗ ಕುವೆಂಪು ಮತ್ತು ಟ್ಯಾಗೋರ್ ಅವರು ಕಟ್ಟಿದ ವಿಶ್ವವಿದ್ಯಾಲಯಗಳನ್ನು ಮಾದರಿಯಾಗಿ ಇಟ್ಟುಕೊಂಡಿದ್ದೆ. ಅವರಿಬ್ಬರ ಸ್ಫೂರ್ತಿಯಲ್ಲಿ ಹಂಪಿಯ ಕನ್ನಡ ವಿವಿ ರಚನೆಯಾಯಿತು ಎಂದು ಸಾಹಿತಿ ಚಂದ್ರಶೇಖರ ಕಂಬಾರ ನೆನಪು ಮಾಡಿಕೊಂಡರು.

ಕನ್ನಡ ಜಾಣಜಾಣೆಯರ ವೇದಿಕೆ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಮತ್ತು ಕರ್ನಾಟಕ ಕದಂಬ ಪಡೆಯ ಸಹಯೋಗದಲ್ಲಿ ಗುರುವಾರ ರಾಷ್ಟ್ರಕವಿ ಕುವೆಂಪು ಜನ್ಮ ದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ‘ವಿಶ್ವಮಾನವೋತ್ಸವ–ಕ್ರಾಂತಿಕವಿಗೆ 120’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ನಿಮ್ಮ ಆಶಯದಂತೆ ಕನ್ನಡ ವಿಶ್ವವಿದ್ಯಾಲಯ ಕಟ್ಟುತ್ತಿರುವ ಬಗ್ಗೆ ಖುದ್ದಾಗಿ ಕುವೆಂಪು ಅವರಿಗೆ ಹೇಳಬೇಕು ಎಂದು ನಿರ್ಧರಿಸಿದ್ದೆವು. ಆರೋಗ್ಯದಲ್ಲಿ ಚೇತರಿಸಿಕೊಂಡಿದ್ದಾರೆ ಎಂಬ ಮಾಹಿತಿ ಸಿಕ್ಕಿದ್ದರಿಂದ ಅವರ ಭೇಟಿಗೆ ದಿನ ನಿಗದಿ ಮಾಡಿದ್ದೆವು. ಆದರೆ, ಭೇಟಿಯಾಗಬೇಕಿದ್ದ ಒಂದು ದಿನ ಮುಂಚೆ ಅವರು ನಿಧನರಾದರು’ ಎಂದು ವಿಷಾದ ವ್ಯಕ್ತಪಡಿಸಿದರು.

ನಾಟಕಕಾರ ಎಲ್.ಎನ್. ಮುಕುಂದರಾಜ್ ಮಾತನಾಡಿ, ‘ಕುವೆಂಪು ಪ್ರಜ್ಞೆಯೇ ಕನ್ನಡ ಪ್ರಜ್ಞೆ. ಬಸವಣ್ಣನ ಲಿಂಗಾಯತ ಧರ್ಮ ಮತ್ತು ಕುವೆಂಪು ಅವರ ವಿಶ್ವಮಾನವ ಧರ್ಮಗಳು ಕನ್ನಡ ನಾಡಿನ ಧರ್ಮಗಳಾಗಿವೆ. ಅವರನ್ನು ಭಾಷಣಕ್ಕೆ, ಪಾಠಕ್ಕೆ ಸೀಮಿತಗೊಳಿಸದೇ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ಬದುಕಿನಲ್ಲಿ ಮೌಢ್ಯವನ್ನು ಅಳವಡಿಸಿಕೊಂಡು ಕುವೆಂಪು ಅವರ ಜನ್ಮ ದಿನವನ್ನು ಅದ್ದೂರಿಯಾಗಿ ಆಚರಿಸುವವರ ಸಂಖ್ಯೆ ಅಧಿಕವಾಗಿರುವುದು ವಿಪರ್ಯಾಸ. ಕುವೆಂಪು ಪ್ರಜ್ಞೆಯನ್ನು ಅಳವಡಿಸಿಕೊಳ್ಳದೇ ಜನ್ಮ ದಿನ ಆಚರಿಸಿದರೆ ಅದಕ್ಕೆ ಅರ್ಥವಿಲ್ಲ’ ಎಂದು ಜಾಣಜಾಣೆಯರು ಬಳಗದ ಜಗದೀಶ್ ತಿಳಿಸಿದರು.

ಲೇಖಕಿ ಫಾತಿಮಾ ರಲಿಯಾ, ಜೆಡಿಎಸ್ ವಕ್ತಾರ ಪ್ರದೀಪ್, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಕಾರ್ಯದರ್ಶಿ ಇ. ಬಸವರಾಜು, ಕೆ.ಸಿ. ಶಂಕರ್, ಶ್ರೀಧರ್ ಭಾಗವಹಿಸಿದ್ದರು.



ಸಾಹಿತಿ ಡಾ.ಚಂದ್ರಶೇಖರ ಕಂಬಾರ ನಗಾರಿ ಬಾರಿಸುವ ಮೂಲಕ ‘ವಿಶ್ವಮಾನವೋತ್ಸವ–ಕ್ರಾಂತಿಕವಿಗೆ 120’ ಕಾರ್ಯಕ್ರಮವನ್ನು ಉದ್ಘಾಟಿಸಿದರು. (ಎಡದಿಂದ) ಜೆಡಿಎಸ್ ವಕ್ತಾರ ಪ್ರದೀಪ್, ವೇದಿಕೆ ಬೆಂಗಳೂರು ಜಿಲ್ಲಾ ಅಧ್ಯಕ್ಷ ನಾ. ಶ್ರೀಧರ್, ಚಿಂತಕ ಎಲ್. ಎನ್ ಮುಕುಂದರಾಜ್, ಲೇಖಕಿ ಫಾತಿಮಾ ರಲಿಯಾ ಮತ್ತು ಚಿಕ್ಕಮಗಳೂರಿನ ರೇಡಿಯಂಟ್ ಪ್ರೀ ಯೂನಿವರ್ಸಿಟಿ ಕಾಲೇಜಿನ ಕಾರ್ಯದರ್ಶಿ ಶಂಕರ್ ಕೆ.ಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಚಾಲಕನಿಗೆ 3 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪಘಾತವನ್ನುಂಟು ಮಾಡಿ ಬಾಲಕ ಬರೂನ್ (12) ಸಾವಿಗೆ ಕಾರಣವಾಗಿದ್ದ ಅಪರಾಧಿ ಸುರೇಶ್‌ನಿಗೆ (24) ಮೂರು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ 1ನೇ ಎಂಎಂಟಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

‘2017ರಲ್ಲಿ ಬಾಬುಸಾಪಾಳ್ಯ ಸರ್ವೀಸ್ ರಸ್ತೆಯಲ್ಲಿ ಆರೋಪಿ ಸುರೇಶ್ ಕಾರು ಚಲಾಯಿಸಿಕೊಂಡು ಹೊರಟಿದ್ದ. ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಬಾಲಕರಾದ ಬರೂನ್ ಹಾಗೂ ಹೇಮಂತ್‌ಗೆ ಕಾರು ಡಿಕ್ಕಿ ಹೊಡೆದಿತ್ತು. ಬರೂನ್ ಮೃತಪಟ್ಟಿದ್ದ. ಹೇಮಂತ್ ಗಾಯಗೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಚಾಲಕ ಸುರೇಶ್‌ನನ್ನು ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯ, ಆರೋಪಿಗೆ 3 ವರ್ಷ ಶಿಕ್ಷೆ ಜೊತೆಯಲ್ಲಿ ₹ 2 ಲಕ್ಷ ದಂಡ ವಿಧಿಸಿದೆ’ ಎಂದು ತಿಳಿಸಿದರು.

ಬಸ್ ಡಿಕ್ಕಿ: ಸಾವು

ಬೆಂಗಳೂರು: ಲಾಲ್‌ಬಾಗ್ ರಸ್ತೆಯ ಸುಬ್ಬಯ್ಯ ವೃತ್ತದಲ್ಲಿ ಬಿಎಂಟಿಸಿ ಎಲೆಕ್ಟ್ರಿಕ್ ಬಸ್‌ವೊಂದು ಡಿಕ್ಕಿ ಹೊಡೆದು ಪಾದಚಾರಿ ಪುಷ್ಪಾ (61) ಮೃತಪಟ್ಟಿದ್ದು, ಚಾಲಕ ಎಚ್. ನಾಗರಾಜ್ ವಿರುದ್ಧ ಹಲಸೂರು ಗೇಟ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಚಿಕ್ಕಪೇಟೆಯ ಬಸವಣ್ಣ ದೇವಸ್ಥಾನ ಸ್ಟ್ರೀಟ್ ನಿವಾಸಿ ಪುಷ್ಪಾ ಮನೆಯಿಂದ ಬೇಕರಿಗೆ ಹೊರಟಿದ್ದ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ. ಪುಷ್ಪಾ ಸಾವಿನ ಬಗ್ಗೆ ಮಗ ವಿನಯ್ ದೂರು ನೀಡಿದ್ದಾರೆ. ಬಿಎಂಟಿಸಿ ಚಾಲಕ ನಾಗರಾಜ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ಎಲೆಕ್ಟ್ರಿಕ್ ಬಸ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಪುಷ್ಪಾ ಬುಧವಾರ ಮಧ್ಯಾಹ್ನ 12.15 ಗಂಟೆ ಸುಮಾರಿಗೆ ಸುಬ್ಬಯ್ಯ ವೃತ್ತದ ಬಳಿ ರಸ್ತೆ ದಾಟುತ್ತಿದ್ದರು. ಇದೇ ಮಾರ್ಗದಲ್ಲಿ ಹೊರಟಿದ್ದ ಬಸ್, ಅವರಿಗೆ ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲಿ ಬಿದ್ದು ತೀವ್ರ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಆಸ್ಪತ್ರೆಯಲ್ಲಿಯೇ ಅವರು ಅಸುನೀಗಿದರು’ ಎಂದು ತಿಳಿಸಿದರು.

‘ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಹೇಳಿದರು.

ಕಾಂಗ್ರೆಸ್‌ನಿಂದ ಮಾತ್ರ ಸಾಮಾಜಿಕ ನ್ಯಾಯ: ಮುಖ್ಯಮಂತ್ರಿ ಸಿದ್ದರಾಮಯ್ಯ

‘ಬಿಜೆಪಿಯವರದ್ದು ಡೋಂಗಿ ಹಿಂದುತ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ನ್ಯಾಯ ಉಳಿದಿರುವುದು ಕಾಂಗ್ರೆಸ್‌ನಿಂದ ಮಾತ್ರ. ಬಿಜೆಪಿಯವರದ್ದು ಡೋಂಗಿ ಹಿಂದುತ್ವ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಸಭಾಂಗಣದಲ್ಲಿ ಗುರುವಾರ ನಡೆದ 139ನೇ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಬಿಜೆಪಿ, ಜನಸಂಘ, ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದ ಒಬ್ಬರೂ ಬ್ರಿಟಿಷರ ವಿರುದ್ಧ ಹೋರಾಟ ಮಾಡಿಲ್ಲ. ಬ್ರಿಟಿಷರ ಅವಧಿಯಲ್ಲೇ ಆರ್‌ಎಸ್‌ಎಸ್ ಹುಟ್ಟಿತ್ತು. ಆದರೆ, ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಒಂದು ದಿನವೂ ಭಾಗವಹಿಸಲಿಲ್ಲ. ಬಿಜೆಪಿಯ ಡೋಂಗಿತನವನ್ನು ಜನರಿಗೆ ಮನವರಿಕೆ ಮಾಡಬೇಕಿದೆ’ ಎಂದರು.



ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಸಭಾಂಗಣದಲ್ಲಿ ಗುರುವಾರ ನಡೆದ 139ನೇ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಅರಣ್ಯ ಸಚಿವ ಈಶ್ವರ ಖಂಡ್ರೆ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

‘ಹಿಂದೂ ಬೇರೆ. ಹಿಂದುತ್ವವೇ ಬೇರೆ. ನಾವು ರಾಮನನ್ನು ಪೂಜಿಸುವುದಿಲ್ಲವೇ? ನಮ್ಮೂರುಗಳಲ್ಲಿ ರಾಮ ಮಂದಿರ ಕಟ್ಟಿಲ್ಲವೇ? ರಾಮನ ಭಜನೆ ಮಾಡುವುದಿಲ್ಲವೇ’ ಎಂದೂ ಪ್ರಶ್ನಿಸಿದರು.

‘ನೆಹರೂ- ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ವಿಜ್ಞಾನ ಮತ್ತು ತಂತ್ರಜ್ಞಾನದ ಆಧುನಿಕ ಭಾರತದ ನಿರ್ಮಾತೃಗಳು. ಇಂಟರ್ನೆಟ್ ದೇಶದ ತುಂಬ ವಿಸ್ತರಿಸಲು ಅಡಿಪಾಯ ಹಾಕಿದವರು ರಾಜೀವ್ ಗಾಂಧಿ. ಬಿಜೆಪಿಯವರು ಬುರುಡೆ ಬಿಡುವುದನ್ನು ಬಿಟ್ಟು ಬೇರೇನು ಮಾಡಿದ್ದಾರೆ. ಸತ್ಯದ ತಲೆ ಮೇಲೆ ಹೊಡೆದಂತೆ ಸುಳ್ಳು ಹೇಳುವುದರಲ್ಲಿ ನಿಸ್ಸೀಮರು’ ಎಂದರು.

‘ಸ್ವಾತಂತ್ರ್ಯದ ಹೊಸ್ತಿಲಲ್ಲಿ ಭಾರತದ ತುಂಬ ಸಾವಿರಾರು ಸಮಸ್ಯೆಗಳಿದ್ದವು. ಆ ಎಲ್ಲ ಸಮಸ್ಯೆಗಳಿಗೆ ಪರಿಹಾರವಾಗಿ ಬಂದಿದ್ದು ಕಾಂಗ್ರೆಸ್. ಈಗಲೂ ಹಲವು ಸಮಸ್ಯೆಗಳಿವೆ. ಇವುಗಳ ಪರಿಹಾರಕ್ಕೂ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಿದೆ. ಕಾಂಗ್ರೆಸ್ ಹೋರಾಟದ ಮಾರ್ಗದಲ್ಲೇ ಅಧಿಕಾರಕ್ಕೆ ಬರುತ್ತದೆ. ಭಾರತ್ ಜೋಡೊ ನಂತರ ರಾಹುಲ್ ಗಾಂಧಿ ಅವರು ಮತ್ತೊಂದು ಸುತ್ತು ಪಾದಯಾತ್ರೆ ಹೊರಟಿದ್ದಾರೆ. ರಾಹುಲ್ ಗಾಂಧಿ ದೇಶದ ನೇತೃತ್ವ ವಹಿಸುತ್ತಾರೆ. ಪ್ರಧಾನಿ ಆಗುತ್ತಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹಮದ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಅರಣ್ಯ ಸಚಿವ ಈಶ್ವರ್ ಖಂಡ್ರೆ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಮಾಜಿ ಸಚಿವೆ ರಾಣಿ ಸತೀಶ್ ಭಾಗವಹಿಸಿದ್ದರು.

₹ 1.50 ಕೋಟಿ ವಂಚನೆ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಕಂಪನಿ ಸ್ಥಾಪನೆ ಹಾಗೂ ನಿರ್ವಹಣೆ ಹೆಸರಿನಲ್ಲಿ ₹ 1.50 ಕೋಟಿ ಪಡೆದು ವಂಚಿಸಿರುವ ಆರೋಪದಡಿ ಸಂತೋಷ್ ರಾವ್ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬಸವನಗುಡಿ ನಿವಾಸಿ ನಿಖಿಲ್ ಅವರು ದೂರು ನೀಡಿದ್ದಾರೆ. ಅದರನ್ವಯ ಸಂತೋಷ್ ರಾವ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪುರಾವೆಗಳನ್ನು ಪರಿಶೀಲಿಸಲಾಗುತ್ತಿದೆ. ಆರೋಪಿಯನ್ನು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ನಿಖಿಲ್ ಅವರನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿ ಸಂತೋಷ್, ಪಾಲುದಾರಿಕೆಯಲ್ಲಿ ಸಾಫ್ಟ್‌ವೇರ್ ಕಂಪನಿ ಸ್ಥಾಪನೆ ಮಾಡೋಣವೆಂದು ಹೇಳಿದ್ದ. ನಂತರ, ನಿಖಿಲ್ ಅವರಿಂದ ₹ 1.50 ಕೋಟಿ ಪಡೆದುಕೊಂಡಿದ್ದನೆಂದು ಹೇಳಲಾಗುತ್ತಿದೆ.’

‘ಕಂಪನಿ ನೋಂದಣಿ ಮಾಡಿಸಿದ್ದ ಆರೋಪಿ, ನಿರ್ವಹಣೆ ಹೆಸರಿನಲ್ಲಿ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿದ್ದ. ತನ್ನ ವ್ಯವಹಾರದ ಬಗ್ಗೆ ನಿಖಿಲ್ ಅವರಿಗೂ ಮಾಹಿತಿ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿದ್ದ ನಿಖಿಲ್, ಹಣ ವಾಪಸು ನೀಡುವಂತೆ ಕೇಳಿದ್ದರು. ಆದರೆ, ಆರೋಪಿ ಹಣ ಕೊಟ್ಟಿಲ್ಲವೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಅಪಘಾತದಿಂದ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಜ್ಞಾನಭಾರತಿ ಬಳಿಯ ಉಪಕಾರ ಬಡಾವಣೆಯ ಆರ್‌ಟಿಒ ರಸ್ತೆಯಲ್ಲಿ ಇತ್ತೀಚೆಗೆ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದ ದುರ್ಗಪ್ಪ ಭೋವಿ (36) ಅವರದ್ದು ಅಪಘಾತದಿಂದಾದ ಸಾವು ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ನಾಗತಿಬಸಾಪುರದ ದುರ್ಗಪ್ಪ ಅವರು ಪತ್ನಿ ರಾಧಾ ಹಾಗೂ ನಾಲ್ವರು ಮಕ್ಕಳ ಜೊತೆ ನಗರಕ್ಕೆ ಬಂದಿದ್ದರು. ದಂಪತಿ ಕೂಲಿ ಕೆಲಸ ಮಾಡುತ್ತಿದ್ದರು.

‘ಮದ್ಯವ್ಯಸನಿ ಆಗಿದ್ದ ದುರ್ಗಪ್ಪ, ಮದ್ಯ ಕುಡಿದು ಬರುವುದಾಗಿ ಪತ್ನಿಗೆ ಹೇಳಿ ಡಿ. 8ರಂದು ರಾತ್ರಿ ಮನೆಯಿಂದ ಹೊರಗೆ ಹೋಗಿದ್ದರು. ತಡರಾತ್ರಿಯಾದರೂ ದುರ್ಗಪ್ಪ ವಾಪಸು ಬಂದಿರಲಿಲ್ಲ. ಬೆಳಿಗ್ಗೆ ಬರಬಹುದೆಂದು ತಿಳಿದು ಪತ್ನಿ ಹಾಗೂ ಮಕ್ಕಳು ಸುಮ್ಮನಾಗಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಉಪಕಾರ ಬಡಾವಣೆಯ ಆರ್‌ಟಿಒ ರಸ್ತೆಯಲ್ಲಿರುವ ಕಾರ್ತಿಕ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಎದುರು ಡಿ. 9ರಂದು ಬೆಳಿಗ್ಗೆ ದುರ್ಗಪ್ಪ ಅವರ ಮೃತದೇಹ ಪತ್ತೆಯಾಗಿತ್ತು. ಸ್ಥಳಕ್ಕೆ ಹೋಗಿದ್ದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದರು. ದುರ್ಗಪ್ಪ ಮೃತಪಟ್ಟ ಬಗ್ಗೆ ಪತ್ನಿಗೆ ಮಾಹಿತಿ ನೀಡಿದ್ದರು’ ಎಂದು ತಿಳಿಸಿದರು.

‘ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ ಮೃತದೇಹ ನೋಡಿದ್ದ ಪತ್ನಿ, ‘ನನ್ನ ಪತಿ ದುರ್ಗಪ್ಪ ಹಲವು ವರ್ಷಗಳಿಂದ ಮದ್ಯ ಕುಡಿಯುತ್ತಿದ್ದರು. ಅತೀ ಹೆಚ್ಚು ಮದ್ಯ ಕುಡಿದಿದ್ದರಿಂದ ಆರೋಗ್ಯ ಸಮಸ್ಯೆ ಉಂಟಾಗಿ ಮೃತಪಟ್ಟಿದ್ದಾರೆ’ ಎಂಬುದಾಗಿ ಹೇಳಿಕೆ ನೀಡಿದ್ದರು. ಅದನ್ನು ಆಧರಿಸಿ ಪ್ರಕರಣವೂ ದಾಖಲಾಗಿತ್ತು’ ಎಂದು ಹೇಳಿದರು.

ವೈದ್ಯರ ಅನುಮಾನ, ಸಿಸಿಟಿವಿ ಕ್ಯಾಮೆರಾ ಸುಳಿವು: ‘ದುರ್ಗಪ್ಪ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರು, ಅಪಘಾತದಿಂದ ಸಾವು ಸಂಭವಿಸಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ ವರದಿ ನೀಡಿದ್ದರು’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

‘ಮೃತದೇಹ ಸಿಕ್ಕಿದ್ದ ಸ್ಥಳ ಹಾಗೂ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯ ಪರಿಶೀಲಿಸಲಾಗಿತ್ತು. ಡಿ. 9ರಂದು ರಾತ್ರಿ ಕಾರ್ತಿಕ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಮುಂಭಾಗದಲ್ಲಿ ಹೊರಟಿದ್ದ ದುರ್ಗಪ್ಪ ಅವರಿಗೆ ಇನ್ನೋವಾ ಕಾರು ಡಿಕ್ಕಿ ಹೊಡೆದಿದ್ದ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಅಪಘಾತದ ಬಳಿಕ ಕಾರು ನಿಲ್ಲಿಸದೇ ಚಾಲಕ ಪರಾರಿಯಾಗಿದ್ದ. ತೀವ್ರ ಗಾಯಗೊಂಡು ದುರ್ಗಪ್ಪ ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದು ಹೇಳಿದರು.

‘ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ದುರ್ಗಪ್ಪ ಅವರ ಸಾವಿಗೆ ಕಾರಣವಾದ ಆರೋಪದಡಿ ಚಾಲಕನ ವಿರುದ್ಧ ಇದೀಗ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತನ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ನಾಮಫಲಕ ಧ್ವಂಸ: ಕರವೇ 53 ಕಾರ್ಯಕರ್ತರು ಜೈಲಿಗೆ

ಬೆಂಗಳೂರು: ಇಂಗ್ಲಿಷ್ ನಾಮ ಫಲಕಗಳನ್ನು ಕಿತ್ತು ಬಿಸಾಡಿದ, ಮಸಿ ಬಳಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ. ನಾರಾಯಣಗೌಡ ಸೇರಿ 53 ಮಂದಿ ಕಾರ್ಯಕರ್ತರನ್ನು ಪೊಲೀಸರು ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಿದ್ದಾರೆ.

ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸುವ ವಿಚಾರಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಕ್ಷಣಾ ವೇದಿಕೆ ಬುಧವಾರ ನಡೆಸಿದ ಮೆರವಣಿಗೆಯಲ್ಲಿ ಅಹಿತಕರ ಘಟನೆ ನಡೆದಿದ್ದವು. ನಾರಾಯಣಗೌಡ ಸೇರಿ 53 ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದರು. ರಾತ್ರಿ 1 ಗಂಟೆಗೆ ನ್ಯಾಯಾಧೀಶರ ಮನೆಗೆ ಹಾಜರುಪಡಿಸಿದಾಗ ನ್ಯಾಯಾಧೀಶರು ಜ.10ರವರೆಗೆ ನ್ಯಾಯಾಂಗ ಬಂಧನ ವಿಧಿಸಿದರು.

ಪರಪ್ಪನ ಅಗ್ರಹಾರ ಜೈಲಿಗೆ ಕರೆದುಕೊಂಡು ಹೋಗುತ್ತಿದ್ದಾಗ ನಾರಾಯಣ ಗೌಡ ಪ್ರತಿಕ್ರಿಯಿಸಿದ್ದು, ‘ಇದೊಂದು ಮುಠ್ಠಾಳ ಸರ್ಕಾರ. ಪ್ರತಿಭಟನೆಯನ್ನು ರಾಜ್ಯಕ್ಕೆ ವಿಸ್ತರಿಸುತ್ತೇವೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕರವೇ ಕಾರ್ಯಕರ್ತರು ಬಸ್ ತಡೆದು ಪ್ರತಿಭಟನೆ ನಡೆಸಲು ಪ್ರಯತ್ನಿಸಿದರು.

‘ನಾಮಫಲಕಗಳಿಗೆ ಹಾನಿ ಮಾಡುವುದನ್ನು ತಡೆದು 1,000ಕ್ಕೂ ಅಧಿಕ ಜನರನ್ನು ವಶಕ್ಕೆ ಪಡೆದು, ಬಿಡುಗಡೆ ಮಾಡಲಾಗಿದೆ. ಕಾನೂನು ಉಲ್ಲಂಘನೆ ಮಾಡಿದವರನ್ನು ಬಂಧಿಸಲಾಗಿದೆ. ನಾಮಫಲಕ ಹಾನಿ ಮಾಡಿರುವ ಬಗ್ಗೆ ವ್ಯಾಪಾರಿಗಳು ದೂರು ನೀಡುತ್ತಿದ್ದು, ಇನ್ನಷ್ಟು ಪ್ರಕರಣ ದಾಖಲಾಗಲಿವೆ’ ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಮಾಹಿತಿ ನೀಡಿದ್ದಾರೆ.

ಬಿಡುಗಡೆಗೆ ಆಗ್ರಹ: ನಾರಾಯಣ ಗೌಡ ಮತ್ತು ಸಂಗಡಿಗರನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ವಿಕಾಸ ರಂಗ, ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಆಗ್ರಹಿಸಿವೆ.



ಚಾರಣಕ್ಕೆ ತೆರಳಿದ್ದವ ಶವವಾಗಿ ಪತ್ತೆ

ಮಾಗಡಿ (ರಾಮನಗರ): ತಾಲ್ಲೂಕಿನ ಸಾವನದುರ್ಗ ಬೆಟ್ಟದಲ್ಲಿ ಐದು ದಿನದ ಹಿಂದೆ ಚಾರಣಕ್ಕೆ ತೆರಳಿ ನಾಪತ್ತೆಯಾಗಿದ್ದ ಉತ್ತರಪ್ರದೇಶ ಮೂಲದ ಯುವಕ ಗಗನ್‌ದೀಪ್ ಸಿಂಗ್ (30) ಶವ ಗುರುವಾರ ಬೆಟ್ಟದ ತಪ್ಪಲಿನಲ್ಲಿ ಪತ್ತೆಯಾಗಿದೆ.

ಬೆಂಗಳೂರಿನಲ್ಲಿ ವಾಲ್ ಮಾರ್ಟ್ ಕಂಪನಿಯಲ್ಲಿ ಎಕ್ಸಿಕ್ಯುಟಿವ್ ಆಗಿ ಕೆಲಸ ಮಾಡುತ್ತಿದ್ದ ಸಿಂಗ್, ಡಿ. 24ರಂದು ಸ್ನೇಹಿತನೊಂದಿಗೆ ಚಾರಣಕ್ಕೆ ಬಂದಾಗ ನಾಪತ್ತೆಯಾಗಿದ್ದರು.

ಸತತ ನಾಲ್ಕು ದಿನಗಳಿಂದ ಶೋಧ ನಡೆದಿತ್ತು. ಐದನೇ ದಿನ ಸಿಂಗ್ ಅವರು ಶವವಾಗಿ ಪತ್ತೆಯಾಗಿದ್ದಾರೆ.

‘ಬೆಟ್ಟದಲ್ಲಿ ಇಳಿಯುವಾಗ ಸಿಂಗ್ ಅವರು ಕಾಲು ಜಾರಿ ಉರುಳಿಕೊಂಡು ಮರದ ಮೇಲೆ ಬಿದ್ದಿದ್ದಾರೆ. ಬಳಿಕ, ಅಲ್ಲಿಂದ ಕೆಳಗಿದ್ದ ಬಂಡೆ ಮೇಲೆ ಬಿದ್ದಿರುವ ಅವರ ದೇಹಕ್ಕೆ ಹೆಚ್ಚಿನ ಗಾಯಗಳಾಗಿವೆ. ಶವವನ್ನು ಸ್ಥಳದಿಂದ ಹೊರತೆಗೆಯಲಾಗಿದ್ದು, ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕುಟುಂಬದವರಿಗೆ ಹಸ್ತಾಂತರಿಸಲಾಗುವುದು’ ಎಂದು ಶೋಧ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಮಾಗಡಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಗಿರಿರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರತಿಭಟನೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ರಚಿಸಿರುವ 7ನೇ ವೇತನ ಆಯೋಗ ವರದಿ ಪಡೆದು ಶೇ 40ರಷ್ಟು ವೇತನ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿ ಕರ್ನಾಟಕ ಸರ್ಕಾರ ಸಚಿವಾಲಯ, ವಿಧಾನಸಭೆ–ವಿಧಾನ ಪರಿಷತ್ ನೌಕರರು ಗುರುವಾರ ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಮೌನ ಪ್ರತಿಭಟನೆ ನಡೆಸಿದರು.

ಆಯೋಗದ ಕೋರಿಕೆ ಇಲ್ಲದೇ ಮತ್ತೆ ನಾಲ್ಕು ತಿಂಗಳು ಅವಧಿ ವಿಸ್ತರಿಸಲಾಗಿದೆ. ಅವಧಿ ವಿಸ್ತರಣೆಯ ಆದೇಶ ಹಿಂಪಡೆಯಬೇಕು. ವೇತನ ಪರಿಷ್ಕರಣೆಗೆ ತ್ವರಿತ ಕ್ರಮ ಕೈಗೊಳ್ಳಬೇಕು. 2ನೇ ಆಡಳಿತ ಸುಧಾರಣಾ ಆಯೋಗದ ಅವೈಜ್ಞಾನಿಕ ಹಾಗೂ ನೌಕರ ವಿರೋಧಿ ಶಿಫಾರಸುಗಳನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.



ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘ, ವಿಧಾನ ಪರಿಷತ್ ಸಚಿವಾಲಯ ನೌಕರರ ಸಂಘ, ವಿಧಾನಸಭೆ ಸಚಿವಾಲಯ ನೌಕರರ ಸಂಘದ ಸದಸ್ಯರು ವೇತನ ಪರಿಷ್ಕರಣೆಗೆ ಆಗ್ರಹಿಸಿ ವಿಧಾನಸೌಧದ ಗಾಂಧಿ ಪ್ರತಿಮೆ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಮೆಟ್ರೊದಲ್ಲಿ ಶಿಕ್ಷಕಿಗೆ ಲೈಂಗಿಕ ಕಿರುಕುಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ಮೆಟ್ರೊ ನಿಲ್ದಾಣದಲ್ಲಿ ಶಿಕ್ಷಕಿಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದ ಪ್ರಕರಣದಲ್ಲಿ ಮನೋಜ್ (26) ಅವರನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದು, ಜಾಮೀನು ಮೇಲೆ ಆರೋಪಿಯನ್ನು ಬಿಡುಗಡೆ ಮಾಡಲಾಗಿದೆ.



‘ಡಿ. 25ರಂದು ನಡೆದಿದ್ದ ಘಟನೆ ಸಂಬಂಧ ಶಿಕ್ಷಕಿ ದೂರು ನೀಡಿದ್ದರು. ಕಾಮಾಕ್ಷಿಪಾಳ್ಯ ನಿವಾಸಿ ಮನೋಜ್‌ನನ್ನು ಬಂಧಿಸಲಾಗಿತ್ತು. ಜಾಮೀನು ಮೇಲೆ ಆತನನ್ನು ಬಿಟ್ಟು ಕಳುಹಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶಂಕರಪುರ ನಿವಾಸಿ ಯಾಗಿರುವ ಶಾಲಾ ಶಿಕ್ಷಕಿ, ಡಿ. 25ರಂದು ಸಂಜೆ ವೈಟ್‌ಫೀಲ್ಡ್‌ಗೆ ಹೊರಟಿದ್ದರು. ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣದಲ್ಲಿ ರೈಲು ಹತ್ತಿದ್ದರು. ಆರೋಪಿ ಮನೋಜ್ ಸಹ ಅದೇ ರೈಲಿನಲ್ಲಿದ್ದ.’

‘ರೈಲು ಬದಲಿಸಲು ಮೆಜೆಸ್ಟಿಕ್ ನಿಲ್ದಾಣದಲ್ಲಿ ಶಿಕ್ಷಕಿ ಇಳಿದಿದ್ದರು. ಅವರ ಹಿಂದೆ ಹೋಗಿದ್ದ ಆರೋಪಿ, ಮೈ ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ. ಗಾಬರಿಗೊಂಡ ಶಿಕ್ಷಕಿ, ಭದ್ರತಾ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಆರೋಪಿಯನ್ನು ವಶಕ್ಕೆ ಪಡೆದಿದ್ದ ಸಿಬ್ಬಂದಿ, ಠಾಣೆಗೆ ಒಪ್ಪಿಸಿದ್ದರು. ಆರೋಪಿ, ಮದ್ಯದ ಅಮಲಿನಲ್ಲಿ ಕೃತ್ಯ ಎಸಗಿದ್ದನೆಂಬುದು ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಧು ಬಂಗಾರಪ್ಪ ಕಾರು ಅಪಘಾತ

ತುಮಕೂರು: ತಾಲ್ಲೂಕಿನ ನಂದಿಹಳ್ಳಿ ಬಳಿ ಗುರುವಾರ ರಾತ್ರಿ ಸಚಿವ ಮಧು ಬಂಗಾರಪ್ಪ ಪ್ರಯಾಣಿಸುತ್ತಿದ್ದ ಕಾರು ಅಪಘಾತವಾಗಿದ್ದು, ಸಚಿವರು ಅಪಾಯದಿಂದ ಪಾರಾಗಿದ್ದಾರೆ.

ಕಾರ್‌ನಲ್ಲಿ ಚಾಲಕ, ಆಪ್ತ ಸಹಾಯಕ, ಗನ್ ಮ್ಯಾನ್ ಇದ್ದರು. ಶಿವಮೊಗ್ಗದಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಕಾರು, ಮುಂದೆ ಸಾಗುತ್ತಿದ್ದ ಲಾರಿಯ ಹಿಂಭಾಗಕ್ಕೆ ಗುದ್ದಿದೆ. ಇದರಿಂದ ಕಾರಿನ ಮುಂಭಾಗ ಜಖಂಗೊಂಡಿದೆ ಎಂದು ಕ್ಯಾತ್ಸಂದ್ರ ಪೊಲೀಸರು ತಿಳಿಸಿದ್ದಾರೆ.

ನಿಮ್ಹಾನ್ಸ್ ವೈದ್ಯರು ಸಂಗ್ರಹಿಸಿಟ್ಟಿದ್ದ ಮಾದರಿ

ಬಯಾಪ್ಸಿ ಮಾದರಿ ಕದ್ದು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದ ರೋಗಿಗಳ ಮಿದುಳು ಟ್ಯೂಮರ್ ಬಯಾಪ್ಸಿ ಮಾದರಿಗಳನ್ನು ಕದ್ದು ಕೇರಳಕ್ಕೆ ಅಕ್ರಮವಾಗಿ ಮಾರಾಟ ಮಾಡಲಾಗಿದ್ದು, ಹಣದ ಆಸೆಗಾಗಿ ಆಸ್ಪತ್ರೆ ಸಿಬ್ಬಂದಿಯೇ ಈ ಕೃತ್ಯ ಎಸಗಿರುವುದು ಆಂತರಿಕ ತನಿಖೆಯಿಂದ ಗೊತ್ತಾಗಿದೆ.

ಬಯಾಪ್ಸಿ ಮಾದರಿ ಅಕ್ರಮ ಮಾರಾಟವನ್ನು ಪತ್ತೆ ಮಾಡಿರುವ ನಿಮ್ಹಾನ್ಸ್ ವೈದ್ಯರು ಹಾಗೂ ರೆಜಿಸ್ಟ್ರಾರ್ ಡಾ. ಶಂಕರ್‌ನಾರಾಯಣ್ ರಾವ್ ಅವರು ಸಿದ್ದಾಪುರ ಠಾಣೆಗೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ನಿಮ್ಹಾನ್ಸ್‌ನ ಟೆಕ್ನಿಷಿಯನ್ ಎಂ.ಆರ್. ಚಂದ್ರಶೇಖರ್, ಶವಾಗಾರದ ಸಹಾಯಕ ಎಸ್. ಅಣ್ಣಾ ದೊರೈ, ಕೇರಳದ ರಘುರಾಮ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಆರೋಪಿ ಚಂದ್ರಶೇಖರ್, ಬಿವಿಜಿ ಏಜೆನ್ಸಿ ಮೂಲಕ ನಿಮ್ಹಾನ್ಸ್‌ನ ಲ್ಯಾಬ್‌ನಲ್ಲಿ ಕೆಲಸ ಮಾಡುತ್ತಿದ್ದ. ಈತ ಅಣ್ಣಾ ದೊರೈ ಜೊತೆ ಸೇರಿಕೊಂಡು ಬಯಾಪ್ಸಿ ಮಾದರಿಗಳನ್ನು ಕದ್ದು ಮಾರಾಟ ಮಾಡಿರುವ ಆರೋಪವಿದೆ. ಪ್ರಕರಣದ ಬಗ್ಗೆ ಆರೋಪಿಗಳ ವಿಚಾರಣೆ ನಡೆಸಬೇಕಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮಿದುಳು ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಾರೆ. ಇಂಥ ರೋಗಿಗಳ ಮಿದುಳು ಟ್ಯೂಮರ್ (ಗಡ್ಡೆ) ಬಯಾಪ್ಸಿ ಮಾದರಿಗಳನ್ನು ಸಂಗ್ರಹಿಸುವ ವೈದ್ಯರು, ಶವಾಗಾರದಲ್ಲಿ ಇರಿಸುತ್ತಿದ್ದಾರೆ. ಇಂಥ ಬಯಾಪ್ಸಿ ಮಾದರಿಗಳನ್ನು ಮಾರಾಟ ಮಾಡುವ ಜಾಲ ಇದೀಗ ಪತ್ತೆಯಾಗಿದ್ದು, ಇದರಲ್ಲಿ ಯಾರೆಲ್ಲ ಶಾಮೀಲಾಗಿದ್ದಾರೆ ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಯಾಪ್ಸಿ ಮಾದರಿ ಮಾರಾಟದ ಬಗ್ಗೆ ಇದೇ ಮೊದಲ ಬಾರಿಗೆ ಪ್ರಕರಣ ದಾಖಲಾಗಿದೆ. ಇದರ ಹಿಂದೆ ರಾಷ್ಟ್ರ ಮಟ್ಟದ ಜಾಲವಿರುವ ಅನುಮಾನವಿದೆ. ಹೀಗಾಗಿ, ಬಯಾಪ್ಸಿ ಮಾದರಿಗಳ ಬಗ್ಗೆ ನಿಖರ ಪುರಾವೆಗಳನ್ನು ನೀಡುವಂತೆ ಆಸ್ಪತ್ರೆಯವರನ್ನು ಕೋರಲಾಗಿದೆ. ಶವಾಗಾರದಲ್ಲಿ ಎಷ್ಟು ಬಯಾಪ್ಸಿ ಮಾದರಿಗಳನ್ನು ಸಂಗ್ರಹಿಸಲಾಗಿತ್ತು? ಅವುಗಳಲ್ಲಿ ಮಾರಾಟವಾಗಿರುವ ಮಾದರಿಗಳು ಎಷ್ಟು? ಎಂಬಿತ್ಯಾದಿ ಮಾಹಿತಿ ನೀಡುವಂತೆಯೂ ತಿಳಿಸಲಾಗಿದೆ’ ಎಂದು ಹೇಳಿದರು.

ಹಲವು ವೈದ್ಯಕೀಯ ಸಂಸ್ಥೆಗಳಿಗೆ ಮಾರಾಟ: ‘ಕೇರಳದ ರಘುರಾಮ್ ಹಾಗೂ ಬೇರೆ ವೈದ್ಯಕೀಯ ಸಂಸ್ಥೆಗಳಿಗೆ ಬಯಾಪ್ಸಿ ಮಾದರಿಗಳನ್ನು ಮಾರಾಟ ಮಾಡಿರುವುದು ಸದ್ಯಕ್ಕೆ ಗೊತ್ತಾಗಿದೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

‘ನಿಮ್ಹಾನ್ಸ್ ವಿಭಾಗವೊಂದರ ಮುಖ್ಯಸ್ಥರಾದ ಡಾ. ಅನಿತಾ ಮಹಾದೇವನ್ ಹಾಗೂ ಹೆಚ್ಚುವರಿ ಪ್ರಾಧ್ಯಾಪಕ ಡಾ. ಬಿ.ಎನ್. ನಂದೀಶ್ ಅವರು ಡಿ.23ರಂದು ಶವಾಗಾರಕ್ಕೆ ಭೇಟಿ ನೀಡಿದ್ದರು. ಇದೇ ಸಂದರ್ಭದಲ್ಲಿ ಬಯಾಪ್ಸಿ ಮಾದರಿಗಳು ನಾಪತ್ತೆಯಾಗಿದ್ದು ಗಮನಕ್ಕೆ ಬಂದಿತ್ತು. ಆರೋಪಿಗಳನ್ನು ವಿಚಾರಿಸಿದಾಗ, ಮಾರಾಟ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ’ ಎಂದು ಹೇಳಿದರು.

‘ಅಧ್ಯಯನಕ್ಕೆ ಬಯಾಪ್ಸಿ ಮಾದರಿ’

‘ಮಿದುಳು ಟ್ಯೂಮರ್ ಬಯಾಪ್ಸಿ ಮಾದರಿಗಳನ್ನು ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ವೈದ್ಯರು, ಅಧ್ಯಯನ ನಡೆಸುತ್ತಾರೆ. ರಾಜ್ಯದಲ್ಲಿ ನಿಮ್ಹಾನ್ಸ್ ಆಸ್ಪತ್ರೆಗೆ ಹೆಚ್ಚು ರೋಗಿಗಳು ಬಂದು ಹೋಗುತ್ತಾರೆ. ಹೊಸ ವೈದ್ಯಕೀಯ ಅನ್ವೇಷಣೆ ಉದ್ದೇಶದಿಂದ ಬಯಾಪ್ಸಿ ಮಾದರಿಗಳನ್ನು ವೈದ್ಯರು ಸಂಗ್ರಹಿಸಿಟ್ಟುಕೊಂಡಿರುತ್ತಾರೆ. ಇಂಥ ಮಾದರಿಗಳನ್ನೇ ಬೇರೆಯವರಿಗೆ ಮಾರಲಾಗುತ್ತಿದೆ. ಮಾದರಿ ಖರೀದಿಸುವವರು ಅಧ್ಯಯನಕ್ಕಾಗಿ ಬಳಸುತ್ತಿರುವ ಮಾಹಿತಿ ಇದೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಸಂಸ್ಥೆಗಳು ಹಣ ಕೊಟ್ಟು ಆರೋಪಿಗಳಿಂದ ಬಯಾಪ್ಸಿ ಮಾದರಿ ಸಂಗ್ರಹಿಸಿರುವ ಮಾಹಿತಿ ಇದೆ’ ಎಂದರು.



ಹೊಸ ವರ್ಷಕ್ಕೆ ಸಿದ್ಧತೆ...

ತಮ್ಮ ಪ್ರೀತಿ ಪಾತ್ರರಿಗೆ ಹೊಸ ವರ್ಷದ ಶುಭಾಶಯ ಕೋರಲು ಯುವತಿಯರು ಗಾಂಧಿನಗರದ ಸ್ವಪ್ನ ಪುಸ್ತಕ ಮಳಿಗೆಯಲ್ಲಿ ಗುರುವಾರ ಶುಭಾಶಯ ಪತ್ರಗಳ (ಗ್ರೀಟಿಂಗ್ ಕಾರ್ಡ್ಸ್) ಖರೀದಿಯಲ್ಲಿ ತೊಡಗಿದ್ದರು

ಪ್ರಜಾವಾಣಿ ಚಿತ್ರ/ ರಂಜು ಪಿ

'ಮಾರ್ಗಸೂಚಿ ಪಾಲಿಸಿ: ಎಚ್ಚರವಹಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸ ವರ್ಷದ ಆಚರಣೆ ವೇಳೆ ಹೆಚ್ಚು ಜನರು ಒಂದೆಡೆ ಸೇರುವುದರಿಂದ ಕೋವಿಡ್ ಮಾರ್ಗಸೂಚಿ ಪಾಲನೆ ಬಗ್ಗೆ ಖಚಿತ-ಪಡಿಸಿಕೊಳ್ಳಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ಹಾಗೂ ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ಸೂಚಿಸಿದ್ದಾರೆ.

ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ. 'ಕೊರೊನಾ ವೈರಾಣುವಿನ ರೂಪಾಂತರಿ ಓಮಿಕ್ರಾನ್‌ನ ಉಪತಳಿ ಜೆಎನ್.1 ಪ್ರಕರಣ ನಗರದಲ್ಲಿ ವರದಿಯಾಗಿರುವುದರಿಂದ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು. ಈಗಾಗಲೇ ಮಾರ್ಗಸೂಚಿಗಳು, ಸುತ್ತೋಲೆಗಳು



ದಿನೇಶ್ ಗುಂಡೂರಾವ್

ಹಾಗೂ ಸಲಹಾ ಪತ್ರಗಳನ್ನು ಹೊರಡಿಸಲಾಗಿದೆ. ಅವುಗಳ ಪಾಲನೆಯ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಲಭ್ಯವಿರುವ ಮಾಹಿತಿಯ ಪ್ರಕಾರ ಜೆಎನ್.1 ಉಪತಳಿಯು ಹೆಚ್ಚು ಹರಡುವಿಕೆಯ ಸಾಮರ್ಥ್ಯವನ್ನು ಹೊಂದಿದೆ. ಇದರಿಂದಾಗಿ ವೃದ್ಧರು, ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು ಹಾಗೂ ಇತರ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಆಸ್ಪತ್ರೆಗೆ ದಾಖಲಾಗುವ ಸಾಧ್ಯತೆಗಳು ಹೆಚ್ಚಿವೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

- ಹೊಸ ವರ್ಷಾಚರಣೆ: ಸಚಿವರ ಕಳಕಳಿ
- ಅಗತ್ಯ ಮುಂಜಾಗ್ರತಾ ಕ್ರಮಕ್ಕೆ ಸೂಚನೆ

'ರಾಜ್ಯದಲ್ಲಿ ಈವರೆಗೆ ವರದಿಯಾದ 34 ಜೆಎನ್.1 ಪ್ರ-ಕರಣಗಳಲ್ಲಿ 21 ಪ್ರಕರಣಗಳು ನಗರದಲ್ಲಿಯೇ ದೃಢಪಟ್ಟಿವೆ. ಆದ್ದರಿಂದ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಹೊರಾಂಗಣ ಹಾಗೂ ಒಳಾಂಗಣ ಪ್ರದೇಶದಲ್ಲಿ ಜನಸಂದಣಿಯನ್ನು ಗಮನದಲ್ಲಿಟ್ಟು ಕೊಂಡು ಸಾರ್ವಜನಿಕರು ಮುಂಜಾಗ್ರತೆ ಕ್ರಮಗಳನ್ನು ಅನುಸರಿಸಬೇಕು. ಈ ಬಗ್ಗೆ ಅರಿವು ಮೂಡಿಸಬೇಕು' ಎಂದು ಹೇಳಿದ್ದಾರೆ.

'60 ವರ್ಷ ಮೇಲ್ಪಟ್ಟವರು, ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು ಹಾಗೂ ಇತರೆ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿರವವರು ಮುಖಗವಸು ಧರಿಸಬೇಕು' ಎಂದು ತಿಳಿಸಿದ್ದಾರೆ.

ವೈಎಸ್‌ಆರ್‌ಸಿಪಿ ಸೇರಿದ ರಾಯುಡು

ಅಮರಾವತಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಅಂಬಟಿ ರಾಯುಡು ಅವರು, ಆಂಧ್ರ ಪ್ರದೇಶದ ವೈಎಸ್‌ಆರ್ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಾರೆ.

ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ ರೆಡ್ಡಿ ಸಮ್ಮುಖದಲ್ಲಿ ಅಂಬಟಿ ತಿರುಪತಿ ರಾಯುಡು ವೈಎಸ್‌ಆರ್‌ಸಿಪಿ ಸೇರಿದ್ದಾರೆ ಎಂದು ಪಕ್ಷವು ತನ್ನ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದೆ.

ಉಪ ಮುಖ್ಯಮಂತ್ರಿ ಕೆ.ನಾರಾಯಣ ಸ್ವಾಮಿ ಮತ್ತು ರಾಜಂಪೇಟೆ ಸಂಸದ ಆರ್. ಮಿಥುನ್ ರೆಡ್ಡಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಗರದಲ್ಲಿ ಹೊಸ ವರ್ಷಾಚರಣೆ ನಿರ್ಬಂಧಕ್ಕೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಜೆ.ಎನ್.1 ಸೋಂಕು ಹರಡುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು ಮಹಾನಗರದಲ್ಲಿನ ಕೆಲವು ಪ್ರದೇಶಗಳಲ್ಲಿ ಹೊಸ ವರ್ಷಾಚರಣೆ ನಿರ್ಬಂಧಿಸಬೇಕು' ಎಂದು ಕೋರಿದ್ದ ಮನವಿಗೆ ಸ್ಪಂದಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಕುರಿತಂತೆ ಹೈಕೋರ್ಟ್ ವಕೀಲ ಎನ್.ಪಿ.ಅಮೃತೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ನ್ಯಾಯಮೂರ್ತಿ ಆರ್. ನಟರಾಜ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಎನ್.ಪಿ. ಅಮೃತೇಶ್, 'ಬೆಂಗಳೂರಿನ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಕಮರ್ಶಿಯಲ್ ಸ್ಟ್ರೀಟ್ ಹಾಗೂ ಇತರೆಡೆ ಹೊಸ ವರ್ಷಾಚರಣೆಗೆ ಹೆಚ್ಚಿನ ಜನ ಸೇರುವುದನ್ನು ತಡೆಯಬೇಕಿದೆ. ಮುಂಜಾಗ್ರತಾ ಕ್ರಮವಾಗಿ ಹೊಸ ವರ್ಷಾಚರಣೆ ನಿರ್ಬಂಧಿಸುವಂತೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ಉತ್ತರಿಸಿದ ಸರ್ಕಾರದ ಪರ ವಕೀಲರು, 'ಸರ್ಕಾರ ಈ ನಿಟ್ಟಿನಲ್ಲಿ ಈಗಾಗಲೇ ಸರಣಿ ಸಭೆ ನಡೆಸಿದೆ. ಇನ್ನೂ ಅಖೈರು ತೀರ್ಮಾನ ಕೈಗೊಂಡಿಲ್ಲ. ಸಿಸಿಟಿವಿ ಕ್ಯಾಮೆರಾ ಅಳವಡಿಕೆ, ಕಾನೂನು ಶಾಂತಿಪಾಲನೆಗಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲು ಸಿದ್ಧವಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಒಂದು ವೇಳೆ ಬೆಂಗಳೂರಿನಲ್ಲಿ ನಿರ್ಬಂಧಿಸಿದರೆ ಸಂಭ್ರಮಿಸುವ ಜನರು ಹೊರ ಪ್ರದೇಶಗಳಿಗೆ ತೆರಳುತ್ತಾರೆ. ಸರ್ಕಾರ ಈ ಬಗ್ಗೆ ಯಾವುದೇ ನಿಯಂತ್ರಣಗಳನ್ನು ವಿಧಿಸಿಲ್ಲ. ಆದಾಗ್ಯೂ, ಸದ್ಯಕ್ಕೆ ಕೋವಿಡ್‌ಗೆ ಹೆದರಬೇಕಾದ ಪ್ರಮೇಯ ಕಾಣುತ್ತಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

ಡಿ.31: ಮೆಟ್ರೊ ಸಂಚಾರ ಅವಧಿ ವಿಸ್ತರಣೆ

ಬೆಂಗಳೂರು: ಹೊಸ ವರ್ಷದ ಸಂಭ್ರಮಾಚರಣೆಗೆ ಅನುಕೂಲ ಆಗುವಂತೆ ಡಿ.31ರಂದು ಮೆಟ್ರೊ ರೈಲು ಸಂಚಾರವನ್ನು ರಾತ್ರಿ 2 ಗಂಟೆವರೆಗೆ ವಿಸ್ತರಿಸಿದೆ. ಆದರೆ, ಈ ಹೆಚ್ಚುವರಿ ಅವಧಿಯಲ್ಲಿ ಎಂ.ಜಿ. ರಸ್ತೆ ನಿಲ್ದಾಣವನ್ನು ತೆರೆಯದಂತೆ ಪೊಲೀಸ್ ಇಲಾಖೆ ಸೂಚಿಸಿದೆ.

ಪ್ರತಿ ದಿನ ರಾತ್ರಿ 11.30ಕ್ಕೆ ಇದ್ದ ಕೊನೆಯ ರೈಲು ಸೇವೆಯನ್ನು ಡಿ.31ರಂದು ರಾತ್ರಿ 2 ಗಂಟೆ ತನಕ ವಿಸ್ತರಿಸಲಾಗಿದೆ. ಈ ಸಂದರ್ಭದಲ್ಲಿ ಪ್ರತಿ 15 ನಿಮಿಷಕ್ಕೊಂದು ರೈಲು ಸಂಚರಿಸಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಸುರಕ್ಷತೆಯ ದೃಷ್ಟಿಯಿಂದ ರಾತ್ರಿ 11.30ರ ನಂತರ ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣ ಪ್ರವೇಶ ನಿರ್ಬಂಧಿಸಬೇಕು ಎಂದು ಪೊಲೀಸ್ ಇಲಾಖೆ ಸೂಚಿಸಿರುವುದರಿಂದ ಅಂದು ಹೆಚ್ಚುವರಿ ಅವಧಿಯಲ್ಲಿ ಎಂ.ಜಿ.ರಸ್ತೆಯಿಂದ ಪ್ರಯಾಣ ಬೆಳೆಸುವ ಮೆಟ್ರೊ ಪ್ರಯಾಣಿಕರು ಟ್ರಿನಿಟಿ ಅಥವಾ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳಿಗೆ ತೆರಳಿ ಸಂಚಾರ ಮಾಡಬಹುದು ಎಂದು ಸೂಚಿಸಿದೆ.

ಟ್ರಿನಿಟಿ ಮತ್ತು ಕಬ್ಬನ್ ಪಾರ್ಕ್ ನಿಲ್ದಾಣಗಳಿಂದ ಪ್ರಯಾಣಿಸುವವರಿಗೆ ₹ 50 ಮೊತ್ತದ ಕಾಗದದ ಟಿಕೆಟ್ ವಿತರಿಸಲಾಗುವುದು. ಕಾಗದದ ಟಿಕೆಟ್‌ಗಳನ್ನು ಅಂದು ಮುಂಚಿತವಾಗಿಯೇ ಪಡೆಯಬೇಕು. ಮಧ್ಯರಾತ್ರಿ ಟಿಕೆಟ್ ವಿತರಣೆ ಇರುವುದಿಲ್ಲ. ಸ್ಮಾರ್ಟ್ ಕಾರ್ಡ್ ಮತ್ತು ಕ್ಯೂಆರ್ ಕೋಡ್ ಟಿಕೆಟ್ ಹೊಂದಿರುವ ಪ್ರಯಾಣಿಕರು ಎಂದಿನಂತೆ ರಿಯಾಯಿತಿ ದರದಲ್ಲಿ ಪ್ರಯಾಣಿಸಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಎಂ.ಜಿ. ರಸ್ತೆಗೆ ಹೊಂದಿಕೊಂಡಿರುವ ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ಗಳಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಸೇರುತ್ತಾರೆ. ಪಕ್ಕದಲ್ಲೇ ಇರುವ ಮೆಟ್ರೊ ನಿಲ್ದಾಣದಲ್ಲಿ ಜನರನ್ನು ನಿಯಂತ್ರಿಸುವುದು ಕಷ್ಟವಾಗುತ್ತದೆ. ಈ ಸಮಸ್ಯೆ ತಪ್ಪಿಸುವ ಸಲುವಾಗಿ ಪೊಲೀಸ್ ಇಲಾಖೆ ಈ ಕ್ರಮ ಕೈಗೊಂಡಿದೆ.

ಎನ್‌ಎಚ್‌ಎಂ ಅನುದಾನ ಹೆಚ್ಚಳ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ) ನೌಕರರಿಗೆ ಹೆಚ್ಚಿಸಲಾಗಿದ್ದ ಶೇ 15ರಷ್ಟು ವೇತನಕ್ಕೆ ಸರ್ಕಾರವು ₹ 56.76 ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ. ಈ ಹೆಚ್ಚಳವು 2023ರ ಏ.1ರಿಂದಲೇ ಅನ್ವಯವಾಗಲಿದ್ದು, 16,847 ನೌಕರರು ಇದರ ಫಲಾನುಭವಿಗಳಾಗಿದ್ದಾರೆ. ಈ ಹಿಂದೆ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ನೌಕರರ ಆಗ್ರಹಕ್ಕೆ ಮಣಿದ ಎನ್‌ಎಚ್‌ಎಂ, 2023ರ ಸೆಪ್ಟೆಂಬರ್‌ನಲ್ಲಿ ವೇತನವನ್ನು ಶೇ 15ರವರೆಗೆ ಹೆಚ್ಚಿಸಿ ಆದೇಶಿಸಿತ್ತು. ಆದರೆ, ಅನುದಾನ ಬಿಡುಗಡೆ ಮಾಡಿರಲಿಲ್ಲ. ನೌಕರರ ಹೋರಾಟದ ಬಳಿಕ ಅನುದಾನವನ್ನು ಬಿಡುಗಡೆಯಾಗಿದೆ.

'ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷ್ಯ-ತೆಯ ಮಾನವ ಸಂಪನ್ಮೂಲ ಸಮಿತಿ ಸಲ್ಲಿಸಿದ್ದ ವರದಿಯಂತೆ ಶೇ 15ರಷ್ಟು ವೇತನ ಹೆಚ್ಚಳದ ಅನುದಾನವನ್ನು ಬಿಡುಗಡೆ ಮಾಡಿರುವುದು ಸಂತಸವನ್ನುಂಟು ಮಾಡಿದೆ' ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಶ್ರೀಕಾಂತ ಸ್ವಾಮಿ ತಿಳಿಸಿದ್ದಾರೆ.

₹ 6 ಸಾವಿರ ಕೋಟಿ ವಹಿವಾಟು ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆಯ ಸಂದರ್ಭ ರಾಜ್ಯದ ಆತಿಥ್ಯ ವಲಯದಲ್ಲಿ ₹ 6 ಸಾವಿರ ಕೋಟಿ ವಹಿವಾಟು ನಡೆಯುವ ನಿರೀಕ್ಷೆಯನ್ನು ಹೋಟೆಲ್ ಉದ್ಯಮಿಗಳು ಹೊಂದಿದ್ದಾರೆ.

ಈಗಾಗಲೇ ಬಹಳಷ್ಟು ಹೋಟೆಲ್, ರೆಸಾರ್ಟ್, ಹೋಮ್‌ಸ್ಟೇಗಳ ಕೊಠಡಿಗಳು ಮುಂಗಡವಾಗಿ ಬುಕ್ಕಿಂಗ್ ಆಗಿವೆ. ಇದಲ್ಲದೆ, ಹೋಟೆಲ್‌ಗಳು, ಕ್ಲಬ್‌ಗಳು, ರೆಸಾರ್ಟ್‌ಗಳಲ್ಲಿ ಹೊಸ ವರ್ಷಾಚರಣೆ ನಡೆಯಲಿದೆ. ಇದರ ಆಧಾರದಲ್ಲಿ ಡಿ.25ರಿಂದ ಜ.1ರ ಅವಧಿಯಲ್ಲಿ ಇಷ್ಟು ವಹಿವಾಟು ನಡೆಯುವ ಬಗ್ಗೆ ಆತಿಥ್ಯ ವಲಯದ ಉದ್ಯಮಿಗಳು ಲೆಕ್ಕಾಚಾರ ಹಾಕಿದ್ದಾರೆ. ರಾಜಧಾನಿ ಬೆಂಗಳೂರಿನಲ್ಲಿ ₹ 600 ಕೋಟಿ ವಹಿವಾಟನ್ನು ನಿರೀಕ್ಷಿಸಿದ್ದಾರೆ.

'ಚಿಕ್ಕಮಗಳೂರು, ಹಂಪಿ ಸೇರಿ ರಾಜ್ಯದ ವಿವಿಧೆಡೆ ಪ್ರವಾಸಿ ಸ್ಥಳಗಳು ಈ ವಾರ ಪ್ರವಾಸಿಗರಿಂದ ತುಂಬಿ ತುಳುಕುತ್ತಿವೆ. ಈ ಪ್ರವಾಸಿಗಳು ಡಿ.31ರಂದು ಹೊಸ ವರ್ಷದ ಸಂಭ್ರಮಾಚರಣೆ ಮಾಡಲು ಬೆಂಗಳೂರಿಗೆ ಬರುತ್ತಿದ್ದಾರೆ' ಎಂದು ಬೃಹತ್ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

'ಕೊಠಡಿಗಳನ್ನು ಕಾಯ್ದಿರಿಸಲು ಇಡೀ ದಿನ ದೂರವಾಣಿ ಕರೆಗಳನ್ನು ಸ್ವೀಕರಿಸುತ್ತಿದ್ದೇವೆ. ಆತಿಥ್ಯ ಉದ್ಯಮವು ಕೋವಿಡ್ ಪೂರ್ವದ ಸ್ಥಿತಿಗೆ ಮರಳುತ್ತಿರುವುದು ಸಂತಸ ತಂದಿದೆ. ಶನಿವಾರದ ವೇಳೆಗೆ ಕೊಠಡಿಗಳು ಸಂಪೂರ್ಣ ಬುಕ್ ಆಗಲಿವೆ' ಎಂದು ಒಬೆರಾಯ್ ಹೋಟೆಲ್‌ನ ಹಿರಿಯ ವ್ಯವಸ್ಥಾಪಕಿ (ಸಂವಹನ) ಪಿಂಕಿ ಪದ್ಮರಾಜ್ ಸಂತಸ ವ್ಯಕ್ತಪಡಿಸಿದರು.

₹ 33 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಹೊಸ ವರ್ಷಾಚರಣೆ ಸಂದರ್ಭದಲ್ಲಿ ಮಾರಲು ಸಂಗ್ರಹಿಸಿದ್ದ ₹ 33 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿರುವ ಸಿಸಿಬಿ ಪೊಲೀಸರು, ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಆರು ಮಂದಿಯನ್ನು ಬಂಧಿಸಿದ್ದಾರೆ.

ಕೇರಳದ ಮೂವರು ಬಂಧನ: 'ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಕೇರಳ ಕಿರಣ್ (25), ಶ್ರೇಯಸ್(24) ಮತ್ತು ರಾಹುಲ್‌ನನ್ನು (25) ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಆರೋಪಿ ಕಿರಣ್‌ನಿಂದ 3 ಕೆ.ಜಿ 100 ಗ್ರಾಂ ಗಾಂಜಾ, 20 ಗ್ರಾಂ ಎಂಡಿಎಂಎ ಜಪ್ತಿ ಮಾಡಲಾಗಿದೆ. ಅಮೃತಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಮನೆಯಲ್ಲಿ ಈತ ಡ್ರಗ್ಸ್ ಸಂಗ್ರಹಿಸಿಟ್ಟಿದ್ದ.'

'ಶ್ರೇಯಸ್ ಮತ್ತು ರಾಹುಲ್ ಕಡೆಯಿಂದ 150 ಗ್ರಾಂ ಎಂಡಿಎಂಎ, 200 ಎಲ್‌ಎಸ್‌ಡಿ ಕಾಗದ ಚೂರುಗಳು, 25 ಎಕ್ಸ್‌ಟೆಸಿ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದರು.

ಡಾರ್ಕ್‌ವೆಬ್‌ನಲ್ಲಿ ಖರೀದಿ: 'ಡಾರ್ಕ್‌ವೆಬ್‌ನಲ್ಲಿ ಬಿಟ್ ಕಾಯಿನ್ ಬಳಸಿಕೊಂಡು ಗಾಂಜಾ ಖರೀದಿಸಿ ಮಾರುತ್ತಿದ್ದ ತಮಿಳುನಾಡಿನ ಲಿಂಗೇಶ್ ನಾರಾಯಣ (23), ಸೂರಜ್ (24), ಶಾರೂಕ್ ಖಾನ್‌ನನ್ನು (27) ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಬಂಧಿತರಿಂದ 24 ಎಕ್ಸ್‌ಟೆಸಿ ಮಾತ್ರೆಗಳು, 40 ಗ್ರಾಂ ಹೈಡ್ರೊ ಗಾಂಜಾ ಹಾಗೂ 2 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

'ಮೂರು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿಗಳು, ಬಾರ್ ಆ್ಯಂಡ್ ರೆಸ್ಟೋರೆಂಟ್, ಕಾರ್ಯಕ್ರಮ ಸಂಘಟನೆ ಹಾಗೂ ಡಿಜಿಟಲ್ ಮಾರ್ಕೆಟಿಂಗ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದರು. ಡಾರ್ಕ್‌ವೆಬ್ ಬಗ್ಗೆ ತಿಳಿದುಕೊಂಡಿದ್ದ ಆರೋಪಿಗಳು, ಅದರ ಮೂಲಕ ಡ್ರಗ್ಸ್ ಖರೀದಿಸಿ ಕೊರಿಯರ್ ಮೂಲಕ ತರಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಚಿತ್ರದುರ್ಗ: ಮನೆಯಲ್ಲಿ ಮೂರು ಅಸ್ಥಿಪಂಜರ ಪತ್ತೆ

ಚಿತ್ರದುರ್ಗ: ನಗರದ ಮನೆಯೊಂದರಲ್ಲಿ ಮೂರು ಅಸ್ಥಿ-ಪಂಜರಗಳು ಪತ್ತೆಯಾಗಿದ್ದು, ತಲ್ಲಣ ಸೃಷ್ಟಿಸಿದೆ. ಈ ವಿಷಯ ಗುರುವಾರ ರಾತ್ರಿ ಗೊತ್ತಾಗಿದೆ. ಚಳ್ಳಕೆರೆ ಗೇಟ್ ಸಮೀಪದಲ್ಲಿ ಜಗನ್ನಾಥ ರೆಡ್ಡಿ ಎಂಬ ನಾಮಫಲಕ ಇರುವ ಪಾಳು ಮನೆಯಲ್ಲಿ ಇವು ಪತ್ತೆಯಾಗಿವೆ.

ಹಲವು ವರ್ಷಗಳಿಂದ ಮನೆಗೆ ಬೀಗ ಹಾಕಲಾಗಿತ್ತು. ಈ ಹಿಂದೆ ಸ್ಥಳೀಯರು ಮನೆಯಿಂದ ವಾಸನೆ ಬರುತ್ತಿದೆ ಎಂದು ಮಾತನಾಡಿಕೊಂಡು ಸುಮ್ಮನಾಗಿದ್ದರು. ಬಡಾವಣೆ ಪೊಲೀಸರು ಗುರುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಅಸ್ಥಿಪಂಜರಗಳು ಇರುವುದು ಖಚಿತವಾಗಿದೆ.

ಶವಗಳು ಸಂಪೂರ್ಣ ಕೊಳೆತಿದ್ದು, ಮೂಳೆ ಕಾಣುವ ಸ್ಥಿತಿಯಲ್ಲಿ ಪತ್ತೆಯಾಗಿವೆ. ಸ್ಥಳದಲ್ಲಿ ಶ್ವಾನದಳ ಪರಿಶೀಲನೆ ನಡೆಸಿತು.

ಮೂವರು ಅಂದಾಜು ನಾಲ್ಕು ವರ್ಷಗಳ ಹಿಂದೆ ಮೃತಪಟ್ಟಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳದಲ್ಲಿ ನಾಗರಿಕರು ಜಮಾಯಿಸಿದರು. ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಮನೆ ಮುಂದೆ ಬ್ಯಾರಿಕೇಡ್ ಅಳವಡಿಸಿದ್ದಾರೆ.



ಕೋಲಾರದ ಮೊರಾರ್ಜಿ ವಸತಿ ಶಾಲೆ ಪ್ರಕರಣ ● ಮುಖ್ಯಮಂತ್ರಿಯವರ ಸೂಚನೆಯ ಬೆನ್ನಲ್ಲೇ ಆರೋಪಿಗಳ ಪತ್ತೆ

ಮಲದ ಗುಂಡಿಗೆ ಮಕ್ಕಳು: ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ


ಅಭಿಷೇಕ್


ಕಲಾವತಿ

ಕೋಲಾರ: ಮಾಲೂರು ತಾಲ್ಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಲದ ಗುಂಡಿ ಸ್ವಚ್ಛತೆಗೆ ಮಕ್ಕಳನ್ನು ಇಳಿಸಿದ್ದ ಪ್ರಕರಣ ದಲ್ಲಿ ಪೊಲೀಸರು ಗುರುವಾರ ಮತ್ತಿಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ದೂರು ದಾಖಲಾಗುತ್ತಲೇ ತಲೆ ಮರೆಸಿಕೊಂಡಿದ್ದ ಶಿಕ್ಷಕ ಅಭಿಷೇಕ್ ಹಾಗೂ ಸ್ವಚ್ಛತಾ ಸಿಬ್ಬಂದಿ ಕಲಾವತಿ ಬಂಧಿತರು. 'ಇಬ್ಬರೂ ಜಿಲ್ಲೆಯಲ್ಲಿಯೇ ತಲೆಮರೆಸಿಕೊಂಡಿದ್ದರು. ಇದರೊಂದಿಗೆ ಪ್ರಕರಣ ಸಂಬಂಧ ಐವರನ್ನು ಬಂಧಿಸಿದಂತಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಜಿಲ್ಲೆಗೆ ಭೇಟಿ ನೀಡಿದ್ದ ವೇಳೆ ಎರಡು ದಿನದಲ್ಲಿ ಆರೋಪಿಗಳ ಬಂಧನಕ್ಕೆ ಸೂಚಿಸಿದ್ದರು. ಅದರ ಬೆನ್ನಲ್ಲೇ ಪೊಲೀಸರು ಆರೋಪಿಗಳನ್ನು ಪತ್ತೆ ಹಚ್ಚಿದ್ದಾರೆ.

ಸದ್ಯ ವಸತಿ ಶಾಲೆ ಪ್ರಾಂಶುಪಾಲೆ ಭಾರತಮ್ಮ, ಚಿತ್ರಕಲಾ ಶಿಕ್ಷಕ ಮುನಿಯಪ್ಪ, ವಾರ್ಡನ್ ಮಂಜುನಾಥ್ ಅವರನ್ನು ಬಂಧಿಸಲಾಗಿದೆ.

ಐವರು ಆರೋಪಿಗಳ ವಿರುದ್ಧ ಮಾಸ್ತಿ ಪೊಲೀಸ್ ಠಾಣೆಯಲ್ಲಿ ದೌರ್ಜನ್ಯ ಪ್ರಕರಣ ಹಾಗೂ ಈ ಪೈಕಿ ಒಬ್ಬರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ವಾರ್ಡನ್ ಮಂಜುನಾಥ್ ಜಾಮೀನಿನ ಮೇಲೆ ಹೊರಬಂದಿದ್ದಾರೆ.

ಮೊಬೈಲ್ ವಶಕ್ಕೆ: ಫೋಟೊ, ವಿಡಿಯೊ ಮಾಯ!: ತನಿಖೆಗಾಗಿ ವಸತಿ ಶಾಲೆಯ ಎಲ್ಲಾ ಸಿಬ್ಬಂದಿಯ ಮೊಬೈಲ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆದರೆ, ಆರೋಪಿ ಶಿಕ್ಷಕ ಮುನಿಯಪ್ಪ ಮೊಬೈಲ್‌ನಲ್ಲಿದ್ದ ಫೋಟೊ, ವಿಡಿಯೊ ಅಳಿಸಿ ಹಾಕಿದ್ದಾರೆ.

'ಯಾರು ವಿಡಿಯೊ ಮಾಡಿದ್ದಾರೆ ಎಂದು ಪತ್ತೆ ಹಚ್ಚುತ್ತಿದ್ದೇವೆ. ಶಿಕ್ಷಕ ಮುನಿಯಪ್ಪ ಮೊಬೈಲ್‌ನಲ್ಲಿದ್ದ ವಿಡಿಯೊಗಳನ್ನು ಅಳಿಸಿ ಹಾಕಿದ್ದು, ಅವನ್ನು ಪಡೆಯಲು (ರಿಟ್ರೀವ್) ಸಿಐಡಿ ನೆರವು ಕೋರಿದ್ದೇವೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ತಿಳಿಸಿದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ಡಿಜಿಟಲ್ ಸಾಕ್ಷ್ಯ, ಪ್ರತ್ಯಕ್ಷದರ್ಶಿಗಳು, ಘಟನೆಗೆ ಸಂಬಂಧಿಸಿದ ಸಾಕ್ಷ್ಯಗಳ ಆಧಾರದ ಮೇಲೆ ತನಿಖೆ ಮುಂದುವರಿದಿದೆ. ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ' ಎಂದು ಹೇಳಿದರು.

'ವಾರ್ಡನ್ ಹುದ್ದೆಯ ಗುಂಪುಗಾರಿಕೆ ಕಾರಣ?'

ವಸತಿ ಶಾಲೆಯಲ್ಲಿ ನಡೆದ ಘಟನೆಗಳಿಗೆ ಶಾಲೆ ನಿರ್ವಹಣೆ ಸಂಬಂಧ ಕಾಯಂ ಶಿಕ್ಷಕರು ಹಾಗೂ ಹೊರಗುತ್ತಿಗೆ ಶಿಕ್ಷಕರ ನಡುವಿನ ವೈಮನಸ್ಯ, ಕಮಿಷನ್ ಹಂಚಿಕೊಳ್ಳುವ ವಿಚಾರದಲ್ಲಿ ಭಿನ್ನಾಭಿಪ್ರಾಯ ಮುಖ್ಯ ಕಾರಣ ಎಂದು ವಿಚಾರಣೆಯಲ್ಲಿ ಗೊತ್ತಾಗಿದೆ.

ವಾರ್ಡನ್ ಹುದ್ದೆಗಾಗಿ [illegible] ಗುಂಪುಗಾರಿಕೆ ನಡೆದಿರುವುದೂ ಕಾರಣವಾಗಿದೆ. ಪ್ರಭಾರ ವಾರ್ಡನ್ ಮಂಜುನಾಥ್ ಅವರನ್ನು ಕೆಳಗಿಳಿಸಲು ಪ್ರಯತ್ನ ನಡೆದಿತ್ತು. ಹೀಗಾಗಿ, ಒಂದು ಗುಂಪು ವಸತಿ ಶಾಲೆಯಲ್ಲಿನ ಘಟನೆಗಳನ್ನು ವಿಡಿಯೊ ಮಾಡಿದೆ ಎಂಬ ಅಂಶ ವಿಚಾರಣೆಯಲ್ಲಿ ಗೊತ್ತಾಗಿದೆ.

ಶಾಲೆಗೆ ಕೆಟ್ಟ ಹೆಸರು ತಂದು ಪ್ರಾಂಶುಪಾಲರನ್ನು ಸಿಕ್ಕಿಸಿ ಹಾಕುವುದು ಇವರ ಉದ್ದೇಶವಾಗಿತ್ತು. ಹೀಗಾಗಿ, ಮಕ್ಕಳಿಗೆ ನೀಡುತ್ತಿದ್ದ ಹಿಂಸೆ, ಮಾಡಿಸುತ್ತಿದ್ದ ಕೆಲಸಗಳನ್ನು ವಿಡಿಯೊ ಮಾಡಲಾಗಿತ್ತು ಎಂದು ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛತೆ ಮುಖ್ಯ ಶಿಕ್ಷಕ ಅಮಾನತು

ಶಿವಮೊಗ್ಗ: ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಗುಡ್ಡದ ನೇರಲಕೆರೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಅಲ್ಲಿನ ಶೌಚಾಲಯ ಸ್ವಚ್ಛಗೊಳಿಸಲು ಬಳಸಲಾಗಿದೆ. ಈ ಕುರಿತ ವಿಡಿಯೊ ಗುರುವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಭದ್ರಾವತಿ ಬಿಇಒ ನಾಗೇಂದ್ರಪ್ಪ ಅವರು ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದು, ಶಿಕ್ಷಕರು, ವಿದ್ಯಾರ್ಥಿಗಳೊಂದಿಗೆ ಪ್ರತ್ಯೇಕವಾಗಿ ಚರ್ಚಿಸಿ ಮಾಹಿತಿ ಸಂಗ್ರಹಿಸಿದ್ದಾರೆ.


ಅವರು ಸಲ್ಲಿಸಿದ ವರದಿಯನ್ನು ಆಧರಿಸಿ ಡಿಡಿಪಿಐ ಸಿ.ಆರ್.ಪರಮೇಶ್ವರಪ್ಪ, ಪ್ರಭಾರ ಮುಖ್ಯಶಿಕ್ಷಕ ಶಂಕರಪ್ಪ ವಿರುದ್ಧ ಇಲಾಖೆ ವಿಚಾರಣೆ ಕಾಯ್ದಿರಿಸಿ, ಅವರನ್ನು ಅಮಾನತು ಗೊಳಿಸಿದ್ದಾರೆ. ಶಂಕರಪ್ಪ 11 ವರ್ಷಗಳಿಂದ ಈ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು.

ಪ್ರತ್ಯೇಕ ವಿಡಿಯೊ: ಶಾಲೆಯ ಸಮವಸ್ತ್ರದಲ್ಲಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಬ್ರಷ್ ಹಿಡಿದು ಶೌಚಾಲಯದ ನೆಲವನ್ನು ಉಜ್ಜಿ ಸ್ವಚ್ಛಗೊಳಿಸುತ್ತಿರುವುದು ವಿಡಿಯೊದಲ್ಲಿದೆ.

ಡಿಎಸ್‌ಎಸ್ ದೂರು: ಜಾಲತಾಣಗಳಲ್ಲಿ ವಿಡಿಯೊ ಹರಿದಾಡುತ್ತಿದ್ದಂತೆಯೇ ದಲಿತ ಸಂಘರ್ಷ ಸಮಿತಿಯ ಮುಖಂಡರು ಶಿವಮೊಗ್ಗ ಉಪವಿಭಾಗಾಧಿಕಾರಿ ಸತ್ಯನಾರಾಯಣ ಅವರಿಗೆ ಈ ಸಂಬಂಧ ದೂರು ನೀಡಿದ್ದಾರೆ. 'ಶಾಲೆ ಶೌಚಾಲಯ ಸ್ವಚ್ಛಗೊಳಿಸಲು ಪದೇಪದೆ ವಿದ್ಯಾರ್ಥಿಗಳನ್ನು ಬಳಸಲಾಗುತ್ತಿದೆ. ನಿರಾಕರಿಸುವ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಎಸಗಲಾಗುತ್ತಿದೆ. ಮುಖ್ಯಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ನೇಪಥ್ಯಕ್ಕೆ ಸರಿದ 'ಕ್ಯಾಪ್ಟನ್'

ಪ್ರಜಾವಾಣಿ ವಾರ್ತೆ



ಚೆನ್ನೈ: ದೇಸಿಯ ಮುರ್ಪೋಕ್ಕು ದ್ರಾವಿಡ ಕಳಗಂ (ಡಿಎಂಡಿಕೆ) ಪಕ್ಷದ ಸಂಸ್ಥಾಪಕ, ತಮಿಳು ನಟ ವಿಜಯಕಾಂತ್ (71) ಇನ್ನು ನೆನಪು. ನ್ಯುಮೋನಿಯಾ-ದಿಂದಾಗಿ ಆಸ್ಪತ್ರೆಗೆ ಸೇರಿದ್ದ ಅವರಿಗೆ ಕೊರೊನಾ ಸೋಂಕು ಕೂಡ ಇತ್ತು. ಗುರುವಾರ ಅವರು ಎಂಐಒಟಿ ಆಸ್ಪತ್ರೆಯಲ್ಲಿ ನಿಧನರಾದರು.

ತಮಿಳು ಸಿನಿಮಾಗಳಲ್ಲಿ ಮಾತ್ರ ಅಭಿನಯಿಸುವ ಸಂಕಲ್ಪ ಮಾಡಿದ್ದ ನಟರಲ್ಲಿ ಪ್ರಮುಖರು ವಿಜಯಕಾಂತ್. ಹಾಗಿದ್ದೂ ತೆಲುಗು ಹಾಗೂ ಹಿಂದಿ ಭಾಷೆಗಳಿಗೆ ಅವರ ಸಿನಿಮಾಗಳು ಅನೇಕವು ಡಬ್ ಆಗಿವೆ. 1991ರಲ್ಲಿ ತೆರೆಕಂಡಿದ್ದ 'ಕ್ಯಾಪ್ಟನ್ ಪ್ರಭಾಕರನ್' ಸಿನಿಮಾದಲ್ಲಿ ಅವರು ಐಎಫ್‌ಎಸ್ ಅಧಿಕಾರಿಯಾಗಿ ನಟಿಸಿದ್ದರು. ಅದು ಅವರ ನೂರನೇ ಚಿತ್ರ. ಅದರ ಜನಪ್ರಿಯತೆಯಿಂದಾಗಿ ಅವರನ್ನು ಅಭಿಮಾನಿಗಳು 'ಕ್ಯಾಪ್ಟನ್' ಎಂದೇ ಕರೆಯುತ್ತಿದ್ದರು. ಇಪ್ಪತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅವರು ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಅಭಿನಯಿಸಿದ್ದರು.

ವಿಜಯಕಾಂತ್ ಹುಟ್ಟಿದ್ದು 1952, ಆಗಸ್ಟ್ 25ರಂದು; ಮದುರೈನಲ್ಲಿ. ಅವರ ಜನ್ಮನಾಮ ವಿಜಯರಾಜ್ ಅಳಗರಸ್ವಾಮಿ. 1979ರಲ್ಲಿ 'ಇನಿಕುಂ ಇಳಮೈ' ಸಿನಿಮಾದಿಂದ ಅವರ ಚಿತ್ರಪಯಣ ಶುರುವಾಗಿತ್ತು. 150ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದ ಅವರು ಸಾಹಸ ದೃಶ್ಯಗಳು ಹಾಗೂ ಹರಿತವಾದ ಸಂಭಾಷಣೆಗಳಿಂದಲೇ ಜನಪ್ರಿಯರಾಗಿದ್ದರು. 'ಪುರಚ್ಚಿ ಕಲೈಜ್ಞರ್' (ಕ್ರಾಂತಿಕಾರಿ ಕಲಾವಿದ) ಎನ್ನುವ ವಿಶೇಷಣಕ್ಕೆ ಅವರು ಭಾಜನರಾಗಿದ್ದರು.

ಅವರು ನಟಿಸಿದ್ದ 'ದೂರತ್ತು ಇಡಿ ಮುಳಕ್ಕಮ್' ಸಿನಿಮಾ ಗೋವಾ ಚಿತ್ರೋತ್ಸವದ ಪನೋರಮಾಗೆ ಆಯ್ಕೆಯಾಗಿತ್ತು. 'ನೂರಾವದು ನಾಳ್', 'ಸಿಂದೂರ ಪೂವೆ', 'ಪುಲನ್ ವಿಸಾರಣೈ', 'ಚಿನ್ನ ಗೌಂಡರ್', 'ಸೇತುಪತಿ ಐಪಿಎಸ್', 'ಚತ್ರಿಯನ್', 'ಆನೆಸ್ಟ್ ರಾಜ್', 'ವಾನತ್ತೈ ಪೋಲ', 'ನಾನೇ ರಾಜ ನಾನೇ ಮಂದಿರಿ' ಅವರ ಜನಪ್ರಿಯ ಸಿನಿಮಾಗಳ ಸಾಲಿನಲ್ಲಿ ಎದ್ದುಕಾಣುತ್ತವೆ.

1981ರಲ್ಲಿ ತೆರೆಕಂಡ 'ಸಟ್ಟಂ ಒರು ಇರುಟ್ಟರೈ' ಚಿತ್ರದಿಂದ ಅವರಿಗೆ ಕಮರ್ಷಿಯಲ್ ಹೀರೊ 'ಇಮೇಜ್' ಪ್ರಾಪ್ತವಾಯಿತು. ಆ ಸಿನಿಮಾ ಕನ್ನಡ, ತೆಲುಗು, ಮಲಯಾಳ ಭಾಷೆಗಳಿಗೂ ರಿಮೇಕ್ ಆಗಿತ್ತು. 1984ರಲ್ಲಿ ಅವರು ನಟಿಸಿದ್ದ 18 ಸಿನಿಮಾಗಳು ತೆರೆಕಂಡಿದ್ದವು. ಮೂರು ಪಾಳಿಗಳಲ್ಲಿ ಅವರು ಚಿತ್ರೀಕರಣದಲ್ಲಿ ತೊಡಗಿದ್ದ ಕಾಲವದು. 1985ರಲ್ಲಿ 'ಅಣ್ಣೈ ಭೂಮಿ' ಸಿನಿಮಾದಲ್ಲಿ ಅವರು ರಾಧಿಕಾ ಹಾಗೂ ಕನ್ನಡದ ನಟ ಟೈಗರ್ ಪ್ರಭಾಕರ್ ಜೊತೆಗೆ ಅಭಿನಯಿಸಿದ್ದರು. ತಮಿಳಿನಲ್ಲಿ ತಯಾರಾಗಿದ್ದ ಮೊದಲ 3ಡಿ ಸಿನಿಮಾ ಅದು ಎಂದು ಕೆಲವರು ಉಲ್ಲೇಖಿಸಿದ್ದಾರೆ. 'ವೀರ ಪಾಂಡಿಯನ್' ಸಿನಿಮಾದಲ್ಲಿ ಶಿವಾಜಿ ಗಣೇಶನ್ ಜೊತೆಗೆ ಅವರು ತೆರೆ ಹಂಚಿಕೊಂಡಿದ್ದರು.

'ಮನಕಣಕು' ಚಿತ್ರದಲ್ಲಿ ಕಮಲ ಹಾಸನ್ ಜೊತೆಯಲ್ಲಿ ನಟಿಸಿದ್ದರು. 'ವಿರುದಗಿರಿ' ಎಂಬ ಸಿನಿಮಾವನ್ನು ಅವರು ನಿರ್ದೇಶಿಸಿದ್ದರು.

ತಮ್ಮ ಪುತ್ರ ಷಣ್ಮುಗ ಪಾಂಡಿಯನ್ ಅಭಿನಯಿಸಿದ್ದ 'ಸಗಾಪ್ತಂ' ಚಿತ್ರದಲ್ಲಿ 2015ರಲ್ಲಿ ಅತಿಥಿ ಪಾತ್ರದಲ್ಲಿ ನಟಿಸಿದ್ದ ಅವರು, 'ತಮಿಳನ್ ಎನ್ರು ಸೊಲ್' ಎನ್ನುವ ಮತ್ತೊಂದು ಸಿನಿಮಾದಲ್ಲಿ ಮುಖ್ಯ ಪಾತ್ರದಲ್ಲಿ ಮಗನೊಟ್ಟಿಗೆ ತೆರೆ ಹಂಚಿಕೊಂಡಿದ್ದರು.

ತಮಿಳುನಾಡು ಸರ್ಕಾರ ನೀಡುವ ಗೌರವ ಪ್ರಶಸ್ತಿ, ಕಲೈಮಾಮಣಿ ಪ್ರಶಸ್ತಿಗೆ ವಿಜಯಕಾಂತ್ ಭಾಜನರಾಗಿದ್ದರು. 2005ರಲ್ಲಿ ಡಿಎಂಡಿಕೆ ಪಕ್ಷವನ್ನು ಸ್ಥಾಪಿಸಿ ಅವರು ಸಕ್ರಿಯ ರಾಜಕಾರಣದಲ್ಲಿ ನಂಬಿಕೆ ಇಟ್ಟಿದ್ದರು. 2006ರಲ್ಲಿ ನಡೆದ ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ವಿರುದಾಚಲಂನಿಂದ ನಿಂತು ಗೆದ್ದಿದ್ದರು. ಆಗ ತಮ್ಮ ಪಕ್ಷದಿಂದ ಚುನಾವಣೆಯಲ್ಲಿ ಗೆದ್ದ ಏಕೈಕ ಅಭ್ಯರ್ಥಿ ಅವರಾಗಿದ್ದರು. 2011ರ ಚುನಾವಣೆಯಲ್ಲಿ ಡಿಎಂಕೆ ಪಕ್ಷವನ್ನು ಹಿಂದಿಕ್ಕಿ, 29 ಸ್ಥಾನಗಳನ್ನು ಅವರ ಪಕ್ಷ ತನ್ನದಾಗಿಸಿಕೊಂಡಿತ್ತು. ಆಗ ಡಿಎಂಡಿಕೆ ವಿರೋಧ ಪಕ್ಷವಾಗಿ ಹೊರಹೊಮ್ಮಿತ್ತು. ಸತತ ನಾಲ್ಕು ವರ್ಷಗಳಿಂದ ವಿಜಯಕಾಂತ್ ಸಕ್ರಿಯರಾಗಿ ಇರಲಿಲ್ಲ. ಆರೋಗ್ಯದ ಸಮಸ್ಯೆ ಅವರನ್ನು ಪದೇಪದೇ ಬಾಧಿಸಿತ್ತು. ಇದೇ ತಿಂಗಳ ಆರಂಭದಲ್ಲಿ ಅವರ ಪತ್ನಿ ಪ್ರೇಮಲತಾ ಅವರನ್ನು ಪಕ್ಷದ ಕಾರ್ಯದರ್ಶಿ ಮಾಡಲಾಯಿತು. ಅವರಿಗೆ ಇಬ್ಬರು ಗಂಡುಮಕ್ಕಳು ಇದ್ದಾರೆ.

'ಕಾಶಿಯಲ್ಲೇ ಉಳಿದ ರಾಜ್ಯದ 350 ಮಂದಿ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ದಟ್ಟ ಮಂಜಿನಿಂದ ವಾರಾಣಸಿಯಲ್ಲಿ ವಿಮಾನ ಹಾರಾಟ ಸ್ಥಗಿತಗೊಂಡಿದೆ. ಕಾಶಿಗೆ ತೆರಳಿದ್ದ ರಾಜ್ಯದ 350 ಮಂದಿ ವಾಪಸ್ ಬರಲಾಗದೆ ಮೂರು ದಿನಗಳಿಂದ ಅಲ್ಲಿಯೇ ಉಳಿದಿದ್ದಾರೆ.

'ಜಿಲ್ಲೆಯಿಂದ ನಾವು 15 ಮಂದಿ ಕಾಶಿಗೆ ವಿಮಾನದಲ್ಲಿ ಬಂದಿದ್ದೆವು. ವಾಪಸ್ ತೆರಳಲಾಗದೆ ವಿಮಾನ ನಿಲ್ದಾಣದಲ್ಲೇ ಕಾಯುತ್ತಿದ್ದೇವೆ. ಊಟ, ತಿಂಡಿಗೆ ತೊಂದರೆ ಇಲ್ಲವಾದರೂ ಊರಲ್ಲಿ ನಮ್ಮ ಅದೆಷ್ಟೋ ಕೆಲಸಗಳಿಗೆ ತೊಂದರೆಯಾಗಿದೆ.' ಎಂದು ತುಂಗಾಬಾಯಿ 'ಪ್ರಜಾವಾಣಿ'ಗೆ ತಿಳಿಸಿದರು.

'ರೈಲಿನಲ್ಲಿ ಹಿಂದಿರುಗೋಣ ಎಂದರೆ ಹಲವು ರೈಲುಗಳ ಸಂಚಾರವನ್ನೂ ರದ್ದುಪಡಿಸಲಾಗಿದೆ. ಕೋಲ್ಕತ್ತಾ ಮೂಲಕ ಕಳುಹಿಸುವ ವ್ಯವಸ್ಥೆ ಮಾಡುವುದಾಗಿ ಅಧಿಕಾರಿಗಳು ಇದೀಗ ಹೇಳುತ್ತಿದ್ದಾರೆ' ಎಂದು ತಿಳಿಸಿದರು.


ವಾರಾಣಸಿ ವಿಮಾನನಿಲ್ದಾಣದಲ್ಲಿ ಕಾಯುತ್ತಿದ್ದ ಪ್ರಯಾಣಿಕರು

ಸಾಹಸ ನಿರ್ದೇಶಕ ಜಾಲಿ ಬಾಸ್ಟಿಯನ್ ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: 950ಕ್ಕೂ ಅಧಿಕ ಸಿನಿಮಾಗಳಲ್ಲಿ ಸ್ಟಂಟ್ ಡ್ಯೂಪ್ ಕಲಾವಿದನಾಗಿ, ಸಾಹಸ ನಿರ್ದೇಶಕನಾಗಿ ಕಾರ್ಯ ನಿರ್ವಹಿಸಿದ್ದ ಜಾಲಿ ಬಾಸ್ಟಿಯನ್ (57) ಹೃದಯಾಘಾತದಿಂದ ನಿಧನರಾಗಿದ್ದಾರೆ.

ಗುರುವಾರ (ಡಿ. 28) ಹಲಸೂರು ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು. ಕೇರಳದ ಕೊಚ್ಚಿ ಮೂಲದ ಜಾಲಿ ಅವರ ಕುಟುಂಬ ಬೆಂಗಳೂರಿನಲ್ಲಿ ನೆಲೆಸಿತ್ತು. ಜಾಲಿ ಬೆಂಗಳೂರಿನಲ್ಲೇ ಬೆಳೆದಿದ್ದರು. ಅವರ ತಂದೆ ಹಾಗೂ ತಾಯಿ ಗ್ಯಾರೇಜ್‌ನಲ್ಲಿ ಮೆಕ್ಯಾನಿಕ್ ಆಗಿದ್ದರು. ಆಟೊಮೊಬೈಲ್ ಡಿಪ್ಲೊಮಾ ಮಾಡಿದ್ದ ಜಾಲಿ ಅವರೂ ಮೆಕ್ಯಾನಿಕ್ ಆಗಿ ಕಾರ್ಯ-ನಿರ್ವಹಿಸಿದ್ದರು.

17ನೇ ವಯಸ್ಸಿಗೆ ಬುಲೆಟ್, ಜಾವಾದಲ್ಲಿ ವ್ಹೀಲಿ ಮಾಡುತ್ತಿದ್ದ ಜಾಲಿ ಅವರನ್ನು ನಟ ರವಿಚಂದ್ರನ್ ಅವರ ಟ್ರೈನರ್ ಮೂರ್ತಿ ಎನ್ನುವವರು ಗಮನಿಸಿದ್ದರು. ನಂತರದಲ್ಲಿ ಜಾಲಿ ಅವರನ್ನು ರವಿಚಂದ್ರನ್ ಅವರಿಗೆ ಮೂರ್ತಿ ಪರಿಚಯಿಸಿದರು. ಇದೇ ಸಂದರ್ಭದಲ್ಲಿ 'ಪ್ರೇಮಲೋಕ' ಸಿನಿಮಾಗೆ ಸಿದ್ಧತೆ ನಡೆಸಿದ್ದ ರವಿಚಂದ್ರನ್, ತಮ್ಮ ಸ್ಟಂಟ್ ಡ್ಯೂಪ್ ಆಗಿ ಜಾಲಿಗೆ ಅವಕಾಶ ನೀಡಿದ್ದರು. ಇದು ಜಾಲಿ ಅವರ ಬದುಕಿಗೆ ತಿರುವು ನೀಡಿತ್ತು. 17ನೇ ವಯಸ್ಸಿಗೆ ಚಿತ್ರರಂಗಕ್ಕೆ ಕಾಲಿಟ್ಟ ಜಾಲಿ 950ಕ್ಕೂ ಅಧಿಕ ಸಿನಿಮಾಗಳಲ್ಲಿ ಡ್ಯೂಪ್ ಕಲಾವಿದನಾಗಿ, ಸಾಹಸ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಫೈಟ್ ಮಾಸ್ಟರ್ ಆಗಿ ಜಾಲಿ ಅವರಿಗೆ ಬ್ರೇಕ್ ಕೊಟ್ಟ ಸಿನಿಮಾ 'ಪುಟ್ನಂಜ'. 'ಸಿಪಾಯಿ', 'ರಣಧೀರ', 'ಏಕಾಂಗಿ', 'ಶಾಂತಿ ಕ್ರಾಂತಿ', 'ಅಣ್ಣಯ್ಯ', 'ಡೇಂಜರ್', 'ಧಮ್', 'ರಾಕ್ಷಸ' ಇವರ ಕೆಲಸಕ್ಕೆ ಪುರಾವೆಯಾಗಿರುವ ಕನ್ನಡ ಸಿನಿಮಾಗಳು. ತೆಲುಗು, ಮಲಯಾಳ, ತಮಿಳು ಸಿನಿಮಾಗಳಲ್ಲೂ ಸ್ಟಂಟ್ ಡ್ಯೂಪ್ ಆಗಿ, ಸಾಹಸ ನಿರ್ದೇಶಕರಾಗಿ ಜಾಲಿ ಕಾರ್ಯನಿರ್ವಹಿಸಿದ್ದಾರೆ.

ಶಿವರಾಜ್‌ಕುಮಾರ್ ಅವರ ಹಿಟ್ ಸಿನಿಮಾ 'ಟಗರು'ಗೂ ಜಾಲಿ ಸಾಹಸ ನಿರ್ದೇಶನ ಮಾಡಿದ್ದರು. ರವಿಚಂದ್ರನ್, ವಿಷ್ಣುವರ್ಧನ್, ಚಿರಂಜೀವಿ, ಮೋಹನ್‌ಲಾಲ್ ಹೀಗೆ ಖ್ಯಾತ ನಟರ ಜೊತೆ ಕೆಲಸ ಮಾಡಿದ್ದಾರೆ. ಮಲಯಾಳದ 'ಅಂಗಮಾಲಿ ಡೈರೀಸ್'ನ ಸಾಹಸ ದೃಶ್ಯಗಳಿಗೆ ಅವರು ಆ್ಯಕ್ಷನ್-ಕಟ್ ಹೇಳಿದ್ದರು.

ಇತ್ತೀಚೆಗೆ ಉಪೇಂದ್ರ ಅವರ ನಟನೆಯ '45', ದುನಿಯಾ ವಿಜಯ್ ನಟನೆಯ 'ಭೀಮ' ಸಿನಿಮಾದ ಸಾಹಸ ನಿರ್ದೇಶನ ಮಾಡಿದ್ದರು. ಜೊತೆಗೆ ಮಲಯಾಳದ ನಾಲ್ಕೈದು ಸಿನಿಮಾಗಳೂ ಇವರ ಕೈಯಲ್ಲಿದ್ದವು. 'ಲಾಕ್‌ಡೌನ್ ಡೈರೀಸ್' ಎಂಬ ಒಂದು ತಮಿಳು ಸಿನಿಮಾವನ್ನೂ ಜಾಲಿ ನಿರ್ದೇಶಿಸಿದ್ದಾರೆ.

ಸುದ್ದಿ 2 ನಿಮಿಷ

'ಜನಗಣತಿ: ಲಿಂಗಾಯತ ಪಂಚಮಸಾಲಿ' ಬಳಕೆಗೆ ಕರೆ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಸರ್ಕಾರ ಮುಂದಿನ ದಿನಗಳಲ್ಲಿ ನಡೆಸುವ ಜನಗಣತಿಯಲ್ಲಿ ಸಮಾಜ ಬಾಂಧವರು ಜಾತಿ ಕಾಲಂನಲ್ಲಿ ಲಿಂಗಾಯತ ಪಂಚಮಸಾಲಿ ಎಂದು ಬರೆಸಬೇಕು' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ-ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಕೂಡಲಸಂಗಮ ಪಂಚಮಸಾಲಿ ಪೀಠದಲ್ಲಿ ಗುರುವಾರ ಮಾತನಾಡಿ, 'ವೀರಶೈವ ಲಿಂಗಾಯತ ಮಹಾಸಭೆಯು, ಉಪಜಾತಿ ಕಾಲಂನಲ್ಲಿ ಯಾವುದೇ ಉಪಜಾತಿ ಬಳಸಬಾರದು ಎಂದು ನಿರ್ಣಯ ಕೈಗೊಂಡಿದ್ದು ನಾವು ಒಪ್ಪುವುದಿಲ್ಲ' ಎಂದರು.

'ಅನೇಕ ಲಿಂಗಾಯತ ಒಳಪಂಗಡಗಳು ಮೀಸಲಾತಿ ಪಡೆದಿವೆ. ಅವರಿಗೆ ಆ ನಿರ್ಣಯ ಸರಿಹೋಗಬಹುದು. ಆದರೆ, ಹಲವು ಲಿಂಗಾಯತ ಒಳಪಂಗಡಗಳು ಈವರೆಗೂ ಯಾವುದೇ ಸಾಮಾಜಿಕ ನ್ಯಾಯದ ಮೀಸಲಾತಿ ಪಡೆದಿಲ್ಲ. ಹಾಗಾಗಿ ಪಂಚಮಸಾಲಿ ಸಮುದಾಯದವರು ಉಪಜಾತಿ ಕಾಲಂನಲ್ಲಿ ಲಿಂಗಾಯತ ಪಂಚಮಸಾಲಿ ಎಂದು ಬರೆಸಬೇಕು' ಎಂದರು.



'ಉಪಜಾತಿ ಬರೆಸುವುದು ನಮ್ಮ ಹಕ್ಕು, ಅದನ್ನು ಬೇಡ ಎಂದು ಹೇಳುವುದು ಸರಿಯಲ್ಲ. ವೀರಶೈವ ಮಹಾಸಭಾ ಕೈಗೊಂಡ ನಿರ್ಣಯವನ್ನು ಪರಿಶೀಲಿಸಿ, ನಾವು ನಡೆಸುತ್ತಿರುವ ಮೀಸಲಾತಿ ಹೋರಾಟಕ್ಕೆ ಬೆಂಬಲ ಕೊಡಬೇಕು' ಎಂದರು.

ಹೊಸ ವಂಟಮೂರಿ ಪ್ರಕರಣ ಇನ್ನಿಬ್ಬರು ಆರೋಪಿಗಳ ಬಂಧನ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿಯಲ್ಲಿ ಮಹಿಳೆಯನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿ, ಥಳಿಸಿದ ಪ್ರಕರಣಕ್ಕೆ ಸಂಬಂಧಿಸಿ, ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಸೇರಿದಂತೆ ಇಬ್ಬರು ಆರೋಪಿಗಳನ್ನು ಬುಧವಾರ ಬಂಧಿಸಲಾಗಿದೆ.

'ಪ್ರಕರಣ ಸಂಬಂಧ ಕಾಕತಿ ಪೊಲೀಸ್ ಠಾಣೆಯಲ್ಲಿ 13 ಆರೋಪಿಗಳ ವಿರುದ್ಧ ದೂರು ದಾಖಲಾಗಿತ್ತು. 11 ಮಂದಿಯನ್ನು ಬಂಧಿಸಲಾಗಿತ್ತು. ಈಗ ಇಬ್ಬರನ್ನು ಬಂಧಿಸಿ, ಸಿಐಡಿಯವರಿಗೆ ಹಸ್ತಾಂತರಿಸಿದ್ದೇವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಶೇ 60ರಷ್ಟು ಕನ್ನಡ ಕಡ್ಡಾಯ'

ಒಂದನೇ ಪುಟದಿಂದ

'ಹಿಂದೆ 2018ರಲ್ಲಿ ಹೊರಡಿಸಿದ್ದ ಸುತ್ತೋಲೆಯಲ್ಲಿ ನಾಮಫಲಕಗಳು ಶೇ 60 ಕನ್ನಡ ಭಾಷೆ, ಶೇ 40ರಷ್ಟು ಇತರ ಭಾಷೆಯಲ್ಲಿ ಇರಬಹುದು ಎಂದು ತಿಳಿಸಲಾಗಿದೆ. ಅದರಂತೆ ಸುಗ್ರೀವಾಜ್ಞೆ ಹೊರಡಿಸಿ, ಅನುಷ್ಠಾನಗೊಳಿಸಲು ಗಡುವು ನೀಡಲಾಗುವುದು. ಖಾಸಗಿ ಸಂಸ್ಥೆಯವರು ಶೇ 60:40ರ ಅನುಪಾತದಲ್ಲಿ ಗಡುವಿನೊಳಗೆ ನಾಮಫಲಕ ಅಳವಡಿಸಬೇಕು' ಎಂದು ಸೂಚಿಸಿದರು.

'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಸೆಕ್ಷನ್ 17 (6)ರ ಪ್ರಕಾರ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅನುಮೋದನೆಯೊಂದಿಗೆ ನಡೆಸುತ್ತಿರುವ ವಾಣಿಜ್ಯ ಕೈಗಾರಿಕೆ, ವ್ಯಾಪಾರ ಸಂಸ್ಥೆ, ಸಮಾಲೋಚನೆ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಹೋಟೆಲ್ ಮುಂತಾದವುಗಳ ಹೆಸರನ್ನು ಪ್ರದರ್ಶಿಸುವ ಫಲಕಗಳ ಮೇಲಿನ ಅರ್ಧ ಭಾಗವು ಕನ್ನಡದಲ್ಲಿ ಇರತಕ್ಕದ್ದು ಎಂದು ತಿಳಿಸಲಾಗಿದೆ. ಈ ಕಾಯ್ದೆಯ ನಿಯಮ 17(8)ರಲ್ಲಿ ರಾಜ್ಯದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾದ ಜಾಹೀರಾತು, ಸೂಚನೆ ಪ್ರದರ್ಶಿಸುವ ಎಲ್ಲ ಫಲಕಗಳಲ್ಲಿ ವಿಷಯಗಳ ನಿಗದಿತ ಶೇಕಡಾವಾರು ಪ್ರಮಾಣವು ಕನ್ನಡ ಭಾಷೆಯಲ್ಲಿ ಇರತಕ್ಕದ್ದು ಎಂದೂ ಇದೆ. ಜಾಹೀರಾತುಗಳ ವರ್ಗೀಕರಣ, ಕನ್ನಡದಲ್ಲಿ ಪ್ರದರ್ಶಿಸಬೇಕಾದ ಜಾಹೀರಾತು ವಿಷಯಗಳ ಶೇಕಡಾವಾರು ಪ್ರಮಾಣವು ಸರ್ಕಾರವು ನಿಗದಿ ಮಾಡಿದಂತೆ ಇರತಕ್ಕದ್ದು ಎಂದು ತಿಳಿಸಲಾಗಿದೆ. ಇದನ್ನು ಸಹ ಅನುಷ್ಠಾನಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ವಿವರಿಸಿದರು.

'ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಪ್ರತಿಭಟನೆಗಳನ್ನು ನಡೆಸಬೇಕು, ಸರ್ಕಾರ ಇದನ್ನು ಖಾತರಿಪಡಿಸಬೇಕು ಎಂದು ಹೈಕೋರ್ಟ್ 2022ರ ಮಾರ್ಚ್ 3ರಂದು ಆದೇಶಿಸಿದೆ. ರಾಜ್ಯದ ಹಿತದೃಷ್ಟಿಯಿಂದ ಶಾಂತಿಯುತವಾಗಿ ಪ್ರತಿಭಟಿಸಿದರೆ ನಾವು ವಿರೋಧಿಸುವುದಿಲ್ಲ. ಆದರೆ, ಕಾನೂನು ಕೈಗೆ ತೆಗೆದುಕೊಂಡರೆ ಕ್ರಮ ಜರುಗಿಸುತ್ತೇವೆ' ' ಎಂದು ಹೇಳಿದರು.

ಸಭೆಯಲ್ಲಿ ಗೃಹ ಸಚಿವ ಜಿ. ಪರಮೇಶ್ವರ, ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಡಿಜಿ–ಐಜಿಪಿ ಅಲೋಕ್ ಮೋಹನ್ ಹಾಜರಿದ್ದರು.

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ, ಆಡಳಿತ ಭಾಷೆ. ಇದರಲ್ಲಿ ರಾಜಿ ಇಲ್ಲ. ಆದರೆ, ಕಾನೂನಿಗೆ ವಿರುದ್ಧವಾಗಿ ಯಾರಾದರೂ ನಡೆದುಕೊಂಡರೆ ಸಹಿಸುವುದಿಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಕನ್ನಡ ಪರ ತೀರ್ಮಾನಗಳಿಗೆ ಬದ್ಧ: ಪರಮೇಶ್ವರ

'ಕನ್ನಡದ ಪರವಾದ ಎಲ್ಲ ರೀತಿಯ ತೀರ್ಮಾನಗಳನ್ನು ತೆಗೆದುಕೊಳ್ಳುವ ಕೆಲಸವನ್ನು ನಮ್ಮ ಸರ್ಕಾರ ಹಿಂದೆಯೂ ಮಾಡಿದೆ. ಅದಕ್ಕೆ ಈಗಲೂ ಬದ್ಧ. ಬರಗೂರು ರಾಮಚಂದ್ರಪ್ಪನವರು ಕೂಡಾ ಕನ್ನಡ ಕಡ್ಡಾಯಕ್ಕೆ ಆಗ್ರಹಿಸಿದ್ದಾರೆ. ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರನ್ನು ಪೊಲೀಸರು ಸರಿಯಾಗಿ ನಡೆಸಿಕೊಂಡಿಲ್ಲ ಎಂದಿದ್ದಾರೆ. ಹೇಗೆ ನಡೆಸಿಕೊಳ್ಳ-ಬೇಕು? ಪ್ರತಿಭಟನೆಗೆ, ಅರ್ಧಗಂಟೆ ಸಮಯ ಕೊಡುತ್ತಾರೆ. ನಂತರ ಏನು ಮಾಡಬೇಕೊ ಅದನ್ನು ಪೊಲೀಸರು ಮಾಡಿದ್ದಾರೆ' ಎಂದು ಜಿ.ಪರಮೇಶ್ವರ ಹೇಳಿದರು.

ಗೆಲುವು ವಿರಳ, ಸೋಲೇ ಬಹಳ

ವಿನಾಯಕ ಕೆ.ಎಸ್.

2022 ರಲ್ಲಿ 'ಕೆಜಿಎಫ್‌–2', 'ಚಾರ್ಲಿ', 'ಕಾಂತಾರ'ದಂತಹ ಸೂಪರ್‌ಹಿಟ್ ಸಿನಿಮಾಗಳನ್ನು ಕಂಡ ಕನ್ನಡ ಚಿತ್ರರಂಗಕ್ಕೆ 2023 ನೀರಸ ವರ್ಷ. ಈ ವರ್ಷ 210ಕ್ಕೂ ಅಧಿಕ ಚಿತ್ರಗಳು ತೆರೆ ಕಂಡಿವೆ. ಆದರೆ ಗೆದ್ದ ಚಿತ್ರಗಳ ಸಂಖ್ಯೆ 10ಕ್ಕಿಂತ ಹೆಚ್ಚಿಲ್ಲ. ಮಾರಾಟದ ದೃಷ್ಟಿಯಿಂದ ನೋಡಿದರೆ ಎಲ್ಲ ಹಕ್ಕುಗಳು ಮಾರಾಟಗೊಂಡ ಚಿತ್ರಗಳ ಸಂಖ್ಯೆಯೂ 20 ದಾಟುವುದಿಲ್ಲ.

ಇನ್ನೊಂದೆಡೆ, ದಕ್ಷಿಣ ಭಾರತದ ಸಿನಿಮಾಗಳ ದೇಶವ್ಯಾಪಿ ಯಶಸ್ಸಿನಿಂದ ಹಿಂದಡಿ ಇಟ್ಟ ಸ್ಥಿತಿಯಲ್ಲಿದ್ದ ಬಾಲಿವುಡ್, ಈ ವರ್ಷ ದಿಗ್ಗನೆದ್ದು ನಿಂತಿತು. 'ಪಠಾಣ್', 'ಜವಾನ್' ಸಿನಿಮಾಗಳ ದೊಡ್ಡ ಯಶಸ್ಸು ಶಾರುಕ್ ಖಾನ್ ಮರಳಿ ಗೆಲುವಿನ ಹಳಿಗೆ ಬರಲು ಕಾರಣವಾದವು. 'ಅನಿಮಲ್' ಸಿನಿಮಾ ಹಿಂಸಾವಿನೋದದಿಂದ ದೊಡ್ಡ ಮೊತ್ತದ ಹಣವನ್ನು ಬಾಚಿಹಾಕಿತು.

ತಮಿಳಿನ 'ಜೈಲರ್' ಸಿನಿಮಾದಿಂದ ರಜನೀಕಾಂತ್ ಗೆಲುವಿನ ಟ್ರ್ಯಾಕ್‌ಗೆ ವಾಪಸಾದರು. 'ಲಿಯೊ' ಚಿತ್ರ ಬಾಕ್ಸ್‌ಆಫೀಸ್‌ನಲ್ಲಿ ಗೆದ್ದಿತು.

ನಾನಿ ಅಭಿನಯದ 'ಹಾಯ್ ನಾನ್ನಾ' ತೆಲುಗು ಚಿತ್ರದ ಛಾಪು ಮೂಡಿದ ಹೊತ್ತಿನಲ್ಲೇ 'ಸಲಾರ್' ಸದ್ದು ಎದ್ದುಕಂಡಿತು. ಪ್ರಶಾಂತ್ ನೀಲ್ ನಿರ್ದೇಶನದ ಈ ಸಿನಿಮಾ ಪ್ರಭಾಸ್‌ಗೆ ಅತ್ಯಗತ್ಯವಾಗಿದ್ದ ಗೆಲುವನ್ನು ತಂದುಕೊಟ್ಟಿತು. ವೇಣು ನಿರ್ದೇಶನದ 'ಬಲಗಂ', ನಾನಿ ಅಭಿನಯದ 'ದಸರಾ' ಕೂಡ ಗೆಲುವು ಕಂಡವು.

ದಮನಿತರ ಕತೆ ಹೇಳಿದ, ಮಾರಿ ಸೆಲ್ವರಾಜ್ ನಿರ್ದೇಶನದ 'ಮಾಮಣ್ಣನ್' ಹಾಗೂ ಸಲಿಂಗಗಳ ಕಥನಸೂಕ್ಷ್ಮ ಒಳಗೊಂಡಿದ್ದ 'ಕಾತಲ್‌-ದಿ ಕೋರ್' ಮಲಯಾಳಂ ಸಿನಿಮಾಗಳೂ ಗಮನಸೆಳೆದವು. ಜೂಡ್ ಆಂಥನಿ ನಿರ್ದೇಶಿಸಿದ '2018' ಮಲಯಾಳಂ ಸಿನಿಮಾ ಆಸ್ಕರ್ ಅಂಗಳಕ್ಕೆ ದೇಶದಿಂದ ಅಧಿಕೃತ ಪ್ರವೇಶ ಪಡೆದಿತ್ತು. ತಮಿಳು ಸಿನಿಮಾ 'ಪೊನ್ನಿಯಿನ್ ಸೆಲ್ವನ್‌–2' ಹಣ ಗಳಿಕೆಯಿಂದಷ್ಟೇ ಅಲ್ಲದೆ ಮಣಿರತ್ನಂ ಮರಳಿ ಫಾರ್ಮ್ ಕಂಡುಕೊಂಡಿರುವುದಕ್ಕೂ ಉದಾಹರಣೆಯಾಯಿತು. ಭಿನ್ನ ಸಂವೇದನೆಯ ಕಾರಣದಿಂದಾಗಿ 'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಹಿಂದಿ ಚಿತ್ರವೂ ಛಾಪು ಮೂಡಿಸಿತು.

'ಹಾಸ್ಟೆಲ್ ಹುಡುಗರ' ಹಾವಳಿ: ಈ ವರ್ಷ ಚಿತ್ರಮಂದಿರದಲ್ಲಿ ಯಶಸ್ಸು ಪಡೆದಿದ್ದು ನಿತಿನ್ ಕೃಷ್ಣಮೂರ್ತಿ ನಿರ್ದೇಶನದ ಚೊಚ್ಚಲ ಚಿತ್ರ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ'. ನಟಿ ರಮ್ಯಾ ತಾವು ಅಭಿನಯಿಸಿರುವ ದೃಶ್ಯವನ್ನು ಸಿನಿಮಾದಿಂದ ಕತ್ತರಿಸುವಂತೆ ವಿವಾದವೆಬ್ಬಿಸಿದ್ದು ಈ ಚಿತ್ರಕ್ಕೆ ವರವಾಗಿಯೇ ಪರಿಣಮಿಸಿತು.

'ಘೋಸ್ಟ್' ಗರ್ಜನೆ: ಗಾಂಧಿನಗರದ ವಿತರಕರ ಪ್ರಕಾರ ಶಿವರಾಜ್ ಕುಮಾರ್ ಅಭಿನಯಿಸಿ, ಸಂದೇಶ್ ನಾಗರಾಜ್ ನಿರ್ಮಿಸಿರುವ 'ಘೋಸ್ಟ್' ಈ ವರ್ಷ ಚಿತ್ರಮಂದಿರದಲ್ಲಿ ಗಳಿಕೆ ಕಂಡ ಈ ವರ್ಷದ ಎರಡನೇ ಅತ್ಯುತ್ತಮ ಚಿತ್ರ. ತಮಿಳಿನ 'ಜೈಲರ್' ಸಿನಿಮಾದಲ್ಲಿ ಶಿವಣ್ಣ ಕಾಣಿಸಿಕೊಂಡ ಪರಿಣಾಮವಾಗಿ 'ಘೋಸ್ಟ್'ನ ಪರಭಾಷಾ ಹಕ್ಕುಗಳು ಉತ್ತಮ ಮೊತ್ತಕ್ಕೆ ಮಾರಾಟಗೊಂಡವು.

'ಸಪ್ತಸಾಗರ' ದಾಟಿದ ರಕ್ಷಿತ್: ಈ ವರ್ಷದ ಬಹುನಿರೀಕ್ಷಿತ ಚಿತ್ರ 'ಸಪ್ತಸಾಗರದಾಚೆ ಎಲ್ಲೋ' ಮೊದಲ ಭಾಗಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಉತ್ತಮ ಗಳಿಕೆ ಕಂಡರೂ ಚಿತ್ರದ ದ್ವಿತೀಯ ಭಾಗ ನಿರೀಕ್ಷಿತ ಮಟ್ಟ ತಲುಪಲಿಲ್ಲ.

ಪಾಸಾದ 'ಕೌಸಲ್ಯ ಸುಪ್ರಜಾ ರಾಮ': ನಿರ್ದೇಶಕ ಶಶಾಂಕ್ ಚಿತ್ರಮಂದಿರಗಳಲ್ಲಿ ಚಿತ್ರ ಉಳಿಸಿಕೊಳ್ಳಲು ಹೋರಾಡಿದ ಪರಿಣಾಮವಾಗಿ ಡಾರ್ಲಿಂಗ್ ಕೃಷ್ಣ ಅಭಿನಯದ 'ಕೌಸಲ್ಯ ಸುಪ್ರಜಾ ರಾಮ' ಚಿತ್ರಮಂದಿರದಲ್ಲಿ ಗೆಲುವಿನ ನಗೆ ಬೀರಿತು.

ಮೈಸೂರು ಹುಡುಗರ 'ಟಗರು ಪಲ್ಯ': ಡಾಲಿ ಧನಂಜಯ ನಿರ್ಮಾಣದ ಈ ಸಿನಿಮಾ ಪ್ರೇಕ್ಷಕರಿಂದ ಮೆಚ್ಚುಗೆ ಪಡೆದು ಗಳಿಕೆಯಲ್ಲಿಯೂ ಆಶಾದಾಯಕ ಬೆಳವಣಿಗೆ ಕಂಡಿತು.

ಡಾಲಿ ಧನಂಜಯ ನಟನೆಯ 'ಗುರುದೇವ್ ಹೊಯ್ಸಳ', ದರ್ಶನ್ ಅಭಿನಯದ 'ಕ್ರಾಂತಿ', ಉಪೇಂದ್ರ, ಸುದೀಪ್ ನಟನೆಯ 'ಕಬ್ಜ', ರಮೇಶ್ ಅರವಿಂದ್ ನಟನೆಯ 'ಶಿವಾಜಿ ಸುರತ್ಕಲ್‌–2' ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ತೃಪ್ತಿ ತಂದುಕೊಟ್ಟ ಸಿನಿಮಾಗಳು. 'ರಾಘವೇಂದ್ರ ಸ್ಟೋರ್ಸ್', 'ಡೇರ್‌ಡೆವಿಲ್ ಮುಸ್ತಾಫಾ', '19.20.21', 'ಆರ್ಕೆಸ್ಟ್ರಾ ಮೈಸೂರು', 'ಹೊಂದಿಸಿ ಬರೆಯಿರಿ', 'ಆಚಾರ್ & ಕೋ', 'ಬ್ಯಾಡ್ ಮ್ಯಾನರ್ಸ್', 'ರಾಜಯೋಗ', 'ಕೈವ' ಚಿತ್ರಗಳಿಗೆ ಪ್ರಶಂಸೆ ವ್ಯಕ್ತವಾಯಿತು.

ಪ್ರಶಸ್ತಿ ಪುಳಕ: **ತೆಲುಗಿನ** 'ಆರ್‌ಆರ್‌ಆರ್' ಸಿನಿಮಾದ 'ನಾಟು ನಾಟು' ಹಾಡಿಗೆ ಬೆಸ್ಟ್ ಒರಿಜಿನಲ್ ಸಾಂಗ್ ವಿಭಾಗದ ಆಸ್ಕರ್ ಪ್ರಶಸ್ತಿ ಸಂದಿತು. 'ದಿ ಎಲಿಫೆಂಟ್ ವಿಸ್ಪರರ್ಸ್'ಗೆ ಅತ್ಯುತ್ತಮ ಸಾಕ್ಷಚಿತ್ರ ಆಸ್ಕರ್ ಪ್ರಶಸ್ತಿ ಲಭಿಸಿತು. ಹಿಂದಿ ನಟಿ ವಹೀದಾ ರೆಹಮಾನ್ ಅವರಿಗೆ ಈ ವರ್ಷ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಒಲಿಯಿತು. 67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟವಾದಾಗ ಕನ್ನಡದಲ್ಲಿ '777 ಚಾರ್ಲಿ'ಗೆ ಗರಿ ಸಿಕ್ಕಿತು. ಆರ್. ಮಾಧವನ್ ಅವರ 'ರಾಕೆಟ್ರಿ: ದಿ ನಂಬಿ ಎಫೆಕ್ಟ್' ಚಿತ್ರಕ್ಕೆ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯು ಸಂದಿತು. ಅಲ್ಲು ಅರ್ಜುನ್ ಶ್ರೇಷ್ಠ ನಟ ಎನಿಸಿಕೊಂಡರೆ, ಆಲಿಯಾ ಭಟ್ ಶ್ರೇಷ್ಠ ನಟಿ ಪ್ರಶಸ್ತಿಗೆ ಭಾಜನರಾದರು.

ಸಾಲು ಸಾಲು ವಿವಾದಗಳು

- 'ಪಠಾಣ್' ಸಿನಿಮಾದ ಹಾಡೊಂದರಲ್ಲಿ ದೀಪಿಕಾ ಪಡುಕೋಣೆ ಕೇಸರಿ ಬಿಕಿನಿ ತೊಟ್ಟಿದ್ದು ವಿವಾದವಾಗಿತ್ತು.
- ವಿಷ್ಣು ಸಮಾಧಿ ವಿವಾದ ಮತ್ತೆ ರೆಕ್ಕೆಪುಕ್ಕ ಪಡೆದುಕೊಂಡಿತು
- ಬೆಂಗಳೂರಿನಲ್ಲಿ 'ಚಿಕ್ಕು' ಸಿನಿಮಾದ ಪ್ರಚಾರದ ಸಂದರ್ಭ ತಮಿಳು ನಟ ಸಿದ್ಧಾರ್ಥ್‌ಗೆ ಕಾವೇರಿ ಹೋರಾಟದ ಬಿಸಿ ತಟ್ಟಿತ್ತು. ಪತ್ರಿಕಾಗೋಷ್ಠಿಗೆ ಕೆಲವರು ಅಡ್ಡಿಪಡಿಸಿದ್ದರು.
- ತಮಗೆ ನಟ ಸುದೀಪ್ ಡೇಟ್ಸ್ ಕೊಡದೆ ವರ್ಷಗಳಿಂದ ಸತಾಯಿಸುತ್ತಿದ್ದಾರೆ ಎಂದು ನಿರ್ಮಾಪಕ ಕೆಸಿಎನ್ ಕುಮಾರ್ ತಕರಾರು ತೆಗೆದಿದ್ದರು.
- 'ಉರಿಗೌಡ-ನಂಜೇಗೌಡ' ಸಿನಿಮಾ ನಿರ್ಮಿಸುವುದಾಗಿ ಬಿಜೆಪಿ ಶಾಸಕ ಮುನಿರತ್ನ ಹೇಳಿದ್ದು ವಿವಾದವಾಗಿತ್ತು.
- ಜಾತಿನಿಂದನೆ ಆರೋಪದಡಿ ನಟ ಉಪೇಂದ್ರ ಅವರ ಮೇಲೆ ಬೆಂಗಳೂರಿನ ಚನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಯಿತು.

ಅಗಲಿದ ಪ್ರಮುಖರು: ನಟಿ ಲೀಲಾವತಿ, 'ಅಮೃತವರ್ಷಿಣಿ' ನಟ ಶರತ್ ಬಾಬು, ನಟ ಲಕ್ಷ್ಮಣ್, ನಿರ್ಮಾಪಕ ಕೆ.ಸಿ. ಮೋಹನ್, ನಟ ಸಂಪತ್ ಜಯರಾಮ್, ಸಾಹಸ ನಿರ್ದೇಶಕ ಜಾಲಿ ಬಾಸ್ಟಿಯನ್.

ಪ್ರಚಾರದ ಹೊಸ ಪರಿ

ಬಿ.ಎಸ್. ಲಿಂಗದೇವರು ನಿರ್ದೇಶನದ 'ವಿರಾಟಪುರ ವಿರಾಗಿ' ಚಿತ್ರವು ಹಾನಗಲ್ ವಿರಕ್ತ ಮಠದ ಕುಮಾರಸ್ವಾಮಿಗಳ ಬದುಕಿನ ಕಥನ ಒಳಗೊಂಡಿದ್ದ ಸಿನಿಮಾ. ಬಿಡುಗಡೆಗೆ ಮೊದಲೇ ರಾಜ್ಯದ ವಿವಿಧೆಡೆ 75 ಸಾವಿರ ಟಿಕೆಟ್‌ಗಳನ್ನು ಮಾರಾಟ ಮಾಡಿದ್ದು, ಸುಮಾರು 160 ಪ್ರೀಮಿಯರ್ ಶೋಗಳನ್ನು ತೋರಿಸಿದ್ದು ಹೊಸ ಪ್ರಯೋಗವೇ ಹೌದು. ಜನವರಿ 26ಕ್ಕೆ ಬಿಡುಗಡೆಯಾಗಲಿರುವ 'ಹದಿನೇಳೆಂಟು' ಹಾಗೂ 'ಕೋಳಿ ಎಸ್ರು' ಸಿನಿಮಾಗಳು ಒಟ್ಟಾಗಿ ಪ್ರಚಾರಕ್ಕೆ ಇಳಿದಿರುವುದು ಆಸಕ್ತಿಕರ ಪ್ರಯೋಗ.

ಗಮನ ಸೆಳೆದ ಹೊಸ ನಿರ್ದೇಶಕರು

ನಿತಿನ್ ಕೃಷ್ಣಮೂರ್ತಿ-'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ', ಉಮೇಶ್ ಕೆ.ಕೃಪಾ- 'ಟಗರು ಪಲ್ಯ', ಶಶಾಂಕ್ ಸೋಗಲ್-'ಡೇರ್‌ಡೆವಿಲ್ ಮುಸ್ತಾಫಾ', ಸುನಿಲ್ ಮೈಸೂರು-'ಆರ್ಕೆಸ್ಟ್ರಾ ಮೈಸೂರು', ರಾಮೇನಹಳ್ಳಿ ಜಗನ್ನಾಥ್- 'ಹೊಂದಿಸಿ ಬರೆಯಿರಿ', ಸಿಂಧು ಶ್ರೀನಿವಾಸ ಮೂರ್ತಿ- 'ಆಚಾರ್ & ಕೋ' ಈ ವರ್ಷ ಗಮನ ಸೆಳೆದ ಹೊಸ ನಿರ್ದೇಶಕರು.

'ಪ್ರಜಾವಾಣಿ ಸಿನಿ ಸಮ್ಮಾನ'

ಪ್ರಜಾವಾಣಿ ಪತ್ರಿಕೆಗೆ 75 ವರ್ಷ ತುಂಬಿದ ಸಂದರ್ಭದಲ್ಲಿ, 'ಸಿನಿ ಸಮ್ಮಾನ'ದ ಮೂಲಕ ಪತ್ರಿಕೆ ಹಾಗೂ ಕನ್ನಡ ಸಿನಿಮಾ ನಂಟಿಗೆ ಹೊಸ ಆಯಾಮ ದೊರಕಿತು. 2023ರ ಜೂನ್ 3ರಂದು ಬೆಂಗಳೂರಿನಲ್ಲಿ ನಡೆದ 'ಸಿನಿ ಸಮ್ಮಾನ'ದ ಅದ್ದೂರಿ ಕಾರ್ಯಕ್ರಮದಲ್ಲಿ 2022ರಲ್ಲಿ ತೆರೆಕಂಡ ಕನ್ನಡ ಚಿತ್ರಗಳಿಗೆ ಪ್ರಶಸ್ತಿ ಕೊಡುವ ಪರಿಪಾಟಕ್ಕೆ ಚಾಲನೆ ದೊರೆಯಿತು.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಪ್ರಜಾವಾಣಿ ನೋಡಿಯೊ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ





ತೆರೆಯಲ್ಲಿ 'ಕಾಟೇರ' ಅಬ್ಬರ

ನಟ ದರ್ಶನ್ ಅಭಿನಯದ, ತರುಣ್ ಸುಧೀರ್ ನಿರ್ದೇಶಿಸಿರುವ 'ಕಾಟೇರ' ಬಿಡುಗಡೆಗೂ ಮೊದಲೇ ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡಿದೆ. ಸಿನಿಮಾ ಇಂದು(ಡಿ.29) ತೆರೆಕಂಡಿದ್ದು, 'ಆನ್‌ಲೈನ್ ಮೂಲಕವೇ ಒಂದು ಲಕ್ಷಕ್ಕೂ ಅಧಿಕ ಟಿಕೆಟ್‌ಗಳು ಮಾರಾಟವಾಗಿವೆ' ಎಂದು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ತಿಳಿಸಿದ್ದಾರೆ.

ಗುರುವಾರ ನಡುರಾತ್ರಿಯೇ ನಡೆದ ಫ್ಯಾನ್ ಶೋ ಭರ್ತಿಯಾಗಿದೆ. ಕೆಲ ಏಕಪರದೆ ಚಿತ್ರಮಂದಿರಗಳಲ್ಲಿ ದಿನಕ್ಕೆ 5–6 ಪ್ರದರ್ಶನಗಳು ನಿಗದಿಯಾಗಿವೆ. ರಾಜ್ಯದ 500ಕ್ಕೂ ಅಧಿಕ ಚಿತ್ರಮಂದಿರಗಳ ಸಾವಿರಕ್ಕೂ ಅಧಿಕ ಪರದೆಗಳಲ್ಲಿ 'ಕಾಟೇರ' ಪ್ರದರ್ಶನ ಕಾಣಲಿದೆ. 'ಮಿಡ್‌ನೈಟ್ ಶೋದ ಟಿಕೆಟ್‌ಗಳು ಕ್ಷಣಮಾತ್ರದಲ್ಲೇ ಮಾರಾಟವಾಗಿವೆ. ನಿರ್ಮಾಪಕನಾಗಿ ಹಿಂದೆಂದೂ ಇಂತಹ ಕ್ರೇಜ್ ಕಂಡಿರಲಿಲ್ಲ. ನನ್ನದೇ ಮಾಲ್‌ನಲ್ಲಿ ಇದೇ ಮೊದಲ ಬಾರಿಗೆ ಕನ್ನಡ ಸಿನಿಮಾವೊಂದಕ್ಕೆ ಪ್ರತಿ ಟಿಕೆಟ್‌ಗೆ ₹1 ಸಾವಿರ ನಿಗದಿಪಡಿಸಿ ಮಿಡ್‌ನೈಟ್ ಶೋ ಇರಿಸಿದ್ದೇನೆ. ಇದರ ಬಹುತೇಕ ಎಲ್ಲ ಟಿಕೆಟ್‌ಗಳು ಮಾರಾಟವಾಗಿವೆ. ಟಿಕೆಟ್ ದರ ₹500 ಇಟ್ಟರೂ ಮಾರಾಟವಾಗಿದೆ. ಇದು ಕನ್ನಡ ಸಿನಿಮಾ ಮೇಲೆ ಜನರಿಗಿರುವ ಕ್ರೇಜ್ ತೋರಿಸಿದೆ' ಎನ್ನುತ್ತಾರೆ ರಾಕ್‌ಲೈನ್ ವೆಂಕಟೇಶ್. 'ಗುರು ಶಿಷ್ಯರು' ಚಿತ್ರದ ನಂತರ ನಿರ್ದೇಶಕರಾದ ತರುಣ್ ಹಾಗೂ ಜಡೇಶ್ ಸೇರಿ 'ಕಾಟೇರ' ಕಥೆ ಹೆಣೆದಿದ್ದು, ದರ್ಶನ್ ಅವರಿಗಾಗಿಯೇ ಈ ಸಿನಿಮಾದ ಕಥೆ ಮಾಡಿದ್ದಾರೆ. ಮಾಲಾಶ್ರೀ ಪುತ್ರಿ ಆರಾಧನಾ ಈ ಚಿತ್ರದ ನಾಯಕಿ. ಇದು ತರುಣ್ ಅವರ ನಿರ್ದೇಶನದ ಮೂರನೇ ಚಿತ್ರವಾಗಿದ್ದು, 1970ರ ಕಾಲಘಟ್ಟದಲ್ಲಿ ನಡೆಯುವ ಕಥೆ ಹೊಂದಿದೆ.

ನಿರೂಪ್‌ಗೆ ಬೃಂದಾ ಜೋಡಿ



ಸ್ಯಾಂಡಲ್‌ವುಡ್‌ನಲ್ಲಿ ದಿನ ಉರುಳಿದಂತೆ ತಮ್ಮ ಸಿನಿ ಬ್ಯಾಂಕ್ ಹಿಗ್ಗಿಸಿಕೊಳ್ಳುತ್ತಿರುವವರು ನಟಿ ಬೃಂದಾ ಆಚಾರ್ಯ. ಕಿರುತೆರೆಯ ಮೂಲಕ ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟ ಬೃಂದಾ, 'ನೆನಪಿರಲಿ' ಪ್ರೇಮ್ ಅವರ 25ನೇ ಸಿನಿಮಾ 'ಪ್ರೇಮಂ ಪೂಜ್ಯಂ' ಮೂಲಕ ನಾಯಕಿಯಾಗಿ ಸ್ಯಾಂಡಲ್‌ವುಡ್ ಪ್ರವೇಶಿಸಿದರು. ಇದೀಗ ಬೃಂದಾ, ನಟ ನಿರೂಪ್ ಭಂಡಾರಿಗೆ ಜೋಡಿಯಾಗಲಿದ್ದಾರೆ.

ಸಚಿನ್ ವಾಲಿ ಆ್ಯಕ್ಷನ್ ಕಟ್ ಹೇಳುತ್ತಿರುವ ಹೊಸ ಸಿನಿಮಾವೊಂದರಲ್ಲಿ ಬೃಂದಾ ನಾಯಕಿಯಾಗಿ ನಟಿಸಲಿದ್ದಾರೆ. ಇದೇ ಚಿತ್ರದಲ್ಲಿ ನಟಿ ಅಂಕಿತಾ ಅಮರ್ ವರದಿಗಾರ್ತಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಬೃಂದಾ ಸೋಶಿಯಲ್ ಮೀಡಿಯಾ ಇನ್‌ಫ್ಲೂಯೆನ್ಸರ್ ಆಗಿ ನಟಿಸಲಿದ್ದಾರೆ.

'ಪ್ರಜಾವಾಣಿ' ವರದಿ ಪ್ರಸ್ತಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ: ಎಚ್ಚೆತ್ತುಕೊಂಡ ಅಧಿಕಾರಿಗಳು

ಬಾಲ ಗರ್ಭಿಣಿಯರು: 3 ದಿನ, 39 ಎಫ್‌ಐಆರ್

• ಕೆ.ಓಂಕಾರ ಮೂರ್ತಿ

ಕೋಲಾರ: ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಬಾಲ್ಯವಿವಾಹ ಸಂಬಂಧ ಕೇವಲ ಮೂರು ದಿನಗಳಲ್ಲಿ 39 ಎಫ್‌ಐಆರ್‌ಗಳು ದಾಖಲಾಗಿವೆ. ಇನ್ನೂ 20 ಪ್ರಕರಣ ದಾಖಲಿಸುವ ಕುರಿತ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಗಡಿ ಜಿಲ್ಲೆ ಕೋಲಾರದಲ್ಲಿ 18 ವರ್ಷ ತುಂಬುವ ಮುನ್ನವೇ ಗರ್ಭಿಣಿ ಆಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಕಳೆದ ಎಂಟು ತಿಂಗಳಲ್ಲಿ 98 ಬಾಲ್ಯ ವಿವಾಹ ಪ್ರಕರಣ ವರದಿಯಾಗಿವೆ.

ಈ ಬೆಳವಣಿಗೆ ಕುರಿತು 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾಗುತ್ತಲೇ ಎಚ್ಚೆತ್ತ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಹಾಗೂ ಪೊಲೀಸರು ತ್ವರಿತಗತಿಯಲ್ಲಿ ಕ್ರಮ ಕೈಗೊಂಡಿದ್ದಾರೆ.

ಬಾಲ್ಯ ವಿವಾಹ ನಿಷೇಧ ಕಾಯ್ದೆ ಅಡಿ ಬಾಲ ಗರ್ಭಿಣಿಯರ ಪೋಷಕರು, ಪತಿ ಸೇರಿದಂತೆ ಹಲವರ ಮೇಲೆ ಪ್ರಕರಣ ದಾಖಲಾಗಿದೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ಮುಂದಾಗಿದ್ದಾರೆ.

ಮುಖ್ಯಾಂಶಗಳು


- ಇನ್ನೂ 20 ಪ್ರಕರಣ ದಾಖಲಿಸಲು ಸಿದ್ಧತೆ
- ಬಾಲ್ಯ ವಿವಾಹ ನಿಷೇಧ ಕಾಯ್ದೆ ಅಡಿ ಎಫ್‌ಐಆರ್
- 98 ಪ್ರಕರಣಗಳಲ್ಲಿ 13 ಮಂದಿ ಹೊರರಾಜ್ಯದವರು

'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ವರದಿ ಗಮನಿಸಿ ಜಿಲ್ಲಾ ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆಯಿಂದ ಅಧಿಕೃತ ಮಾಹಿತಿ ಪಡೆದು ಎಫ್‌ಐಆರ್ ದಾಖಲಿಸುತ್ತಿದ್ದೇವೆ

ನಾಗರತ್ನಾ
ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ

'98 ಬಾಲ ಗರ್ಭಿಣಿಯರ ಪ್ರಕರಣಗಳಲ್ಲಿ 13 ಮಂದಿ ಹೊರ-ರಾಜ್ಯದವರು. ಇಲ್ಲಿ ಬಂದು ಚಿಕಿತ್ಸೆ ಪಡೆದಿದ್ದಾರೆ. ಈ ಪ್ರಕರಣಗಳನ್ನು ಆಯಾ ರಾಜ್ಯಗಳಿಗೆ ವರ್ಗಾಯಿಸಲಾಗುವುದು. ಎಂಟು ಮಂದಿಯ ವಿಳಾಸ, ದಾಖಲೆ ಲಭಿಸಿಲ್ಲ. 18 ಮಂದಿಯ ಶಾಲೆ ದಾಖಲಾತಿ ಪರಿಶೀಲಿಸಿದಾಗ 18 ವರ್ಷವಾಗಿರುವುದು ಗೊತ್ತಾಗಿದೆ' ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ನಾಗರತ್ನಾ 'ಪ್ರಜಾವಾಣಿ'ಗೆ ತಿಳಿಸಿದರು.

98 ಬಾಲ ಗರ್ಭಿಣಿಯರ ವಿಚಾರ ಜಿಲ್ಲೆಯ ಆರೋಗ್ಯ ಇಲಾಖೆಯ ಆರ್‌ಸಿಎಚ್ (ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ) ಪೋರ್ಟಲ್‌ನಲ್ಲಿ 2023ರ ಏಪ್ರಿಲ್‌ನಿಂದ ನವೆಂಬರ್‌ವರೆಗೆ ದಾಖಲಾಗಿದೆ. ಗರ್ಭಿಣಿಯರು ತಾಯಿ ಕಾರ್ಡ್ ಪಡೆಯಲು ಬಂದಾಗ ಅವರ ವಯಸ್ಸು ತಿಳಿಯುತ್ತದೆ.



ದಿನಾಂಕ 16.12.2023 ರಂದು ಪ್ರಜಾವಾಣಿ ದಿನ ಪತ್ರಿಕೆಯಲ್ಲಿ 98 ಹದಿಹರೆಯ ಬಾಲಕಿಯರು ಬಾಲ್ಯವಿವಾಹವಾಗಿ ಬಾಲಗರ್ಭಿಣಿಯಾಗಿರುವ ಬಗ್ಗೆ ಪ್ರಕಟಗೊಂಡಿರುವ ಮಾಹಿ... ಮೇರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಅಧಿಕೃತ ಮಾಹಿತಿ ಪಡೆದು ಇದುವರೆಗೂ ಬಾಲ್ಯವಿವಾಹಕ್ಕೆ ಕಾರಣರಾದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲ... ಎಫ್.ಐ.ಆರ್. ದಾಖಲಿಸಿರುವ ವಿವರ:

ತಾಲ್ಲೂಕು ಹೆಸರು	ಒಟ್ಟು ಪ್ರಕರಣಗಳ ಸಂಖ್ಯೆ	ಇಲ್ಲಿವರೆಗೂ ಎಫ್.ಐ.ಆರ್. ದಾಖಲಿಸಿರುವ ಪ್ರಕರಣಗಳ ಸಂಖ್ಯೆ	18 ವರ್ಷ ಪೂರ್ಣಗೊಂಡ ಪ್ರಕರಣಗಳ ಸಂಖ್ಯೆ	ಪೊಲೀಸ್ ಠಾಣಾ ಹಂತದಲ್ಲಿ ಎಫ್.ಐ.ಆರ್. ದಾಖಲಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ	ಅಂತರಾಜ್ಯ ಪ್ರಕರಣಗಳ ಸಂಖ್ಯೆ	ದಾಖಲೆಗಳನ್ನು ಪಡೆಯಲು/ಎಫ್.ಐ.ಆರ್. ದಾಖಲಿಸಲು ಬಾಕಿ ಪ್ರಕರಣಗಳ ಸಂಖ್ಯೆ
ಕೋಲಾರ	22	12	06	00	04	00

ಕೋಲಾರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಕೈಗೊಂಡಿರುವ ವರದಿಯಲ್ಲಿ 'ಪ್ರಜಾವಾಣಿ' ವರದಿ ಉಲ್ಲೇಖ


ಬಾಲ್ಯ ವಿವಾಹ ಸಂಬಂಧ ಎಫ್‌ಐಆರ್

ತಾಲ್ಲೂಕು	ಪ್ರಕರಣ	ಎಫ್‌ಐಆರ್
ಕೋಲಾರ	22	12
ಕೆಜಿಎಫ್	10	06
ಬಂಗಾರಪೇಟೆ	14	10
ಮುಳಬಾಗಿಲು	11	04
ಮಾಲೂರು	27	07
ಶ್ರೀನಿವಾಸಪುರ	14	00
ಒಟ್ಟು	98	39

ಮುಖ್ಯಮಂತ್ರಿ ಸೂಚನೆ

ಕೋಲಾರದಲ್ಲಿ ಬುಧವಾರ ನಡೆದ ಪ್ರಗತಿ ಪರಿಶೀಲನೆ ಸಭೆ ಹಾಗೂ ಪತ್ರಿಕಾಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಪ್ರಜಾವಾಣಿ' ವರದಿಯನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದರು.

ಎಂಟು ತಿಂಗಳಲ್ಲಿ 98 ಬಾಲ್ಯ ವಿವಾಹ ಪ್ರಕರಣ ಕುರಿತು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವಿಶೇಷ ವರದಿಯನ್ನು ಅಧಿಕಾರಿಗಳಿಗೆ ಸಭೆಯಲ್ಲಿಯೇ ತೋರಿಸಿ, 'ಈಗಾಗಲೇ ಎಫ್‌ಐಆರ್ ದಾಖಲಿಸಲಾಗಿದೆ. ಕಠಿಣ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದರು.



ಪ್ರಜಾವಾಣಿ
ಗಡಿ ಜಿಲ್ಲೆ ಕೋಲಾರದಲ್ಲಿ ಆತಂಕಕಾರಿ ಸಂಗತಿ; 18ರ ಪ್ರಾಯಕ್ಕೆ ಮುನ್ನವೇ ತಾಯ್ತನ
8 ತಿಂಗಳಲ್ಲಿ 98 ಬಾಲ ಗರ್ಭಿಣಿಯರು!

'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ವರದಿ

ಸುದ್ದಿ 2 ನಿಮಿಷ

'ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಬಿಜೆಪಿಗೆ ನೈತಿಕ ಹಕ್ಕಿಲ್ಲ'

ಮಡಿಕೇರಿ: 'ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಬಿಜೆಪಿಗೆ ನೈತಿಕ ಹಕ್ಕಿಲ್ಲ ಎಂಬುದಕ್ಕೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಈಚೆಗೆ ಮಾಡಿರುವ ಆರೋಪವೇ ಸಾಕ್ಷಿ' ಎಂದು ವಿಧಾನಪರಿಷತ್ ಸದಸ್ಯ ಜಗದೀಶ್ ಶೆಟ್ಟರ್ ಅವರು ಹೇಳಿದರು.



ಕುಶಾಲನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ ಅವರು, 'ಈ ಬಗ್ಗೆ ಸರ್ಕಾರ ಈಗಾಗಲೇ ತನಿಖೆಗೆ ಆದೇಶಿಸಿದೆ. ವರದಿ ಬಂದ ಬಳಿಕ ಸತ್ಯಾಸತ್ಯತೆ ತಿಳಿಯಲಿದೆ. ಅಂತಹ ಪಕ್ಷಕ್ಕೆ ನಾನು ಮತ್ತೆ ಹೋಗುವುದಿಲ್ಲ' ಎಂದು ಅವರು ಹೇಳಿದರು.

'ಕನ್ನಡ ಭಾಷೆ ಬಳಕೆ ಕುರಿತು ಜಾಗೃತಿ ಮೂಡಿಸಬೇಕು. ಕಾನೂನು ಕೈಗೆ ತೆಗೆದುಕೊಂಡರೆ ಕೊನೆ ಇರುವುದಿಲ್ಲ. ಬೆಂಗಳೂರಿನಲ್ಲಿ ಅನ್ಯಭಾಷೆ ನಾಮಫಲಕಗಳನ್ನು ಕಿತ್ತು ಹಾಕಿದ ಘಟನೆಗಳಿಂದ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ' ಎನ್ನಲಾಗದು' ಎಂದು ಹೇಳಿದರು.

ಚಾಮರಾಜನಗರದಿಂದ ಖರ್ಗೆ ಸ್ಪರ್ಧೆ ಚರ್ಚೆಯಾಗಿಲ್ಲ: ಎಚ್‌ಸಿಎಂ

ಮೈಸೂರು: 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸುವ ವಿಚಾರ ಪಕ್ಷದ ಮಟ್ಟದಲ್ಲಿ ಚರ್ಚೆಯಾಗಿಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, 'ಖರ್ಗೆಯವರು ಇಲ್ಲಿ ಸ್ಪರ್ಧಿಸುತ್ತಾರೆ ಎಂಬುದೆಲ್ಲವೂ ಅಂತೆ-ಕಂತೆಯಷ್ಟೆ' ಎಂದರು.

'ಅಧ್ಯಕ್ಷರು ಇಲ್ಲಿ ಸ್ಪರ್ಧಿಸಿದರೆ ಸಂತೋಷ. ಲಕ್ಷ ಮತಗಳ ಅಂತರದಿಂದ ಗೆಲ್ಲಿಸುತ್ತೇವೆ. ಅವರು ನಮ್ಮ ರಾಷ್ಟ್ರೀಯ ನಾಯಕರು. ಬಯಸಿದರೆ ಎಲ್ಲಿ ಬೇಕಾದರೂ ಸ್ಪರ್ಧಿಸಬಹುದು' ಎಂದರು.

ಪ್ರಮುಖರ ಸಮಿತಿಯ ಗಮನಕ್ಕೆ ತರದೇ ನಿರ್ಧಾರ ಬೇಡ; ಬಿ.ವೈ. ವಿಜಯೇಂದ್ರಗೆ ತಾಕೀತು

ಪದಾಧಿಕಾರಿ ಪಟ್ಟಿಗೆ ಬಿಜೆಪಿ ಹಿರಿಯರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯರ ಜತೆ ಸಮಾಲೋಚನೆ ನಡೆಸದೇ ಬಿಜೆಪಿ ರಾಜ್ಯ ಘಟಕದ ಪದಾಧಿಕಾರಿಗಳನ್ನು ನೇಮಕ ಮಾಡಿದ ಬಿ.ವೈ. ವಿಜಯೇಂದ್ರ ಅವರ ನಿರ್ಧಾರಕ್ಕೆ ಪಕ್ಷದ ಪ್ರಮುಖರ ಸಮಿತಿಯ ಸಭೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ವಿಜಯೇಂದ್ರ ನೇಮಕವಾದ ಬಳಿಕ, ಪ್ರಮುಖರ ಸಮಿತಿಯ ಮೊದಲ ಸಭೆ ಗುರುವಾರ ನಡೆಯಿತು. 'ಪಕ್ಷದ ಸಂಘಟನೆಗೆ ಸಂಬಂಧಿಸಿದಂತೆ ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಪ್ರಮುಖರ ಸಮಿತಿಯ ಒಪ್ಪಿಗೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು' ಎಂಬ ಸೂಚನೆಯನ್ನು ವಿಜಯೇಂದ್ರ ಅವರಿಗೆ ಸಮಿತಿ ನೀಡಿದೆ.

ಇದಕ್ಕೆ ಸಮ್ಮತಿ ಸೂಚಿಸಿದ ವಿಜಯೇಂದ್ರ, 'ಇನ್ನು ಮುಂದೆ ಮಹತ್ವದ ತೀರ್ಮಾನಗಳನ್ನು ಪ್ರಮುಖ ನಾಯಕರ ಸಮಿತಿ ಸಭೆಯಲ್ಲಿ ಚರ್ಚಿಸಿಯೇ ತೆಗೆದುಕೊಳ್ಳುತ್ತೇನೆ. ತಕ್ಷಣವೇ ಪಟ್ಟಿ ಕಳುಹಿಸಿ ಎಂದು ವರಿಷ್ಠರು ಸೂಚಿಸಿದ್ದರಿಂದ ಸಮಾಲೋಚನೆ ಮಾಡಲು ಸಮಯ ಸಿಗಲಿಲ್ಲ. ತಕ್ಷಣವೇ ಪಟ್ಟಿ ಕಳುಹಿಸಬೇಕಾಯಿತು' ಎಂದು ಸಮಜಾಯಿಷಿ ನೀಡಿದರು ಎಂದು ಗೊತ್ತಾಗಿದೆ.

'ಪದಾಧಿಕಾರಿಗಳ ಪಟ್ಟಿ ಕಳುಹಿಸುವಾಗ ನನ್ನ ಬಳಿ ಈ ವಿಷಯ ಪ್ರಸ್ತಾಪಿಸಲಿಲ್ಲ. ನಿಮ್ಮ ಬಳಿ ಪ್ರಸ್ತಾಪಿಸಲಾಯಿಯಿತೇ' ಎಂದು ಹಿರಿಯ ನಾಯಕರೊಬ್ಬರು ಪ್ರಶ್ನಿಸಿದಾಗ, ಉಳಿದ ನಾಯಕರು 'ಇಲ್ಲ' ಎಂದರು. 'ಏಕಪಕ್ಷೀಯ ಧೋರಣೆ ಸರಿಯಲ್ಲ. ಮೊನ್ನೆ ಆಗಿದ್ದು ಆಗಿ ಹೋಯಿತು ಏನೂ ಮಾಡಲು ಆಗುವುದಿಲ್ಲ. ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸಬೇಕು' ಎಂದು ಕಿವಿಮಾತು ಹೇಳಿದರು.

'ಜಿಲ್ಲಾ ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳ ನೇಮಕದ ವೇಳೆಯಲ್ಲಿ ಎಚ್ಚರಿಕೆ ವಹಿಸಬೇಕು. ಪ್ರತಿಯೊಂದು ಜಿಲ್ಲೆಯಲ್ಲೂ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಹಿರಿಯರ ಸಲಹೆ ಪಡೆದುಕೊಳ್ಳಬೇಕು' ಎಂದು ಸಂಸದ ಡಿ.ವಿ.ಸದಾನಂದಗೌಡ ಸಲಹೆ ನೀಡಿದರು.

ಇದಕ್ಕೆ ಧ್ವನಿಗೂಡಿಸಿದ ಬಸವರಾಜ ಬೊಮ್ಮಾಯಿ, 'ಇತ್ತೀಚೆಗೆ ಹಾವೇರಿ ಜಿಲ್ಲೆಯ ಒಬ್ಬರನ್ನು ನೇಮಕ ಮಾಡಲಾಗಿದೆ. ಅವರು ಯಾರು ಎಂಬುದೇ ನನಗೆ ಗೊತ್ತಿಲ್ಲ' ಎಂದು ಹೇಳಿದರು.

'ಪ್ರತಿ 15 ದಿನಗಳಿಗೊಮ್ಮೆ ಸಭೆ ಸೇರಿ ಪ್ರಮುಖ ವಿಷಯಗಳನ್ನು ಚರ್ಚಿಸುವುದು ಸೂಕ್ತ. ಇದರಿಂದ ಹಲವು ವಿಚಾರಗಳ ಬಗ್ಗೆ ಮುಕ್ತವಾಗಿ ಮಾತನಾಡಲು ಸಾಧ್ಯವಾಗುತ್ತದೆ' ಎಂದು ಸಿ.ಟಿ.ರವಿ ಸಲಹೆ ನೀಡಿದರು ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಶಾಸಕ ಬಸವರಾಜ ಬೊಮ್ಮಾಯಿ, ಸಂಸದ ಡಿ.ವಿ.ಸದಾನಂದಗೌಡ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸಪೂಜಾರಿ ಇದ್ದರು.

ಯತ್ನಾಳಗೆ 'ವರಿಷ್ಠರ ಮದ್ದು': ಹಿರಿಯರ ಸಲಹೆ

ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ವಿರುದ್ಧ ಪಕ್ಷದ ವರಿಷ್ಠರೇ ಸೂಕ್ತ ಮದ್ದು ಅರೆಯಬೇಕು ಎಂಬ ಅಭಿಪ್ರಾಯ ಪಕ್ಷದ ಹಿರಿಯರ ಸಭೆಯಲ್ಲಿ ವ್ಯಕ್ತವಾಯಿತು. ಆದರೆ, ಇನ್ನೂ ಕೆಲ ನಾಯಕರು ವರಿಷ್ಠರ ಮೂಲಕವೇ ಅವರಿಗೆ ಬುದ್ಧಿವಾದ ಹೇಳಿಸಿ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಸೂಕ್ತ ಎಂಬ ಸಲಹೆಯೂ ಸಭೆಯಲ್ಲಿ ವ್ಯಕ್ತವಾಯಿತು ಎಂದು ಮೂಲಗಳು ಹೇಳಿವೆ.

'ಎಲ್ಲ ವಿಚಾರಗಳನ್ನು ವರಿಷ್ಠರ ಗಮನಕ್ಕೆ ತರುವುದು ಸೂಕ್ತ. ಅವರೇ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿ. ಪ್ರತಿನಿತ್ಯ ಪಕ್ಷ ಮತ್ತು ನಾಯಕರ ವಿರುದ್ಧವೇ ಮಾತನಾಡುವ ಮೂಲಕ ಸಂಘಟನೆ ಮತ್ತು ಕಾರ್ಯಕರ್ತರ ಸ್ಥೈರ್ಯ ಕುಂದಿಸುತ್ತಿದ್ದಾರೆ. ಪಕ್ಷಕ್ಕೆ ಹಾನಿ ಮಾಡುತ್ತಿದ್ದಾರೆ. ಪ್ರತಿ ದಿನವೂ ಒಬ್ಬರ ಬಗ್ಗೆ ಮಾತನಾಡುತ್ತಾ ಹೋಗುತ್ತಾರೆ. ಎಷ್ಟು ದಿನ ಸಹಿಸಿಕೊಂಡಿರಲು ಸಾಧ್ಯ' ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

'ಬಾಹ್ಯವಾಗಿ ಯಾರೂ ಯತ್ನಾಳ ಅವರ ಬಗ್ಗೆ ಮಾತನಾಡುವುದು ಬೇಡ. ಅವರನ್ನು ನಿರ್ಲಕ್ಷಿಸುವುದು ಸೂಕ್ತ' ಎಂದು ಕೆಲವರು ಹೇಳಿದರು.

'ಹಿರಿಯರ ಶಕ್ತಿಯೇ ಆಸರೆ'

'ಬಿಜೆಪಿಯ ಬೃಹದಾದ ಕಟ್ಟಡ ಮಾತ್ರ ನಮಗೆ ಕಾಣುತ್ತದೆ. ಆದರೆ, ಕಟ್ಟಡದ ಅಡಿಪಾಯ ನಮಗೆ ಗೋಚರಿಸುವುದಿಲ್ಲ. ಬಿಜೆಪಿಗೆ ಸುಭದ್ರ ಬುನಾದಿ ಹಾಕಿದ ಹಿರಿಯರು ನನಗೆ ಈ ಜವಾಬ್ದಾರಿಯನ್ನು ನೀಡಿದ್ದಾರೆ. ಅವರೆಲ್ಲರೂ ಪಕ್ಷವನ್ನು ಮುನ್ನಡೆಸಲು ಮಾರ್ಗದರ್ಶನ ಮಾಡಬೇಕು' ಎಂದು ವಿಜಯೇಂದ್ರ ಮನವಿ ಮಾಡಿದರು.

ಹಿರಿಯರ ಸಭೆಯಲ್ಲಿ ಮಾತನಾಡಿದ ಅವರು, 'ಎಲ್ಲ ಹಿರಿಯರು ಪಕ್ಷದ ಭವಿಷ್ಯದ ದೃಷ್ಟಿಯಿಂದ ಮತ್ತು ಪಕ್ಷಕ್ಕೆ ಶಕ್ತಿ ತುಂಬಲು ಮಾರ್ಗದರ್ಶನ, ಸಲಹೆ, ಸೂಚನೆಗಳನ್ನು ಮುಕ್ತವಾಗಿ ಕೊಡಬೇಕು' ಎಂದು ವಿನಂತಿಸಿದರು.

ನಾಲ್ವರ ಅಮಾನತು ಡಿಎಫ್‌ಒ ವಿರುದ್ಧ ಕ್ರಮಕ್ಕೆ ಪ್ರಸ್ತಾವ

ಹಾಸನ: ಬೇಲೂರು ತಾಲ್ಲೂಕಿನ ನಂದ-ಗೋಡನಹಳ್ಳಿಯ 10 ಎಕರೆ ಪ್ರದೇಶದಲ್ಲಿ 126 ಮರಗಳನ್ನು ಕಡಿದಿರುವ ಪ್ರಕರಣಕ್ಕೆ ಸಂಬಂಧಿಸಿ ಅರಣ್ಯ ಇಲಾಖೆಯ ನಾಲ್ವರು ಅಧಿಕಾರಿಗಳನ್ನು ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮಾನತು ಮಾಡಲಾಗಿದೆ.

ಹಾಸನ ಪ್ರಾದೇಶಿಕ ವಿಭಾಗದ ಉಪ ವಲಯ ಅರಣ್ಯಾಧಿಕಾರಿ ಮೋಹನ್ ಕುಮಾರ್, ಭಾರತೀಯ ಅರಣ್ಯ ಸೇವೆಗೆ ಸೇರಿದ ಅಧಿಕಾರಿಯಾಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪ್ರಸ್ತಾವ ಕಳುಹಿಸಲಾಗಿದೆ.

ಹಾಸನ ಉಪ ವಿಭಾಗದ ಸಹಾಯಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಪ್ರಭುಗೌಡ ಬಿರಾದಾರ, ಬೇಲೂರು ವಲಯ ಅರಣ್ಯಾಧಿಕಾರಿ ವಿನಯ್‌ಕುಮಾರ್, ಅದೇ ವಲಯದ ಉಪ ವಲಯ ಅರಣ್ಯಾಧಿಕಾರಿ ಕಂ ಮೋಜಣಿದಾರ ಗುರುರಾಜ್ ಡಿ., ಅರಣ್ಯ ಗಸ್ತು ಪಾಲಕ ರಘುಕುಮಾರ್ ಎಚ್.ಬಿ. ಅವರನ್ನು ಅಮಾನತುಗೊಳಿಸಿ ಅರಣ್ಯ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

'ಈ ಪ್ರಕರಣದಲ್ಲಿ ಅಧಿಕಾರಿಗಳು ಲೋಪ ಎಸಗಿರುವುದು ಕಂಡು ಬಂದಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕ್ರೈಸ್ತರ ಸಮಸ್ಯೆಗೂ ಸ್ಪಂದಿಸಿ ಮೋದಿಗೆ ಆರ್ಚ್ ಬಿಷಪ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರು ಕ್ರಿಸ್‌ಮಸ್ ಹಬ್ಬ ಆಚರಿಸಿರುವುದನ್ನು ಶ್ಲಾಘಿಸಿರುವ ಬೆಂಗಳೂರಿನ ಧರ್ಮ ಪ್ರಾಂತ್ಯದ ಆರ್ಚ್‌ಬಿಷಪ್ ಪೀಟರ್ ಮಚಾಡೊ ಅವರು, 'ದೇಶದಾದ್ಯಂತ ಕ್ರೈಸ್ತ ಸಮುದಾಯವನ್ನು ಬಾಧಿಸುತ್ತಿರುವ ಸಮಸ್ಯೆಗಳಿಗೂ ಇದೇ ರೀತಿ ಸ್ಪಂದಿಸಿ' ಎಂದು ಮನವಿ ಮಾಡಿದ್ದಾರೆ.

'ಕರುಣೆ ಮತ್ತು ಸೇವೆ ಏಸುಕ್ರಿಸ್ತನ ಸಂದೇಶವಾಗಿತ್ತು ಎಂದು ಮೋದಿ ಹೇಳಿದ್ದಾರೆ. ಈ ಸಂದೇಶವನ್ನು ಅವರು ಸಕಾರಾತ್ಮಕವಾಗಿ ಮುಂದುವರಿಸಲು ಕ್ರೈಸ್ತ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವತ್ತ ಕಾರ್ಯಪ್ರವೃತ್ತರಾಗಬೇಕು. ಕ್ರೈಸ್ತರ ವಿರುದ್ಧದ ದ್ವೇಷ ಭಾಷಣಗಳು, ಚರ್ಚ್‌ಗಳು ಹಾಗೂ ಪ್ರಾರ್ಥನಾ ಮಂದಿರಗಳ ಮೇಲಿನ ದಾಳಿಗಳನ್ನು ನಿಯಂತ್ರಿಸಬೇಕು. ದೇಶದ ವಿವಿಧ ರಾಜ್ಯಗಳಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸುವ ಮೂಲಕ ಕ್ರೈಸ್ತರನ್ನು ಸಾಂವಿಧಾನಿಕ ಹಕ್ಕುಗಳಿಂದ ವಂಚಿಸುವ ಕೆಲಸ ನಡೆಯುತ್ತಿದೆ. ಇಂಥ ಸಂದರ್ಭಗಳಲ್ಲಿ ಪ್ರಧಾನಿ ಸಚಿವಾಲಯವು ಮಧ್ಯ ಪ್ರವೇಶಿಸುವ ಮೂಲಕ ಸಮಸ್ಯೆಗಳನ್ನು ಪರಿಹರಿಸಬೇಕು' ಎಂದಿದ್ದಾರೆ.



ಪೀಟರ್ ಮಚಾಡೊ

'ಹೊತ್ತಿ ಉರಿಯುತ್ತಿರುವ ಮಣಿಪುರ ಸಮಸ್ಯೆಗೆ ಪ್ರಧಾನಿಯವರು ಶೀಘ್ರವೇ ಪರಿಹಾರ ಕಲ್ಪಿಸಬೇಕು. ಇದು ಜನಾಂಗೀಯ ಸಮಸ್ಯೆಯಾಗಿ ಕಂಡರೂ, ಅಲ್ಲಿನ ಕ್ರೈಸ್ತ ಸಮುದಾಯದವರ ಮೇಲೆ ಆಳವಾದ ಗಾಯವನ್ನುಂಟು ಮಾಡಿದೆ.'

'ಕ್ರೈಸ್ತ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ದಲಿತ ಕ್ರೈಸ್ತರ ಮೀಸಲಾತಿ ಸಮಸ್ಯೆಬಗೆಹರಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

ಎಐಡಿಎಸ್‌ಒ ಸಮೀಕ್ಷೆ: ವಿದ್ಯಾರ್ಥಿಗಳು, ಬೋಧಕರು, ಪೋಷಕರು ಭಾಗಿ

ವಿದ್ಯಾರ್ಥಿಗಳಿಗೆ ಬೇಡ 4 ವರ್ಷದ ಪದವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ನಾಲ್ಕು ವರ್ಷಗಳ ಪದವಿಯನ್ನು ಕೈಬಿಡಬೇಕು ಎಂದು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು, ಬೋಧಕರು, ಪೋಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್' (ಎಐಡಿಎಸ್‌ಒ) ನಡೆಸಿದ ಸಮೀಕ್ಷೆಯಲ್ಲಿ ಶೇ 83ರಷ್ಟು ವಿದ್ಯಾರ್ಥಿಗಳು ನಾಲ್ಕು ವರ್ಷದ ಪದವಿಗೆ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ.

9 ಸರ್ಕಾರಿ ವಿಶ್ವವಿದ್ಯಾಲಯಗಳು, 82 ಸರ್ಕಾರಿ ಪದವಿ ಕಾಲೇಜುಗಳು, 12 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಹಾಗೂ 15 ಸರ್ಕಾರಿ ವಸತಿ ನಿಲಯಗಳಲ್ಲಿ ಸಮೀಕ್ಷೆ ನಡೆಸಲಾಗಿತ್ತು. 23,120 ಮಂದಿ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿ ವ್ಯಕ್ತಿಗೂ 9 ಪ್ರಶ್ನೆಗಳನ್ನು ಲಿಖಿತ ರೂಪದಲ್ಲಿ ಕೇಳಲಾಗಿದೆ. ಸಂಗ್ರಹಿಸಿದ 1.99 ಲಕ್ಷ ಪ್ರತಿಕ್ರಿಯೆಗಳಲ್ಲಿ ಶೇ 20ರಷ್ಟು ಸರಾಸರಿ ಮಾದರಿಗಳನ್ನು ಪರಿಗಣಿಸಲಾಗಿದೆ.

ಶಿಕ್ಷಣದ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು, ನವೋದಯ ಚಳವಳಿಯ ಚಿಂತಕರು ಹಾಗೂ ಸುಭಾಷ್‌ಚಂದ್ರ ಬೋಸ್, ಭಗತ್‌ಸಿಂಗ್ ಸೇರಿದಂತೆ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಹೋರಾಟಗಾರರ ಕುರಿತು ಹೆಚ್ಚು ಪಾಠಗಳನ್ನು ಅಳವಡಿಸಬೇಕು, ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಬೇಕು ಎಂಬ ಬಗ್ಗೆ ಹೆಚ್ಚಿನ ಒಲವು ವ್ಯಕ್ತವಾಗಿದೆ. ಈ ಸಮೀಕ್ಷಾ ವರದಿಯನ್ನು ರಾಜ್ಯ ಶಿಕ್ಷಣ ನೀತಿ ಆಯೋಗಕ್ಕೆ ಸಲ್ಲಿಸಲಾಗಿದೆ ಎಂದು ಸಂಘಟನೆಯ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.

ಯಾವುದೇ ಜಾತಿ, ವರ್ಗ, ಲಿಂಗ, ಭಾಷೆಯ ಧರ್ಮದ ಆಧಾರದ ಮೇಲೆ ಶಿಕ್ಷಣ ನೀಡಬಾರದು, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ತಾರತಮ್ಯಗಳಿಗೆ ಅವಕಾಶ ಕೊಡುವ ಪಠ್ಯಗಳನ್ನು ಅಳವಡಿಸಬಾರದು. ರಾಜ್ಯದ ಎಲ್ಲ ಮಕ್ಕಳಿಗೂ ಶಿಕ್ಷಣ ತಲುಪಬೇಕು. ಎಷ್ಟೋ ಕುಟುಂಬಗಳ ಮಕ್ಕಳು ಕೂಲಿ ಮಾಡಿಕೊಂಡು ಕಾಲೇಜು ಶಿಕ್ಷಣ ಪಡೆಯುತ್ತಿದ್ದಾರೆ. ಪರೀಕ್ಷಾ ಶುಲ್ಕ ಪಾವತಿಸಲೂ ಸಾಧ್ಯವಾಗದ ಎಷ್ಟೋ ಮಕ್ಕಳು ಇದ್ದಾರೆ. ಸಮೀಕ್ಷೆ ನಡೆಸಲು ಹೋದಾಗಲೂ ಸಾಕಷ್ಟು ಸಂಖ್ಯೆಯ ಮಕ್ಕಳು ಸಿಗಲಿಲ್ಲ. ಅವರ ಅಭಿಪ್ರಾಯ ದಾಖಲಿಸಲು ಸಾಧ್ಯವಾಗಲಿಲ್ಲ. ಹಾಗಾಗಿ, ಸರ್ಕಾರ ಎಲ್ಲರಿಗೂ ಉಚಿತವಾಗಿ ಸಿಗುವ, ಸೌಹಾರ್ದ ಶಿಕ್ಷಣ ನೀತಿ ರೂಪಿಸಬೇಕು ಎನ್ನುವ ಆಶಯ ಇಟ್ಟುಕೊಂಡು ಸಮೀಕ್ಷೆ ನಡೆಸಲಾಗಿದೆ ಎಂದು ಸಂಘಟನೆ ಹೇಳಿದೆ.

ಯಾವುದಕ್ಕೆ ಎಷ್ಟು ಅಂಕ

ವಿಷಯ	ಸರಿ	ತಪ್ಪು
	(ಶೇಕಡವಾರು)	
ವಿದ್ಯಾರ್ಥಿಗಳಿಂದ ದೇಣಿಗೆ ಪಡೆಯುವುದು	4.29	95.71
ಸರ್ಕಾರಿ ಶಾಲೆಗಳ ಜವಾಬ್ದಾರಿ ಸರ್ಕಾರದ್ದು	98.52	1.48
ನಾಲ್ಕು ವರ್ಷಗಳ ಪದವಿ ಅಳವಡಿಕೆ	17	83
ಶಾಲೆಗಳ ವಿಲೀನ/ಮುಚ್ಚುವುದು	01	99
ಸರ್ಕಾರಿ ಶಾಲೆಗೆ ಕಾರ್ಪೊರೇಟ್ ನೆರವು	20	80
ಶಿಕ್ಷಣಕ್ಕೆ ವಿದೇಶಿ ಬಂಡವಾಳ/ವಿದೇಶಿ ವಿವಿ	14	86
ಕ್ರಾಂತಿಕಾರಿಗಳು, ನವೋದಯ ಚಿಂತಕರ ಪಾಠಗಳು	97	03
ಪಠ್ಯಗಳಲ್ಲಿ ಮೌಲ್ಯಗಳ ಕಡೆಗಣನೆ	7.24	92.76
ಎಲ್ಲ ಜಿಲ್ಲೆಗಳಲ್ಲೂ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಬೇಕು	96.82	3.18



ಫಲಪೂಜಾ ದೀಪೋತ್ಸವ

ವಿರೂಪಾಕ್ಷ–ಪಂಪಾಂಬಿಕೆ ನಿಶ್ಚಿತಾರ್ಥ ಪ್ರಯುಕ್ತ ಹಂಪಿಯ ವಿರೂಪಾಕ್ಷ ದೇವಸ್ಥಾನದ ಆವರಣದಲ್ಲಿ ಗುರುವಾರ ಸಂಜೆ ಸಾವಿರಾರು ಭಕ್ತರು ಫಲಪೂಜಾ ದೀಪೋತ್ಸವ ನೆರವೇರಿಸಿದರು

–ಚಿತ್ರ/ರಾಚಯ್ಯ ಎಸ್.ಸ್ಥಾವರಿಮಠ

ಪ್ರಜ್ವಲ್ ಸ್ಪರ್ಧೆ ಬೆಂಬಲಿಸುವುದಿಲ್ಲ: ರಾಮಸ್ವಾಮಿ

ಪ್ರಜಾವಾಣಿ ವಾರ್ತೆ

ಹಾಸನ: 'ಬಿಜೆಪಿ ಬಿಟ್ಟು ಅಧಿಕಾರದ ಹಿಂದೆ ಹೋಗುವವನು ನಾನಲ್ಲ. ಆದರೆ, ಬಿಜೆಪಿ–ಜೆಡಿಎಸ್ ಹೊಂದಾಣಿಕೆಗೆ ಒಪ್ಪಿಗೆ ಇಲ್ಲ. ಹಾಸನದಿಂದ ಪ್ರಜ್ವಲ್ ರೇವಣ್ಣ ಸ್ಪರ್ಧಿಸಿದರೆ ಬೆಂಬಲಿಸುವುದಿಲ್ಲ' ಎಂದು ಬಿಜೆಪಿ ಮುಖಂಡ ಎ.ಟಿ. ರಾಮಸ್ವಾಮಿ ಸ್ಪಷ್ಟಪಡಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ಯಾರೂ ಆಹ್ವಾನಿಸಿಲ್ಲ. ನಾನು ಯಾರ ಜೊತೆಗೂ ಮಾತನಾಡಿಲ್ಲ. ಕಾಂಗ್ರೆಸ್‌ನಿಂದ ಆಹ್ವಾನ ಬಂದಿದೆ ಎಂಬುದೆಲ್ಲ ಸತ್ಯಕ್ಕೆ ದೂರವಾದದ್ದು' ಎಂದರು.

'ದೇವೇಗೌಡರ ಬಗ್ಗೆ ಅಪಾರ ಗೌರವವಿದೆ. ಅವರನ್ನು ಉತ್ಸವ ಮೂರ್ತಿಯಂತೆ ಮಾಡಿಕೊಂಡಿದ್ದಾರೆ. ಎಂದು ಟೀಕಿಸಿದರು.

ಕೆಪಿಎಸ್‌ಸಿ: ನಾಲ್ಕು ವರ್ಷಗಳಲ್ಲಿ ಏಳು ಐಎಎಸ್ ಅಧಿಕಾರಿಗಳ ವರ್ಗ

10 ವರ್ಷದಲ್ಲಿ 10 ಪರೀಕ್ಷಾ ನಿಯಂತ್ರಕರು!

• ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪರೀಕ್ಷಾ ನಿಯಂತ್ರಕ ಹುದ್ದೆಗೆ 10 ವರ್ಷಗಳಲ್ಲಿ 10 ಮಂದಿ (ಒಬ್ಬರನ್ನು ಎರಡು ಬಾರಿ) ಐಎಎಸ್ ಅಧಿಕಾರಿಗಳನ್ನು ನೇಮಿಸುವ ಮೂಲಕ ರಾಜ್ಯ ಸರ್ಕಾರ ದಾಖಲೆ ಬರೆದಿದೆ. ಅದರಲ್ಲೂ, ಕಳೆದ 4 ವರ್ಷಗಳಲ್ಲಿ 7 ಐಎಎಸ್ ಅಧಿಕಾರಿಗಳು ನಿಯೋಜನೆಗೊಂಡಿದ್ದಾರೆ.

ಕೆಎಎಸ್, ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಹುದ್ದೆ ಸೇರಿದಂತೆ ಎಲ್ಲ ಹುದ್ದೆಗಳ ನೇಮಕಾತಿಗಳಿಗೆ ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳು, ಮತ್ತು ವ್ಯಕ್ತಿತ್ವ ಪರೀಕ್ಷೆಗಳ (ಸಂದರ್ಶನ) ಗೌಪ್ಯ ವಿಷಯಗಳ ಹೊಣೆಯನ್ನು ಪರೀಕ್ಷಾ ನಿಯಂತ್ರಕರು ನಿಭಾಯಿಸುತ್ತಾರೆ. ಪದೇ ಪದೇ ಪರೀಕ್ಷಾ ನಿಯಂತ್ರಕರ ವರ್ಗಾವಣೆಯಿಂದ ಈ ಪ್ರಕ್ರಿಯೆ ವಿಳಂಬಕ್ಕೆ ಕಾರಣವಾಗುತ್ತಿದೆ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

2023ರ ಜೂನ್ 21ರಿಂದ ಪರೀಕ್ಷಾ ನಿಯಂತ್ರಕ ಹುದ್ದೆಯಲ್ಲಿದ್ದ ಡಾ. ಗಿರೀಶ ದಿಲೀಪ ಬಡೋಲೆ ಅವರನ್ನು ಮಂಗಳವಾರ (ಡಿ. 26) ಬೀದರ್ ಜಿಲ್ಲಾ ಪಂಚಾಯಿತಿ ಸಿಇಒ ಆಗಿ ವರ್ಗಾವಣೆ ಮಾಡಲಾಗಿದೆ. ಕೆಪಿಎಸ್‌ಸಿ ಕಾರ್ಯದರ್ಶಿ ಕೆ.ಎಸ್. ಲತಾ ಕುಮಾರಿ ಅವರಿಗೇ ಪರೀಕ್ಷಾ ನಿಯಂತ್ರಕ ಹುದ್ದೆಯನ್ನೂ ಹೆಚ್ಚುವರಿಯಾಗಿ ನೀಡಲಾಗಿದೆ.

ಪಿ.ಸಿ. ಹೋಟಾ ಸಮಿತಿಯ ಶಿಫಾರಸಿನಂತೆ ಪರೀಕ್ಷಾ ನಿಯಂತ್ರಕ ಹುದ್ದೆಗೆ ಕಳೆದ 10 ವರ್ಷಗಳಿಂದ ಐಎಎಸ್ ಅಧಿಕಾರಿಯನ್ನು ಸರ್ಕಾರ ನೇಮಿಸುತ್ತಿದೆ. ಆದರೆ, ಕನಿಷ್ಠ 3 ವರ್ಷ ಪೂರ್ಣಗೊಳ್ಳುವ ಮೊದಲೇ ವರ್ಗಾವಣೆ ಮಾಡಬಾರದೆಂಬ ಶಿಫಾರಸಿಗೆ ಮನ್ನಣೆ ನೀಡಿಲ್ಲ. ನೇಮಕಗೊಂಡ ಐಎಎಸ್ ಅಧಿಕಾರಿಗಳ ಪೈಕಿ ಮೂವರು (ಆರ್.ವೆಂಕಟೇಶ್‌ಕುಮಾರ್, ಕೃಷ್ಣಾ ಬಾಜಪೇಯಿ, ಜಿ.ಆರ್.ದಿವ್ಯಾಪ್ರಭು) 1 ವರ್ಷಕ್ಕಿಂತ ಹೆಚ್ಚು ಅವಧಿ ಇದ್ದರು

ಕೃಷ್ಣಾ ಬಾಜಪೇಯಿ ಅವರನ್ನು 2019 ಫೆ. 22ರಂದು ಪರೀಕ್ಷಾ ನಿಯಂತ್ರಕ ಹುದ್ದೆಯಿಂದ ವರ್ಗಾವಣೆ ಮಾಡಲಾಗಿತ್ತು. ಆ ಬಳಿಕ, ಎರಡನೇ ಬಾರಿಗೆ ಆ ಹುದ್ದೆಗೆ ಬಂದ ವಾಸಿರೆಡ್ಡಿ ವಿಜಯಾ ಜ್ಯೋತ್ಸ್ನಾ (ಅದಕ್ಕೂ ಮೊದಲು 2015ರ ಜೂನ್ 22ರಿಂದ 2016ರ ಜೂನ್ 21ರವರೆಗೆ ಈ ಹುದ್ದೆ ನಿಭಾಯಿಸಿದ್ದರು) ಮತ್ತು ಜಿ.ಆರ್. ದಿವ್ಯಾಪ್ರಭು ಕೆಲವು ತಿಂಗಳಷ್ಟೇ ಕಾರ್ಯನಿರ್ವಹಿಸಿದ್ದರು. ದಿವ್ಯಾ ಪ್ರಭು ಅವರನ್ನು ವರ್ಗಾವಣೆ ಮಾಡಿದ ನಂತರ, ಆಗ ರೇಷ್ಮೆ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎಂ.ಕನಗವಲ್ಲಿ ಅವರಿಗೆ ಈ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿತ್ತು.

ಆಗ, ಸರ್ಕಾರಕ್ಕೆ ಪತ್ರ ಬರೆದ ಕೆಪಿಎಸ್‌ಸಿ ಅಧ್ಯಕ್ಷರು, 'ಕಾಯಂ ಪರೀಕ್ಷಾ ನಿಯಂತ್ರಕರಿಲ್ಲದೆ 4 ಸಾವಿರಕ್ಕೂ ಹೆಚ್ಚು ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ತಕ್ಷಣ ಪರೀಕ್ಷಾ ನಿಯಂತ್ರಕರನ್ನು ನೇಮಿಸಬೇಕು' ಎಂದು ಮನವಿ ಮಾಡಿದ್ದರು. ಹೀಗಾಗಿ, ಕನಗವಲ್ಲಿ ಅವರನ್ನು ವರ್ಗಾವಣೆ ಮಾಡಿದ್ದ ಸರ್ಕಾರ, ನಳಿನಿ ಅತುಲ್ ಅವರನ್ನು ನೇಮಿಸಿತ್ತು. ಅವರು 9 ತಿಂಗಳು ಮಾತ್ರ ಆ ಹುದ್ದೆಯಲ್ಲಿದ್ದರು. ಆ ನಂತರ, ಭನ್ವರ್‌ಸಿಂಗ್ ಮೀನಾ (3 ತಿಂಗಳು), ಫೌಝಿಯಾ ತರನ್ನುಮ್ (4 ತಿಂಗಳು), ಡಾ. ಗಿರೀಶ ದಿಲೀಪ ಬಡೋಲೆ (6 ತಿಂಗಳು) ಈ ಹುದ್ದೆಗೆ ನೇಮಕವಾಗಿದ್ದಾರೆ

ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕರ ಅವಧಿ

ಹೆಸರು	ಎಲ್ಲಿಂದ ಎಲ್ಲಿಯವರೆಗೆ
ಆರ್. ವೆಂಕಟೇಶ್‌ಕುಮಾರ್	2013 ಅ. 9ರಿಂದ 2015 ಜೂನ್ 17
ವಾಸಿರೆಡ್ಡಿ ವಿಜಯಾ ಜ್ಯೋತ್ಸ್ನಾ	2015 ಜೂನ್ 22ರಿಂದ 2016 ಜೂನ್ 21
ಕೃಷ್ಣಾ ಬಾಜಪೇಯಿ	2016 ಜೂನ್ 21ರಿಂದ 2019 ಫೆ. 27
ವಸಿರೆಡ್ಡಿ ವಿಜಯಾ ಜ್ಯೋತ್ಸ್ನಾ	2019 ಫೆ.27ರಿಂದ 2019 ಜುಲೈ 22
ಜಿ.ಆರ್. ದಿವ್ಯಾ ಪ್ರಭು	2019 ಜುಲೈ 22ರಿಂದ 2021 ಮಾರ್ಚ್ 24
ಎಂ. ಕನಗವಲ್ಲಿ	2021 ಮಾರ್ಚ್ 24ರಿಂದ 2022 ಫೆ. 4
ನಳಿನಿ ಅತುಲ್	2022 ಫೆ. 4ರಿಂದ 2022 ನ. 5
ಭನ್ವರ್‌ಸಿಂಗ್ ಮೀನಾ	2022 ನ.5ರಿಂದ 2023 ಫೆ. 20
ಫೌಝಿಯಾ ತರನ್ನುಮ್	2023 ಫೆ. 20ರಿಂದ 2023ರ ಜೂನ್ 20
ಡಾ. ಗಿರೀಶ ದಿಲೀಪ ಬಡೋಲೆ	2023 ಜೂನ್ 21ರಿಂದ 2023 ಡಿ. 26

ಕೋವಿಡ್: 158 ಹೊಸ ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ ಹೊಸದಾಗಿ 158 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 568ಕ್ಕೆ ಏರಿಕೆಯಾಗಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಳ ಮಾಡಲಾಗಿದ್ದು, 24 ಗಂಟೆಗಳಲ್ಲಿ 8,350 ಪರೀಕ್ಷೆಗಳನ್ನು ನಡೆಸಲಾಗಿದೆ. ಶೇ 1.89ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ಸಕ್ರಿಯ ಪ್ರಕರಣಗಳಲ್ಲಿ 514 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. 14 ಮಂದಿ ತೀವ್ರ ನಿಗಾ ಘಟಕ ಹಾಗೂ 40 ಮಂದಿ ಸಾಮಾನ್ಯ ಹಾಸಿಗೆ ವ್ಯವಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕಿತರಲ್ಲಿ 69 ಮಂದಿ ಚೇತರಿಸಿಕೊಂಡಿದ್ದಾರೆ.

19 ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರಿನಲ್ಲಿ 2,492 ಪರೀಕ್ಷೆಗಳನ್ನು ನಡೆಸಲಾಗಿದೆ. ಹೊಸದಾಗಿ 85 ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 414ಕ್ಕೆ ಏರಿಕೆಯಾಗಿದೆ.

ಡಿಸೆಂಬರ್ 15ರಿಂದ ಈವರೆಗೆ ರಾಜ್ಯದಲ್ಲಿ 247 ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ (ಜಿನೋಮಿಕ್ ಸೀಕ್ವೆನ್ಸಿಂಗ್) ಪರೀಕ್ಷೆಗೆ ಕಳುಹಿಸಲಾಗಿದೆ. ಅವುಗಳಲ್ಲಿ ಈವರೆಗೆ 60 ಮಾದರಿಗಳ ಫಲಿತಾಂಶ ಬಂದಿದೆ. ಇವುಗಳಲ್ಲಿ 34 ಮಾದರಿಗಳಲ್ಲಿ ಜೆಎನ್.1, 18 ಮಾದರಿಗಳಲ್ಲಿ ಎಕ್ಸ್‌ಬಿಬಿ, 8 ಮಾದರಿಗಳಲ್ಲಿ ಕೊರೊನಾ ವೈರಾಣುವಿನ ಇತರ ರೂಪಾಂತರಿ ಪತ್ತೆಯಾಗಿವೆ.

ಸಂಪರ್ಕಿತರಿಗೂ ಪರೀಕ್ಷೆಗೆ ಸೂಚನೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆಯಾಗಿ ಸೋಂಕಿನ ಲಕ್ಷಣ ಹೊಂದಿರುವವರ ಸಂಪರ್ಕಿತರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಇಲಾಖೆಯು ಆಯುಕ್ತ ಡಿ. ರಂದೀಪ್ ಅವರು ಈ ಬಗ್ಗೆ ಬಿಬಿಎಂಪಿ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿದ್ದಾರೆ. 'ರಾಜ್ಯದಲ್ಲಿ ಕೊರೊನಾ ವೈರಾಣುವಿನ ರೂಪಾಂತರಿ ಓಮಿಕ್ರಾನ್‌ನ ಉಪತಳಿ ಜೆಎನ್.1 ಪ್ರಕರಣಗಳು ಪತ್ತೆಯಾಗಿವೆ. ಈಗ ಅದರ ಹರಡುವಿಕೆ ತಡೆಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು. ಆದ್ದರಿಂದ ಸೋಂಕಿನ ಲಕ್ಷಣಗಳನ್ನು ಹೊಂದಿರುವವರ ಜತೆಗೆ ಅವರ ಸಂಪರ್ಕಿತರಿಗೂ ಪರೀಕ್ಷೆ ಮಾಡಲಾಗುತ್ತದೆ' ಎಂದಿದ್ದಾರೆ.

'ರಾಜ್ಯದಲ್ಲಿ ಸದ್ಯ 400ಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ. ಹೆಚ್ಚಿನವರು ಮನೆ ಆರೈಕೆಯಲ್ಲಿದ್ದಾರೆ. ಕೆಲವರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ನಮ್ಮ ಕ್ಲಿನಿಕ್ ಸೇರಿ ವಿವಿಧ ಆರೋಗ್ಯ ಕೇಂದ್ರಗಳ ವೈದ್ಯರು ಸೋಂಕಿತರಿಗೆ ಚಿಕಿತ್ಸೆ ಹಾಗೂ ಆರೈಕೆ ಬಗ್ಗೆ ಸೂಕ್ತ ಮಾರ್ಗದರ್ಶನ ಮಾಡಬೇಕು. ತಾಲ್ಲೂಕು ಆರೋಗ್ಯ ಅಧಿಕಾರಿಗಳು ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ವಲಯ ಆರೋಗ್ಯಾಧಿಕಾರಿಗಳು ಮೇಲ್ವಿಚಾರಣೆ ಮಾಡಬೇಕು' ಎಂದು ತಿಳಿಸಿದ್ದಾರೆ.

'ಐಸಿಯು ದಾಖಲಾಗಿರುವ ಸೋಂಕಿತರನ್ನು ಟೆಲಿ ಐಸಿಯು ಮೂಲಕ ಮೇಲ್ವಿಚಾರಣೆ ಮಾಡಬೇಕು. ಜಿಲ್ಲಾ ಮರಣ ಪರಿಶೋಧನೆ (ಡೆತ್ ಆಡಿಟ್) ಸಮಿತಿಯು ಕೋವಿಡ್ ಮರಣಗಳ ಪರಿಶೋಧನೆಯನ್ನು ನಿಯಮಿತವಾಗಿ ಮಾಡಬೇಕು. ರಾಜ್ಯ ಮರಣ ಪರಿಶೋಧನೆ ಸಮಿತಿ ಈ ಬಗ್ಗೆ ವರದಿ ತಯಾರಿಸಿ, ಇಲಾಖೆ ಆಯುಕ್ತಾಲಯಕ್ಕೆ ಸಲ್ಲಿಸಬೇಕು' ಎಂದು ಹೇಳಿದ್ದಾರೆ.

ಪ್ರತ್ಯೇಕ ಕೋವಿಡ್ ವಾರ್ಡ್

'ಹೊಸ ವರ್ಷದ ಆಚರಣೆಯ ದೃಷ್ಟಿಯಿಂದ ಜಿಲ್ಲೆಗಳಲ್ಲಿನ ಎಲ್ಲ ಸರ್ಕಾರಿ ಆಸ್ಪತ್ರೆಗಳು ಪ್ರತ್ಯೇಕ ಕೋವಿಡ್ ವಾರ್ಡ್‌ಗಳನ್ನು ಸಜ್ಜುಗೊಳಿಸಬೇಕು. ಈ ವಾರ್ಡ್ ಐಸಿಯು ಹಾಸಿಗೆಗಳನ್ನು ಒಳಗೊಂಡಿರಬೇಕು. ರೋಗನಿರ್ಣಯಕ್ಕೆ ಸಂಬಂಧಿಸಿದಂತೆ ಅನಗತ್ಯವಾಗಿ ಸಿ.ಟಿ. ಸ್ಕ್ಯಾನ್ ಮಾಡಬಾರದು. ಸರ್ಕಾರಿ ಆಸ್ಪತ್ರೆಗಳ ವೈದ್ಯರು ಹಾಗೂ ಸಿಬ್ಬಂದಿಗೆ ಫ್ಲೂ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಲಾಗುತ್ತದೆ' ಎಂದು ಡಿ. ರಂದೀಪ್ ತಿಳಿಸಿದ್ದಾರೆ.

702 ಹೊಸ ಪ್ರಕರಣ ದಾಖಲು

ನವದೆಹಲಿ (ಪಿಟಿಐ): ದೇಶದಲ್ಲಿ ಹೊಸದಾಗಿ ಕೋವಿಡ್‌ನ 702 ಪ್ರಕರಣಗಳು ಗುರುವಾರ ದಾಖಲಾಗಿದ್ದು, ಸಕ್ರಿಯ ಪ್ರಕರಣಗಳ ಒಟ್ಟು ಸಂಖ್ಯೆ 4,097ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಮಹಾರಾಷ್ಟ್ರದಲ್ಲಿ ಇಬ್ಬರು, ಕರ್ನಾಟಕ, ಕೇರಳ, ಪಶ್ಚಿಮ ಬಂಗಾಳ ಮತ್ತು ದೆಹಲಿಯಲ್ಲಿ ತಲಾ ಒಬ್ಬರಂತೆ ಒಟ್ಟು ಆರು ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂದಿದೆ.


‘ಅಪರಾಧಿಗೂ ಇದೆ ಸಂತಾನೋತ್ಪತ್ತಿ ಹಕ್ಕು’

ನವದೆಹಲಿ (ಪಿಟಿಐ): ‘ವ್ಯಕ್ತಿಯೊಬ್ಬರು ಜೈಲಿನಲ್ಲಿದ್ದಾರೆ ಎಂದಾಕ್ಷಣ ಆತ ಕಡಿಮೆ ದರ್ಜೆಯ ನಾಗರಿಕ ಎಂದಲ್ಲ. ಅಪರಾಧಿಗೂ ಜೀವಿಸುವ ಹಕ್ಕಿದೆ ಮತ್ತು ಜೀವಿಸುವ ಹಕ್ಕು ಎಂಬುದು ಸಂತಾನೋತ್ಪತ್ತಿಯ ಹಕ್ಕೂ ಹೌದು. ಇದು ಅಪರಾಧಿಗೂ ಅನ್ವಯವಾಗುತ್ತದೆ’ ಎಂದು ದೆಹಲಿ ಹೈಕೋರ್ಟ್ ಗುರುವಾರ ಹೇಳಿದೆ. ಹೀಗಾಗಿ, ಐವಿಎಫ್ ಮೂಲಕ ಮಕ್ಕಳನ್ನು ಪಡೆದುಕೊಳ್ಳುವುದಕ್ಕಾಗಿ 41 ವರ್ಷದ ಅಪರಾಧಿಗೆ ನ್ಯಾಯಾಲಯವು ನಾಲ್ಕು ವಾರಗಳ ಪೆರೋಲ್ ನೀಡಿದೆ.

‘ಶಿಕ್ಷೆ ಮುಗಿಯುವುದರ ಒಳಗೆ, ಅಪರಾಧಿಯ ಹಾಗೂ ಆತನ 38 ವರ್ಷದ ಹೆಂಡತಿಯ ಸಂತಾನೋತ್ಪತ್ತಿ ಸಾಮರ್ಥ್ಯವು ಕುಂಠಿತವಾಗುತ್ತದೆ. ಆತ ಅಪರಾಧಿ ಎನ್ನುವುದಕ್ಕಾಗಿಯೇ ಮಕ್ಕಳನ್ನು ಪಡೆದುಕೊಳ್ಳಲು ತಡವಾಗುವಂತೆ ಮಾಡುವುದು, ವ್ಯಕ್ತಿಯೊಬ್ಬರ ಪೋಷಕತ್ವದ ಹಕ್ಕನ್ನು ಕಸಿದಂತಾಗುತ್ತದೆ’ ಎಂದು ನ್ಯಾಯಮೂರ್ತಿ ಸ್ವರಣ್ ಕಾಂತಾ ಶರ್ಮಾ ಅವರು ಅಭಿಪ್ರಾಯಪಟ್ಟರು.

‘ವೈವಾಹಿಕ ಸಂಬಂಧ ನಿರ್ವಹಿಸುವುದು ಅಥವಾ ವೈವಾಹಿಕ ಹಕ್ಕಿಗೆ ಸಂಬಂಧಿಸಿ ಪೆರೋಲ್ ನೀಡಬೇಕು ಎಂಬ ಬಗ್ಗೆ ನ್ಯಾಯಾಲಯವು ಚರ್ಚೆ ನಡೆಸುತ್ತಿಲ್ಲ. ಮಕ್ಕಳನ್ನು ಪಡೆದುಕೊಳ್ಳುವ ಹಕ್ಕನ್ನು ಮಾತ್ರವೇ ಇಲ್ಲಿ ಚರ್ಚಿಸಲಾಗುತ್ತಿದೆ. ಜೈಲಿನ ನಿಯಮಾವಳಿ ಅನ್ವಯವೇ ಪೆರೋಲ್ ನೀಡಲಾಗುತ್ತಿದೆ’ ಎಂದೂ ಅವರು ಸ್ಪಷ್ಟಪಡಿಸಿದರು.

‘ಇವಿಎಂ ಸರಿಪಡಿಸದಿದ್ದರೆ ಬಿಜೆಪಿಗೆ 400ಕ್ಕೂ ಹೆಚ್ಚು ಸ್ಥಾನ’



ಸ್ಯಾಮ್ ಪಿತ್ರೋಡಾ

ನವದೆಹಲಿ (ಪಿಟಿಐ): ವಿದ್ಯುನ್ಮಾನ ಮತಯಂತ್ರಗಳಲ್ಲಿರುವ (ಇವಿಎಂ) ಸಮಸ್ಯೆಗಳನ್ನು ಸರಿಪಡಿಸದಿದ್ದರೆ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಬಹುದು’ ಎಂದು ಕಾಂಗ್ರೆಸ್ ನಾಯಕ ಸ್ಯಾಮ್ ಪಿತ್ರೋಡಾ ಗುರುವಾರ ಹೇಳಿದ್ದಾರೆ.

‘ಪಿಟಿಐ- ವಿಡಿಯೊ’ಗೆ ನೀಡಿರುವ ಸಂದರ್ಶನದಲ್ಲಿ ಅವರು ಇವಿಎಂ ದೋಷಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮದನ್ ಬಿ. ಲೋಕೂರ್ ಅವರ ಅಧ್ಯಕ್ಷತೆಯ ‘ದಿ ಸಿಟಿಜನ್ಸ್ ಕಮಿಷನ್ ಆನ್ ಎಲೆಕ್ಷನ್ಸ್’ ಎಂಬ ಎನ್‌ಜಿಒ ವರದಿಯ ಶಿಫಾರಸು ಉಲ್ಲೇಖಿಸಿದ ಪಿತ್ರೋಡಾ, ‘ವಿವಿಪ್ಯಾಟ್ ವ್ಯವಸ್ಥೆ ನಿಜವಾಗಿಯೂ ಮತದಾರರ ಪರಿಶೀಲನೆಗೆ ಇರುವಂತಹುದು. ವಿವಿಪ್ಯಾಟ್‌ನ ಸದ್ಯದ ವಿನ್ಯಾಸ ಮಾರ್ಪಡಿಸುವುದು ವರದಿಯ ಮುಖ್ಯ ಶಿಫಾರಸುಗಳಲ್ಲೊಂದಾಗಿದೆ. ಇದಕ್ಕೆ ಚುನಾವಣಾ ಆಯೋಗ ಪ್ರತಿಕ್ರಿಯಿಸಬಹುದೆಂದು ಕಾಯುತ್ತಿದ್ದೆ. ಆದರೆ, ಅದು ಪ್ರತಿಕ್ರಿಯಿಸಲಿಲ್ಲ. ಹಾಗಾಗಿ ನಾನು ಈ ಬಗ್ಗೆ ಧ್ವನಿ ಎತ್ತಿರುವೆ’ ಎಂದರು.

‘ಈ ವರದಿಯ ಕಾರಣದಿಂದ ಅಪನಂಬಿಕೆ (ಇವಿಎಂ ಮೇಲೆ) ಮೂಡಿದೆ ಎಂಬುದು ನನ್ನ ಭಾವನೆ. ಇದನ್ನು ಹೋಗಲಾಡಿಸಲಾದರೂ ಆಯೋಗ ಪ್ರತಿಕ್ರಿಯಿಸಬೇಕು’ ಎಂದು ಒತ್ತಾಯಿಸಿದರು.

‘5 ರಾಜ್ಯದ ವಿಧಾನಸಭಾ ಚುನಾವಣೆ ಮುಗಿದು 2024ರ ಲೋಕಸಭಾ ಚುನಾವಣೆ ಹತ್ತಿರವಾಗುತ್ತಿರುವುದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ಚುನಾವಣೆಯು ದೇಶದ ಭವಿಷ್ಯವನ್ನು ನಿರ್ಧರಿಸುತ್ತದೆ. ದೇಶದಲ್ಲಿ ಪ್ರಜಾಪ್ರಭುತ್ವವು ಹಳಿತಪ್ಪಿದೆ. ಹೆಚ್ಚು ಸರ್ವಾಧಿಕಾರದತ್ತ ಹೊರಳಿದೆ. ಎಲ್ಲವೂ ಏಕವ್ಯಕ್ತಿ ಪ್ರದರ್ಶನವಾಗಿದೆ’ ಎಂದು ಅವರು ಹೇಳಿದರು.

‘ಯಾರನ್ನೂ ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಬಾರದೆಂದು ಇಂಡಿಯಾ ಮೈತ್ರಿಕೂಟವು ನಿರ್ಧರಿಸಿದೆ. ಇಬ್ಬರು ಅಷ್ಟೇ ಖರ್ಗೆ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಮೈತ್ರಿಕೂಟದಲ್ಲಿ ಕೆಲವು ಭಿನ್ನ ಅಭಿಪ್ರಾಯಗಳು ಇರುತ್ತವೆ, ಅದೇ ಮೈತ್ರಿಕೂಟದ ನಿಜವಾದ ಸೊಗಸು. ದೇಶದಲ್ಲಿ ನಡೆಯುವುದು ಅಧ್ಯಕ್ಷೀಯ ಚುನಾವಣೆ ಅಲ್ಲ, ಸಂಸದೀಯ ಚುನಾವಣೆ’ ಎಂದು ಪಿತ್ರೋಡಾ ಅವರು ಪ್ರಧಾನಿ ಅಭ್ಯರ್ಥಿ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಶಬರಿಮಲೆ ದೇಗುಲ ನಾಳೆ ಪುನರಾರಂಭ

ಶಬರಿಮಲೆ (ಕೇರಳ), (ಪಿಟಿಐ): ಶಬರಿಮಲೆ ಅಯ್ಯಪ್ಪ ದೇವಾಲಯವು ಬಾಗಿಲು ಮಂಡಲ ಪೂಜೆಯ ಬಳಿಕ ಬುಧವಾರ ರಾತ್ರಿ ಮುಚ್ಚಿದೆ. ಮಕರವಿಳಕ್ಕು ಮಹೋತ್ಸವಕ್ಕಾಗಿ ಶನಿವಾರ (ಇದೇ 30) ಮತ್ತೆ ಬಾಗಿಲು ತೆರೆಯಲಿದೆ.

ಮಕರವಿಳಕ್ಕು ಅಂಗವಾಗಿ ‘ಪ್ರಸಾದ ಶುದ್ಧ ಕ್ರಿಯೆ’ ಮತ್ತು ‘ಬಿಂಬ ಶುದ್ಧ ಕ್ರಿಯೆ’ ಮೊದಲಾದ ಧಾರ್ಮಿಕ ವಿಧಿಗಳು ಜನವರಿ 13 ಮತ್ತು 14ರಂದು ನಡೆಯಲಿವೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಹೇಳಿಕೆಯಲ್ಲಿ ತಿಳಿಸಿದೆ.

ಮಕರವಿಳಕ್ಕು ದಿನದಂದು ‘ತಿರುವಾಭರಣ’ ಸ್ವೀಕಾರ, ದೀಪಾರಾಧನೆಗೆ ಸಾವಿರಾರು ಭಕ್ತರು ಸಾಕ್ಷಿಯಾಗಲಿದ್ದಾರೆ ಎಂದಿದೆ.

ಮಕರವಿಳಕ್ಕು ದರ್ಶನದ ಬಳಿಕ ಜನವರಿ 20ರವರೆಗೆ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ನೀಡಲಾಗುವುದು ಎಂದು ತಿಳಿಸಲಾಗಿದೆ.

ದೋಷಾರೋಪಪಟ್ಟಿಯಲ್ಲಿ ಪ್ರಿಯಾಂಕಾ ಹೆಸರು

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ದೋಷಾರೋಪಪಟ್ಟಿಯಲ್ಲಿ ಇದೇ ಮೊದಲ ಬಾರಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಹೆಸರನ್ನು ಉಲ್ಲೇಖಿಸಲಾಗಿದೆ.

ಹರಿಯಾಣದಲ್ಲಿ 2005-06ರಲ್ಲಿ ರಿಯಲ್ ಎಸ್ಟೇಟ್ ಏಜೆಂಟರಿಂದ 3 ಕಡೆ ಜಮೀನು ಖರೀದಿಸಿರುವ ಪ್ರಕರಣಕ್ಕೆ ಸಂಬಂಧಿಸಿ ಉದ್ಯಮಿ ರಾಬರ್ಟ್ ವಾದ್ರಾ ಮತ್ತು ಅವರ ಪತ್ನಿ ಪ್ರಿಯಾಂಕಾ ಗಾಂಧಿ ಅವರ ವಿರುದ್ಧ ತನಿಖೆ ಮುಂದುವರಿದಿದೆ ಎಂದು ಇ.ಡಿ ದೋಷಾರೋಪ ಪಟ್ಟಿಯಲ್ಲಿ ತಿಳಿಸಿದೆ.

ಆದರೆ, ರಾಬರ್ಟ್ ವಾದ್ರಾ ಮತ್ತು ಪ್ರಿಯಾಂಕಾ ಅವರನ್ನು ಆರೋಪಿಗಳೆಂದು ಹೆಸರಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ರಾಬರ್ಟ್ ವಾದ್ರಾ ಮತ್ತು ಮಧ್ಯವರ್ತಿ ಸಂಜಯ್ ಭಂಡಾರಿ ಅವರ ಸಂಬಂಧಿ ಸುಮಿತ್ ಚಡ್ಡಾ ಅವರ ನಿಕಟವರ್ತಿಯಾಗಿರುವ ಯುಎಇ ಮೂಲದ ಅನಿವಾಸಿ ಭಾರತೀಯ ಉದ್ಯಮಿ ಸಿ.ಸಿ. ತಂಬಿ ವಿರುದ್ಧ ಇ.ಡಿ ನವೆಂಬರ್‌ನಲ್ಲಿ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿತ್ತು. ಇದರಲ್ಲಿ ವಾದ್ರಾ ಮತ್ತು ಪ್ರಿಯಾಂಕಾ ಅವರ ಹೆಸರು ಉಲ್ಲೇಖಿಸಲಾಗಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯ ವಿಶೇಷ ನ್ಯಾಯಾಲಯವು ಡಿಸೆಂಬರ್ 22ರಂದು ದೋಷಾರೋಪ ಪಟ್ಟಿಯನ್ನು ಪರಿಶೀಲಿಸಿದ್ದು, ಮುಂದಿನ ವಿಚಾರಣೆಯನ್ನು ಜ.29ರಂದು ನಡೆಸಲು ನಿಗದಿ ಮಾಡಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ರಾಬರ್ಟ್ ವಾದ್ರಾ ಅವರನ್ನು ಇ.ಡಿ. ಈ ಹಿಂದೆ ವಿಚಾರಣೆಗೆ ಒಳಪಡಿಸಿತ್ತು. ಅವರು ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿದ್ದರು.

2005-2008ರ ನಡುವೆ ತಂಬಿ ಅವರು ದೆಹಲಿ-ಎನ್‌ಸಿಆರ್ ಮೂಲದ ರಿಯಲ್ ಎಸ್ಟೇಟ್ ಏಜೆಂಟ್ ಎಚ್.ಎಲ್. ಪಹ್ವಾ ಎಂಬವರ ಮೂಲಕ ಹರಿಯಾಣದ ಫರೀದಾಬಾದ್‌ನ ಅಮಿರ್‌ಪುರದಲ್ಲಿ 486 ಎಕರೆ ಜಮೀನು ಖರೀದಿಸಿದ್ದರು ಎಂದು ಇ.ಡಿ ಹೇಳಿದೆ.

ರಾಬರ್ಟ್ ವಾದ್ರಾ ಅವರು ಇದರಲ್ಲಿ ಮೂರು ಭಾಗಗಳಾಗಿ 40.08 ಎಕರೆ ಜಾಗವನ್ನು ಖರೀದಿಸಿರುವುದರಿಂದ ಅವರ ಹೆಸರನ್ನು ಉಲ್ಲೇಖಿಸಲಾಗಿದೆ ಎಂದು ಇ.ಡಿ ತಿಳಿಸಿದೆ.

ಎಚ್.ಎಲ್. ಪಹ್ವಾ ಅವರಿಂದ 2006ರಲ್ಲಿ ಅಮಿರ್‌ಪುರದಲ್ಲಿ ಪ್ರಿಯಾಂಕಾ ಗಾಂಧಿ ಅವರು ಕೂಡ 5 ಎಕರೆ ಕೃಷಿ ಭೂಮಿ ಖರೀದಿಸಿದ್ದರು ಎಂದೂ ಹೇಳಿದೆ.

ಜಮೀನು ಖರೀದಿ ವ್ಯವಹಾರದಲ್ಲಿ ರಾಬರ್ಟ್ ವಾದ್ರಾ ಅವರು ಪಹ್ವಾ ಅವರಿಗೆ ಪೂರ್ತಿ ಹಣ ಪಾವತಿಸಿರುವುದರ ಲೆಕ್ಕ ಪತ್ರ ಸಿಕ್ಕಿಲ್ಲ. ಈ ಕುರಿತು ತನಿಖೆ ನಡೆಯುತ್ತಿದೆ ಎಂದು ವಿವರಿಸಿದೆ. ತಂಬಿ ಅವರನ್ನು 2020ರಲ್ಲಿ ಇ.ಡಿ. ಬಂಧಿಸಿತ್ತು.

ಸಂಜಯ್ ಭಂಡಾರಿ 2016ರಲ್ಲಿ ಬ್ರಿಟನ್‌ಗೆ ಪಲಾಯನ ಮಾಡಿದ್ದು, ಇ.ಡಿ ಹಾಗೂ ಸಿಬಿಐ ಮಾಡಿರುವ ವಿನಂತಿಯ ಮೇರೆಗೆ ಅವರನ್ನು ಜನವರಿಯಲ್ಲಿ ಭಾರತಕ್ಕೆ ಹಸ್ತಾಂತರಿಸಲು ಬ್ರಿಟನ್ ಸರ್ಕಾರ ಒಪ್ಪಿಗೆ ನೀಡಿದೆ.

ಸಂಸತ್ತಿನಲ್ಲಿ ಭದ್ರತಾ ಲೋಪ ಪ್ರಕರಣ

ತುರ್ತು ವಿಚಾರಣೆಗೆ ಹೈಕೋರ್ಟ್ ನಕಾರ



ನವದೆಹಲಿ(ಪಿಟಿಐ): ಲೋಕಸಭೆಯ ಸಭಾಂಗಣದಲ್ಲಿ ಜಿಗಿದ ಪ್ರಕರಣದಲ್ಲಿ ಬಂಧಿತರಾಗಿರುವ ನೀಲಂ ಆಜಾದ್ ಸಲ್ಲಿಸಿರುವ ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ನೀಲಂ ಪರ ವಕೀಲರು ಸಲ್ಲಿಸಿದ್ದ ಮನವಿಯನ್ನು ತಿರಸ್ಕರಿಸಿದ ಕೋರ್ಟ್, ‘ಈ ವಿಚಾರದಲ್ಲಿ ಯಾವುದೇ ತುರ್ತು ಇಲ್ಲ, ಜನವರಿ 3ರಂದು ಪ್ರಕರಣದ ವಿಚಾರಣೆ ನಡೆಯಲಿದೆ’ ಎಂದು ತಿಳಿಸಿದೆ.

‘ನನ್ನ ಬಂಧನವು ಕಾನೂನು ಬಾಹಿರವಾಗಿದ್ದು, ನ್ಯಾಯಾಲಯದ ವಿಚಾರಣೆ ವೇಳೆ ನನ್ನ ಪರವಾಗಿ ವಾದ ಮಾಡಲು ವಕೀಲರನ್ನು ಸಂಪರ್ಕಿಸಲು ನನಗೆ ಅನುಮತಿ ನೀಡುತ್ತಿಲ್ಲ’ ಎಂದು ನೀಲಂ ಆರೋಪಿಸಿದ್ದಾರೆ.

ನೀಲಂ ಸೇರಿದಂತೆ ಆರು ಮಂದಿ ಆರೋಪಿಗಳು ಜನವರಿ 5ರವರೆಗೆ ಪೊಲೀಸ್ ಕಸ್ಟಡಿಯಲ್ಲಿದ್ದಾರೆ.

ಪಾಲಿಗ್ರಾಫ್ ಪರೀಕ್ಷೆಗೆ ಪೊಲೀಸರಿಂದ ಮನವಿ: ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಆರು ಜನ ಆರೋಪಿಗಳನ್ನು ಪಾಲಿಗ್ರಾಫ್ ಪರೀಕ್ಷೆಗೆ ಒಳಪಡಿಸಲು ಅನುಮತಿ ನೀಡುವಂತೆ ದೆಹಲಿ ಪೊಲೀಸರು ಗುರುವಾರ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದಾರೆ.

ಅರ್ಜಿಯನ್ನು ಪರಿಶೀಲಿಸಿದ ಕೋರ್ಟ್, ವಿಚಾರಣೆಯನ್ನು ಜನವರಿ 2ಕ್ಕೆ ಮುಂದೂಡಿದೆ.



ಸುಭಾಷಿತ

ಒಪ್ಪಿಕೊಂಡ ಕೆಲಸವನ್ನು ಹೇಗೆ ಮಾಡಬೇಕೆಂದರೆ, ಹರಕೆ ಹೊತ್ತವರ ಹಾಗೆ ತದೇಕಚಿತ್ತದಿಂದ ಹಾಗೂ ಶ್ರದ್ಧೆಯಿಂದ.

–ಟಿ.ವಿ.ವೆಂಕಟಾಚಲ ಶಾಸ್ತ್ರೀ

ಪ್ರಯಾಣಿಕರ ಸುರಕ್ಷತೆಯೇ ಆದ್ಯತೆಯಾಗಲಿ ಆರ್‌ಟಿಒ ಕಚೇರಿಗಳು ಲಂಚಮುಕ್ತ ಆಗಲಿ

ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ಬಸ್‌ಗಳನ್ನು ಸುಸ್ಥಿತಿಯಲ್ಲಿ ಇಡುವುದರ ಜೊತೆಗೆ, ಬಳಕೆಗೆ ಯೋಗ್ಯವಲ್ಲದ ಬಸ್‌ಗಳ ಸಂಚಾರಕ್ಕೆ ತಡೆ ಒಡ್ಡುವಂತೆ ಹೈಕೋರ್ಟ್ ನೀಡಿರುವ ಆದೇಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಿದೆ. ಬಡವರು, ಮಧ್ಯಮವರ್ಗದವರು, ಪ್ರಮುಖವಾಗಿ ಮಹಿಳೆಯರು ತಮ್ಮ ದಿನನಿತ್ಯದ ಕಾಯಕ, ಓಡಾಟಗಳಿಗೆ ನಾಲ್ಕು ನಿಗಮಗಳ ಬಸ್‌ಗಳನ್ನೇ ನೆಚ್ಚಿಕೊಂಡಿದ್ದಾರೆ. ಈ ಬಸ್‌ಗಳು ಸುಸ್ಥಿತಿಯಲ್ಲಿ ಇಲ್ಲದಿದ್ದರೆ, ಕಾಲಕಾಲಕ್ಕೆ ಅವುಗಳನ್ನು ನಿರ್ವಹಣೆ ಮಾಡದಿದ್ದರೆ ಅದರಿಂದಾಗುವ ಅನಾಹುತಗಳಿಗೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ. ಹೀಗಾಗಿ, ಕೋರ್ಟ್‌ನ ಸೂಚನೆಯನ್ನು ಸರ್ಕಾರ ಮತ್ತು ನಿಗಮಗಳ ಮುಖ್ಯಸ್ಥರು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇಬ್ಬರು ಮಕ್ಕಳು ಸಾವಿಗೀಡಾದ ಅಪಘಾತ ಪ್ರಕರಣವೊಂದರ ವಿಚಾರಣೆ ನಡೆಸಿದ ಹೈಕೋರ್ಟ್, 'ನಿಗದಿತ ಕಿಲೊ ಮೀಟರ್‌ಗಳಷ್ಟು ಸಂಚರಿಸಿದ ಬಳಿಕ ಸಾಮರ್ಥ್ಯ ಕಳೆದುಕೊಂಡ ಸಾರಿಗೆ ನಿಗಮಗಳ ಬಸ್‌ಗಳನ್ನು ಗುಜರಿಗೆ ಹಾಕಬೇಕು. ಇಂತಹ ಸ್ಥಿತಿಯಲ್ಲಿರುವ ಬಸ್‌ಗಳನ್ನು ಪುನಃ ನಗರ, ಹಳ್ಳಿಗಳ ಮಾರ್ಗದಲ್ಲಿ ಅಥವಾ ಬೇರಾವುದೇ ಮಾರ್ಗದಲ್ಲಿ ಸಂಚರಿಸಲು ಅನುಮತಿ ನೀಡಬಾರದು' ಎಂದು ಸ್ಪಷ್ಟವಾಗಿ ಹೇಳಿದೆ. ಪ್ರಕರಣವು ಸರ್ಕಾರಿ ಸಾರಿಗೆ ನಿಗಮಕ್ಕೆ ಸಂಬಂಧಿಸಿದ್ದಾದ್ದರಿಂದ ಸರ್ಕಾರ ಮತ್ತು ನಿಗಮಗಳಿಗಷ್ಟೇ ಹೈಕೋರ್ಟ್ ತಾಕೀತು ಮಾಡಿದೆ. ಸಮಸ್ಯೆ ಇದರಾಚೆಗೂ ಇರುವುದನ್ನು ಸರ್ಕಾರ ಗಮನಿಸಬೇಕಾದ ಅಗತ್ಯ ಇದೆ. ಸರ್ಕಾರಿ ಬಸ್‌ಗಳಷ್ಟೇ ಪ್ರಮಾಣದಲ್ಲಿ ಖಾಸಗಿ ಕಂಪನಿಗಳ ಬಸ್‌ಗಳೂ ರಾಜ್ಯದಲ್ಲಿ ಓಡಾಡುತ್ತಿವೆ. ಸರ್ಕಾರಿ ಬಸ್‌ಗಳಿಗೆ ಮೀಸಲಾದ ಮಾರ್ಗಗಳಲ್ಲಿ 'ಪ್ರವಾಸಿ' ಮಾದರಿಯ ಪರವಾನಗಿ ಪಡೆದ ಕೆಲವು ಖಾಸಗಿ ಸಂಸ್ಥೆಗಳು ಬಸ್‌ಗಳನ್ನು ಕಾರ್ಯಾಚರಣೆಗೆ ಇಳಿಸುತ್ತವೆ. ಕೆಲವು ಜಿಲ್ಲೆಗಳಲ್ಲಿ ಸರ್ಕಾರಿ ಬಸ್‌ಗಳಿಗಿಂತ ಹೆಚ್ಚಿನ ಸಂಖ್ಯೆಯ ಬಸ್‌ಗಳನ್ನು ಖಾಸಗಿಯವರೇ ನಿರ್ವಹಿಸುತ್ತಿದ್ದಾರೆ. ಈ ಬಸ್‌ಗಳ ಮೇಲೆ ನಿಗಾ ಇಡುವ ಕೆಲಸವನ್ನೂ ಸರ್ಕಾರ ಮಾಡಬೇಕಾಗಿದೆ.



ಆರ್‌ಟಿಒ ಕಚೇರಿಗಳನ್ನು ಶುದ್ಧೀಕರಿಸುವ ಕೆಲಸವನ್ನು ಸರ್ಕಾರ ಆದ್ಯತೆ ಮೇರೆಗೆ ಮಾಡಬೇಕಾಗಿದೆ

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರಾಮಚಂದ್ರ ಡಿ. ಹುದ್ದಾರ ಅವರಿದ್ದ ಏಕಸದಸ್ಯ ಪೀಠವು 'ಬಸ್‌ಗಳು ಸಂಚಾರಕ್ಕೆ ಅರ್ಹವಾಗಿರುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಯಿಂದ (ಆರ್‌ಟಿಒ) ಪ್ರತಿವರ್ಷವೂ ಸುಸ್ಥಿತಿ ದೃಢೀಕರಣ ಪತ್ರ (ಎಫ್‌ಸಿ) ಪಡೆಯಬೇಕು. ಅಂತಹ ಬಸ್‌ಗಳಿಗೆ ಮಾತ್ರವೇ ರಸ್ತೆಯಲ್ಲಿ ಸಂಚರಿಸಲು ಅನುಮತಿ ನೀಡಬೇಕು' ಎಂದು ಸರ್ಕಾರಕ್ಕೆ ನಿರ್ದೇಶಿಸಿದೆ. ದುಃಸ್ಥಿತಿಯಲ್ಲಿರುವ ಅಥವಾ ಬಳಕೆಗೆ ಯೋಗ್ಯವಲ್ಲದ ಬಸ್‌ಗಳನ್ನು ಓಡಿಸಲು ಅವಕಾಶ ನೀಡುವ ಹಲವು ದಾರಿಗಳನ್ನು ಅಧಿಕಾರಿಗಳು ಕಂಡುಕೊಂಡಿದ್ದಾರೆ. ಸರ್ಕಾರಿ ಬಸ್‌ಗಳ ಎಫ್‌ಸಿ ಪಡೆಯಲು ಲಂಚ ನೀಡುವ ಪರಿಪಾಟ ಇಲ್ಲ. ಹೀಗಾಗಿ, ತೀರಾ ಕಳಪೆಯಲ್ಲದ ಬಸ್‌ಗಳ ಸಂಚಾರಕ್ಕೆ ಸಾರಿಗೆ ನಿಗಮಗಳು ಒಂದಷ್ಟು ಮಟ್ಟಿಗೆ ಅವಕಾಶ ಮಾಡಿಕೊಟ್ಟಿವೆ. ಆದರೆ, ಖಾಸಗಿಯವರು ಪ್ರತಿವರ್ಷ ಎಫ್‌ಸಿ ಪಡೆಯಲು ನಿರ್ದಿಷ್ಟ ಮೊತ್ತದ ಲಂಚ ನೀಡಲೇಬೇಕು ಎಂದು ಬಸ್ ಮಾಲೀಕರು ದೂರುತ್ತಾರೆ. ಬಸ್‌ಗಳು ಸುಸ್ಥಿತಿಯಲ್ಲಿವೆಯೇ ಹಾಗೂ ಸುಸಜ್ಜಿತವಾಗಿವೆಯೇ ಎಂಬುದನ್ನು ಆಮೂಲಾಗ್ರವಾಗಿ ಪರಿಶೀಲಿಸಿದ ಬಳಿಕವೇ ಬ್ರೇಕ್ ಇನ್‌ಸ್ಪೆಕ್ಟರ್‌ಗಳು ತಾಂತ್ರಿಕ ವರದಿಯನ್ನು ಮೇಲಧಿಕಾರಿಗಳಿಗೆ ನೀಡಬೇಕು. ಅದಾದ ಬಳಿಕವೇ ಎಫ್‌ಸಿ ನೀಡಲಾಗುತ್ತದೆ. ಬಣ್ಣ ಸವರಿದ ಬಸ್ಸಿನ ಕವಚ, ಪಾಲಿಷ್ ಬಳಿದ ಟಯರ್‌ಗಳನ್ನಷ್ಟೇ ನೋಡಿ ಎಫ್‌ಸಿ ನೀಡುವ ಪರಿಪಾಟ ಇದೆ. ಲಂಚದ ಕೇಂದ್ರಗಳಾಗಿರುವ ಆರ್‌ಟಿಒ ಕಚೇರಿಗಳನ್ನು ಶುದ್ಧೀಕರಿಸುವ ಕೆಲಸವನ್ನು ಸರ್ಕಾರ ಆದ್ಯತೆ ಮೇರೆಗೆ ಮಾಡಬೇಕಾಗಿದೆ. ನಿರ್ದಿಷ್ಟ ಆರ್‌ಟಿಒ ಹುದ್ದೆಯಲ್ಲಿ ಇಷ್ಟೇ ವರ್ಷ ಇರಬೇಕು, ಈ ಅವಧಿಯಲ್ಲಿ ಕಾರ್ಯನಿರ್ವಹಿಸಲು ಇಂತಿಷ್ಟು ಕಪ್ಪವನ್ನು ಆಳುವವರಿಗೆ ನೀಡಬೇಕು ಎಂಬ ಅಲಿಖಿತ ನಿಯಮ ಚಾಲ್ತಿಯಲ್ಲಿದೆ. ಇದನ್ನು ಬದಲಾಯಿಸದೇ ಇದ್ದರೆ, ಪ್ರಯಾಣಿಕರ ಸುರಕ್ಷತೆಯು ಮರೀಚಿಕೆಯಾದೀತು. ಸರ್ಕಾರಿ ಬಸ್‌ಗಳ ಕುರಿತು ಹೈಕೋರ್ಟ್ ನೀಡಿರುವ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವ ಜವಾಬ್ದಾರಿಯನ್ನು ಸರ್ಕಾರ ಹೊರಬೇಕು. ದಲ್ಲಾಳಿಗಳು ಅಥವಾ ಮಧ್ಯವರ್ತಿಗಳಿಲ್ಲದೆ ಆರ್‌ಟಿಒ ಕಚೇರಿಗಳಲ್ಲಿ ಕೆಲಸವೇ ಆಗದು ಎನ್ನುವಂಥ ಸ್ಥಿತಿ ಇದೆ. ತಳಹಂತದಿಂದ ಕುಲಗೆಟ್ಟು ಹೋಗಿರುವ ಸಾರಿಗೆ ಇಲಾಖೆಯ ವಿವಿಧ ಸ್ತರಗಳಲ್ಲಿನ ಅವ್ಯವಸ್ಥೆಗೆ ಶಸ್ತ್ರಚಿಕಿತ್ಸೆ ಆಗಬೇಕಿದೆ. ಅದರ ಜತೆಗೆ ಪ್ರಯಾಣಿಕರಿಗೆ ಸೌಲಭ್ಯ ಕಲ್ಪಿಸುವುದು, ನೆಮ್ಮದಿಯ ಪ್ರಯಾಣಕ್ಕೆ ಅನುವಾಗುವಂತೆ ಬಸ್‌ಗಳು ಸುಸ್ಥಿತಿಯಲ್ಲಿರುವ ಹಾಗೆ ನೋಡಿಕೊಳ್ಳುವುದೂ ಆದ್ಯತೆಯಾಗಬೇಕು.

ದಿನದ ಟ್ವೀಟ್

ಕನ್ನಡ ಬಳಸುವುದಿಲ್ಲವೇಕೆ?



ನನಗೆ ಬಂದಿರುವ ಮಾಹಿತಿ ಪ್ರಕಾರ, ಕೆಲವು ಅಂಗಡಿಯವರು ಉದ್ದೇಶಪೂರ್ವಕವಾಗಿ ಕನ್ನಡ ಬೋರ್ಡ್ ಹಾಕಲು ಬಯಸುವುದಿಲ್ಲ, ಅದನ್ನು ನಾನು ಒಪ್ಪುವುದಿಲ್ಲ. ಕನ್ನಡ ಮಾತನಾಡುವ ಬಹುಪಾಲು ಜನರು ಇರುವಾಗ, ಇಂಗ್ಲಿಷ್ ಮತ್ತು ಹಿಂದಿಯೊಂದಿಗೆ ಕನ್ನಡವನ್ನು ಸೇರಿಸುವಲ್ಲಿ ಅವರ ಸಮಸ್ಯೆ ಏನು? ಜನರು ಕೇಳಿದಾಗ ಅವರು ದುರಹಂಕಾರದಿಂದ ವರ್ತಿಸಿದರು. ನಾನು ಹಿಂಸಾಚಾರವನ್ನು ಒಪ್ಪುವುದಿಲ್ಲ. ಆದರೆ ಅವರು ಕನ್ನಡ ಬೋರ್ಡ್‌ಗಳನ್ನು ಪ್ರದರ್ಶಿಸಲು ಏಕೆ ಬಯಸುವುದಿಲ್ಲ? ಇದಕ್ಕೆ ನನಗೆ ಉತ್ತರ ಬೇಕು!

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕಿಡಿನುಡಿ



ನಾಮಫಲಕ ವಿಚಾರಕ್ಕೆ ಅಂಗಡಿಗಳು, ವಾಣಿಜ್ಯ ಮಳಿಗೆಗಳ ಮೇಲೆ ದಾಳಿ ಮಾಡುವ ಅಗತ್ಯ ಇರಲಿಲ್ಲ. ಈ ಬಗ್ಗೆ ಸರ್ಕಾರ ಅಥವಾ ಬಿಬಿಎಂಪಿಯವರನ್ನು ಒತ್ತಾಯಿಸಬೇಕಿತ್ತು. ಪ್ರತಿಭಟನೆಯ ಸಂದರ್ಭದಲ್ಲಿ ವ್ಯಾಪಾರಿಗಳು ಪೊಲೀಸರ ರಕ್ಷಣೆ ಕೋರಿದ್ದಾರೆ. ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದನ್ನು ಪೊಲೀಸರು ನೋಡಿಕೊಂಡು ಸುಮ್ಮನಿರಬೇಕು ಎಂದು ಬಯಸುವುದು ತಪ್ಪು. ಕಾನೂನು ಸುವ್ಯವಸ್ಥೆ ಕಾಪಾಡುವ ಕೆಲಸವನ್ನು ಪೊಲೀಸರು ಮಾಡಿದ್ದಾರೆ.

ಜಿ.ಪರಮೇಶ್ವರ, ಗೃಹ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 29-12-1998

● **ದಳ ನಾಯಕತ್ವ ಬದಲಾವಣೆಗೆ ಹಿರಿಯ ಸಚಿವರ ವಿರೋಧ**

ಬೆಂಗಳೂರು, ಡಿ. 28– 'ರಾಜ್ಯದ ವಿಧಾನ ಸಭೆಗೆ ಚುನಾವಣೆ ನಡೆಯಲು ಇನ್ನು ಕೇವಲ ಹತ್ತು ತಿಂಗಳಿರುವಾಗ ದಳ ನಾಯಕತ್ವ ಬದಲಾವಣೆ ವಿಚಾರವು ಪಕ್ಷದ ಹಿತದೃಷ್ಟಿಯಿಂದ ಸಾಧುವಲ್ಲ' ಎಂಬ ಅಭಿಪ್ರಾಯವನ್ನು ಪಕ್ಷದ ವರಿಷ್ಠರಿಗೆ ತಿಳಿಸಲು ರಾಜ್ಯದ ಕೆಲವು ಹಿರಿಯ ಸಚಿವರು ತೀರ್ಮಾನಿಸಿದ್ದಾರೆ.

'ವಿಧಾನಸಭೆ ಚುನಾವಣೆ ಇಷ್ಟು ಹತ್ತಿರದಲ್ಲಿರುವಾಗ ಮುಖ್ಯಮಂತ್ರಿ ಜೆ.ಎಚ್. ಪಟೇಲರ ನಾಯಕತ್ವ ಬದಲಾವಣೆಯಾಗಲಿ, ಸಂಪುಟ ಪುನರ್‌ರಚನೆ ಸಂದರ್ಭದಲ್ಲಿ ಸಚಿವರನ್ನು ಕೈಬಿಡುವುದಾಗಲಿ ಸರಿಯಾದ ಕ್ರಮವಾಗುವುದಿಲ್ಲ. ಇದರಿಂದ ಭಿನ್ನಮತ ಇನ್ನಷ್ಟು ಹೆಚ್ಚಿ ಪಕ್ಷ ನೆಲಕಚ್ಚುವುದರಲ್ಲಿ ಯಾವುದೇ ಸಂಶಯವಿಲ್ಲ' ಎಂಬ ಅಭಿಪ್ರಾಯ ಹಿರಿಯ ಸಚಿವರ ಸಭೆಯಲ್ಲಿ ವ್ಯಕ್ತವಾಯಿತು ಎಂದು ಹೇಳಲಾಗಿದೆ.

● **ಎಡದಂಡೆ ಕಾಲುವೆ ದುರಸ್ತಿ ಪೂರ್ಣ**

ಬೆಂಗಳೂರು, ಡಿ. 28– ಮುನಿರಾಬಾದ್‌ನಲ್ಲಿ ಈ ತಿಂಗಳ 22ರಂದು ಒಡೆದುಹೋಗಿದ್ದ ತುಂಗಭದ್ರಾ ಎಡದಂಡೆ ಕಾಲುವೆಯನ್ನು ದುರಸ್ತಿ ಮಾಡಿ, ಇಂದಿನಿಂದ ನೀರು ಬಿಡುವ ಕಾರ್ಯ ಆರಂಭವಾಗಿದೆ.

ಈ ಕಾಲುವೆ ಪದೇ ಪದೇ ಒಡೆಯದಂತೆ ಶಾಶ್ವತ ಕಾಮಗಾರಿ ಕೈಗೊಳ್ಳಲು ನೂರು ಕೋಟಿ ರೂಪಾಯಿಗಳ ಪ್ರಸ್ತಾವಕ್ಕೆ ರಾಜ್ಯ ಸಚಿವ ಸಂಪುಟ ಈಗಾಗಲೇ ತಾತ್ವಿಕ ಒಪ್ಪಿಗೆ ನೀಡಿದೆ ಎಂದು ಭಾರಿ ನೀರಾವರಿ ಸಚಿವ ಕೆ.ಎನ್.ನಾಗೇಗೌಡ ಅವರು ಇಂದು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 29-12-1973

● **ರಾಜ್ಯ ಖಾದಿ, ಗ್ರಾಮೋದ್ಯೋಗ ಮಂಡಳಿ 'ಅಕ್ರಮ'ಗಳ ವಿಚಾರಣೆಗೆ [illegible] ಅಧಿಕಾರಿ**

ಬೆಂಗಳೂರು, ಡಿ. 28– ರಾಜ್ಯದ ಖಾದಿ ಗ್ರಾಮೋದ್ಯೋಗ ಮಂಡಳಿಯ ಕಳೆದ ಹದಿನೈದು ವರ್ಷಗಳ 'ಅಕ್ರಮ' ವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ರಾಜ್ಯ ಸರ್ಕಾರ ಶೀಘ್ರದಲ್ಲಿಯೇ ಒಬ್ಬ ಅಧಿಕಾರಿಯನ್ನು ನೇಮಿಸಲಿದೆ.

ಇಂದು ಬೆಳಿಗ್ಗೆ ರಾಜ್ಯದ ಖಾದಿ ಗ್ರಾಮೋದ್ಯೋಗದ ಹೊಸ ಮಂಡಳಿಯನ್ನು ಉದ್ಘಾಟಿಸಿದ ಕೈಗಾರಿಕಾ ಸಚಿವ ಎಸ್.ಎಂ.ಕೃಷ್ಣ ಅವರು ಈ ವಿಷಯವನ್ನು ತಿಳಿಸಿ, 'ಹಿಂದಿನ ವರ್ಷಗಳ ಅವ್ಯವಹಾರ ನೂತನ ಮಂಡಳಿಗೆ ಮಾರಕವಾಗಬಾರದು. ಅವುಗಳ ಪಾಪ ಇದಕ್ಕೆ ಅಂಟಬಾರದು. ಹೊಸ ಸನ್ನಿವೇಶ ಹಾಗೂ ಭೂಮಿಕೆಯಲ್ಲಿ ಮಂಡಳಿ ತನ್ನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲಿ' ಎಂದು ಹಾರೈಸಿದರು.

● **3 ವಾರದಲ್ಲಿ ನಗರಕ್ಕೆ ಕಾವೇರಿ**

ಬೆಂಗಳೂರು, ಡಿ. 28– ಬೆಂಗಳೂರಿನ ನೀರಿನ ದಾಹ ತಣಿಸುವ ಕಾವೇರಿ ನೀರನ್ನು ನಗರಕ್ಕೆ ಬರಮಾಡಿಕೊಳ್ಳಲು ಸಕಲ ಸಿದ್ಧತೆಗಳು ಪೂರ್ಣಗೊಂಡಿದ್ದು ಈಗಾಗಲೇ ತೊರೆಕಾಡನಹಳ್ಳಿಯಿಂದ ಕಾವೇರಿಯು ಸುಮಾರು 9 ಕಿ.ಮೀ.ಗಳಷ್ಟು ದೂರ ಬೆಂಗಳೂರಿನತ್ತ ಪ್ರವಹಿಸಲಾರಂಭಿಸಿದ್ದಾಳೆ ಎಂದು ಸಚಿವ ಕೆ.ಎಚ್.ರಂಗನಾಥ್ ಇಂದು ತಿಳಿಸಿದರು.

ದೇಶದ ಸದ್ಯದ ರಾಜಕೀಯ ಪರಿಸ್ಥಿತಿ 1967ರ ಸ್ಥಿತಿಯನ್ನೇ ಹೋಲುವಂತಿದೆ!

ಇಂದಿರಾ–ನರೇಂದ್ರ: ಬಿಂಬ, ಪ್ರತಿಬಿಂಬ!



ಅನುಸಂಧಾನ

ರವೀಂದ್ರ ಭಟ್ಟ

ಮೊನ್ನೆಮೊನ್ನೆಯಷ್ಟೇ ಸಂಸತ್ತಿನ ಒಳಗೆ ಇಬ್ಬರು ಯುವಕರು ಜಿಗಿದರು. 'ನಿರುದ್ಯೋಗ ಸಮಸ್ಯೆ ಮತ್ತು ನಿರಂಕುಶ ಆಡಳಿತ'ದ ವಿರುದ್ಧ ಪ್ರತಿಭಟನೆ ನಡೆಸಿದರು. ಈ ಯುವಕರು ಎತ್ತಿದ ಪ್ರಶ್ನೆಗಳ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯಾಗಲೇ ಇಲ್ಲ. ಗೃಹ ಸಚಿವರ ಹೇಳಿಕೆಗೆ ವಿರೋಧ ಪಕ್ಷಗಳು ಪಟ್ಟು ಹಿಡಿದವು. ಇದಕ್ಕೆ ಕೆರಳಿದ ಆಡಳಿತ ಪಕ್ಷ, 146 ಸಂಸದರನ್ನು ಅಮಾನತುಗೊಳಿಸಿ ಕಲಾಪ ನಡೆಸಿತು. ತನಗೆ ಬೇಕಾದ ಮಸೂದೆಗಳಿಗೆ ಅಂಗೀಕಾರ ಪಡೆದ ಬಳಿಕ ಸಂಸತ್ ಅಧಿವೇಶನಕ್ಕೆ ಮಂಗಳ ಹಾಡಲಾಯಿತು. ಸರ್ವಾಧಿಕಾರಿ ಧೋರಣೆಗೆ ಇದು ಒಂದು ನಿದರ್ಶನದಂತೆಯೇ ಇತ್ತು.

ಭಾರತದ ರಾಜಕೀಯ ಇತಿಹಾಸದಲ್ಲಿ ಇಂತಹ ಬಹಳಷ್ಟು ಸನ್ನಿವೇಶಗಳು ನಡೆದಿವೆ. ಆಡಳಿತ ಪಕ್ಷ ಮತ್ತು ಸರ್ಕಾರದ ಮೇಲೆ ಬಿಗಿ ಹಿಡಿತ ಸಾಧಿಸಿ, ತಾನು ಬಯಸಿದಂತೆ ನಡೆದುಕೊಳ್ಳುವುದರಲ್ಲಿ ಇಂದಿರಾ ಗಾಂಧಿ ಹೆಸರಾಗಿದ್ದರು. ಈಗ ನರೇಂದ್ರ ಮೋದಿ ಅವರನ್ನು ನೋಡಿದಾಗಲೂ ಅಂತಹುದೇ ಭಾವನೆ ಬಂದರೆ ಅದು ಭಾರತದ ಪ್ರಜೆಗಳ ತಪ್ಪಲ್ಲ. ಅವರು ಗಾಂಧಿ, ಇವರು ಮೋದಿ, ಅಷ್ಟೇ ವ್ಯತ್ಯಾಸ.

ಇಂದಿರಾ ಗಾಂಧಿ ಮತ್ತು ನರೇಂದ್ರ ಮೋದಿ ಅವರ ನಡುವೆ ಬಹಳಷ್ಟು ಸಾಮ್ಯಗಳಿವೆ. ಒಂದು ಕಾಲದಲ್ಲಿ 'ಇಂದಿರಾ ಅಂದರೆ ಇಂಡಿಯಾ, ಇಂಡಿಯಾ ಅಂದರೆ ಇಂದಿರಾ' ಎಂಬ ಭಾವನೆ ಇತ್ತು. ಈಗಲೂ ಅಷ್ಟೆ. 'ಮೋದಿ ಅಂದರೆ ಭಾರತ, ಭಾರತ ಅಂದರೆ ಮೋದಿ' ಎಂದೇ ಬಿಂಬಿಸಲಾಗುತ್ತಿದೆ. ತಂತ್ರ, ಪ್ರತಿತಂತ್ರ ಹೂಡಿಕೆಯಲ್ಲಿಯೂ ಸಾಮ್ಯ ಕಾಣುತ್ತದೆ. ಇಂದಿರಾ ಗಾಂಧಿ ಅವರು ರಾಜ್ಯ ಸರ್ಕಾರಗಳನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ಹೇರುವುದರಲ್ಲಿ ಪ್ರಸಿದ್ಧರಾಗಿದ್ದರು. ಈಗ ರಾಜ್ಯ ಸರ್ಕಾರವನ್ನು ವಜಾ ಮಾಡುತ್ತಿಲ್ಲ. ಶಾಸಕರನ್ನೇ ಖರೀದಿ ಮಾಡುವ 'ಆಪರೇಷನ್ ಕಮಲ' ಎಂಬ ಹೊಸ ಪದ್ಧತಿ ಜಾರಿಗೆ ಬಂದಿದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಬಿಜೆಪಿ ನೇತೃತ್ವದ ಸರ್ಕಾರ ಸ್ಥಾಪಿಸಲಾಯಿತು. ಇಂದಿರಾ ಗಾಂಧಿ ರೂಪಾಯಿ ಅಪಮೌಲ್ಯ ಮಾಡಿದ್ದರೆ, ಮೋದಿ ಅಧಿಕ ಮುಖಬೆಲೆಯ ನೋಟು ರದ್ದತಿ ಮಾಡಿದರು. ಅವರು ಪೋಖ್ರಾನ್‌ನಲ್ಲಿ ಅಣು ಸ್ಫೋಟ ನಡೆಸಿದರೆ ಇವರು ಸರ್ಜಿಕಲ್ ಸ್ಟ್ರೈಕ್ ಮಾಡಿದರು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವರು ಬೆಲೆ ಕೊಡಲಿಲ್ಲ. ಇವರೂ ಕೊಡಲಿಲ್ಲ. ಅವರು ಮಾಧ್ಯಮಗಳನ್ನು ನಿಯಂತ್ರಿಸಿದರು. ಇವರೂ ಅದನ್ನೇ ಮಾಡಿದ್ದಾರೆ. ಅವರು ಸಂಕಷ್ಟ ಬಂದಾಗಲೆಲ್ಲಾ ಗರೀಬಿ ಹಟಾವೋ ಎಂದರು. ಇವರು ಸಂಕಷ್ಟ ಬಂದಾಗಲೆಲ್ಲಾ ರಾಮ ಜಪ ಮಾಡುತ್ತಾರೆ. ನ್ಯಾಯಾಂಗ ನಿಯಂತ್ರಣಕ್ಕೂ ಅವರು ಮುಂದಾಗಿದ್ದರು. ಇವರು ಬಹಿರಂಗವಾಗಿ ಹಾಗೆ ಮಾಡಲಿಲ್ಲ, ಒಳ ಏಟು ಕೊಟ್ಟರು.

ಪ್ರಧಾನ ಮಂತ್ರಿ ಸ್ಥಾನಕ್ಕೆ ಇಂದಿರಾ ಗಾಂಧಿ ಆಯ್ಕೆಯಾದ ಸನ್ನಿವೇಶ ಮತ್ತು ನರೇಂದ್ರ ಮೋದಿ ಪ್ರಧಾನಿಯಾದ ಸನ್ನಿವೇಶ ಕೂಡ ಹೆಚ್ಚೂ ಕಡಿಮೆ ಒಂದೇ ರೀತಿ ಇತ್ತು. 1966ರ ಜನವರಿ 11ರಂದು ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ನಿಧನರಾದರು. ಆಗ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಮೊರಾರ್ಜಿ ದೇಸಾಯಿ ಅವರು ತಾವು ಪ್ರಧಾನಿ ಸ್ಥಾನದ ಆಕಾಂಕ್ಷಿ ಎಂದು ಬಹಿರಂಗವಾಗಿಯೇ ಘೋಷಿಸಿದರು. ಸ್ವಾತಂತ್ರ್ಯ ಹೋರಾಟಗಾರ, ಉತ್ತಮ ಆಡಳಿತಗಾರ ಎಂದು ಹೆಸರು ಮಾಡಿದ್ದ ಮತ್ತು ಕಟ್ಟುನಿಟ್ಟಿನ ಧೋರಣೆ ಹೊಂದಿದ್ದ ಮೊರಾರ್ಜಿ ಅವರನ್ನು ಪ್ರಧಾನಿ ಮಾಡಿದರೆ ಅವರನ್ನು ನಿಯಂತ್ರಿಸುವುದು ಕಷ್ಟ ಎನ್ನುವುದು ಕಾಂಗ್ರೆಸ್‌ನ ಆಗಿನ ಅಧ್ಯಕ್ಷ ಕೆ.ಕಾಮರಾಜ್, ಇತರ ಮುಖಂಡರಾದ ನಿಜಲಿಂಗಪ್ಪ, ಸಂಜೀವ ರೆಡ್ಡಿಯಂತಹವರ ಅಭಿಪ್ರಾಯವಾಗಿತ್ತು. ಅದಕ್ಕಾಗಿಯೇ ಮೊರಾರ್ಜಿ ಅವರಿಗೆ ಪ್ರಧಾನಿ ಸ್ಥಾನ ತಪ್ಪಿಸಲಾಯಿತು. ಇಂದಿರಾ ಗಾಂಧಿ ಪ್ರಧಾನಿಯಾದರು.

2014ರಲ್ಲಿ ನರೇಂದ್ರ ಮೋದಿ ಪ್ರಧಾನಿಯಾದ ಸನ್ನಿವೇಶವನ್ನು ನೆನಪಿಸಿಕೊಳ್ಳಿ. ಆಗಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದರೆ ಪಕ್ಷದ ಅತ್ಯಂತ ಹಿರಿಯ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅವರು ಪ್ರಧಾನಿಯಾಗಬಹುದು ಎಂಬ ಭಾವನೆ ಇತ್ತು. ಆದರೆ ಅದು ತಪ್ಪಾಯಿತು. 1966ರಲ್ಲಿ ಮೊರಾರ್ಜಿ ದೇಸಾಯಿ ಅವರನ್ನು ಉಪ ಪ್ರಧಾನಿ ಮಾಡಿ ಹಣಕಾಸು ಖಾತೆಯ ಹೊಣೆಯನ್ನು ವಹಿಸಲಾಗಿತ್ತು. 2014ರಲ್ಲಿ ಅಂತಹ ಭಾಗ್ಯ ಅಡ್ವಾಣಿ ಅವರಿಗೆ ಸಿಗಲಿಲ್ಲ. 1966ರಲ್ಲಿ ಪ್ರಧಾನಿ ಸ್ಥಾನಕ್ಕೆ ಏರಿದ ಇಂದಿರಾ ಗಾಂಧಿ ಅವರನ್ನು ನಿಯಂತ್ರಿಸುವುದು ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಹಿರಿಯರನ್ನು ಬದಿಗೆ ತಳ್ಳಿ ಅವರು ತಮ್ಮದೇ ತಂಡ ಕಟ್ಟಿದರು. ಈಗಲೂ ಹಾಗೆಯೇ ಆಗಿದೆ. ಮೋದಿ ಅವರನ್ನು ನಿಯಂತ್ರಿಸುವುದೂ ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಹಿರಿಯ ನಾಯಕರೆಲ್ಲಾ ಬದಿಗೆ ಸರಿದರು. ಅವರೂ ತಮ್ಮದೇ ತಂಡವನ್ನು ಕಟ್ಟಿಕೊಂಡರು. ಮೋದಿ ಅವರು ಪಕ್ಷಕ್ಕಿಂತಲೂ ಆರ್‌ಎಸ್‌ಎಸ್‌ಗಿಂತಲೂ ಮಿಗಿಲಾಗಿ ಬೆಳೆದರು.

1967ರಲ್ಲಿ ಲೋಕಸಭಾ ಚುನಾವಣೆಯನ್ನು ಗೆಲ್ಲುವುದು ಇಂದಿರಾ ಗಾಂಧಿ ಅವರಿಗೆ ಸವಾಲಾಗಿತ್ತು. ದೇಶದ ಆರ್ಥಿಕ ಸ್ಥಿತಿ ಚೆನ್ನಾಗಿರಲಿಲ್ಲ. ನಿರುದ್ಯೋಗ ಹೆಚ್ಚಾಗಿತ್ತು. ಕೈಗಾರಿಕಾ ಉತ್ಪಾದನೆ ಕುಸಿದಿತ್ತು. ರಫ್ತು ಪ್ರಮಾಣ ಇಳಿಕೆಯಾಗಿತ್ತು. ಆಹಾರಧಾನ್ಯಗಳ ಕೊರತೆ ಕಾಡುತ್ತಿತ್ತು. ಅಗತ್ಯ ವಸ್ತುಗಳ ಬೆಲೆ ಏರಿಕೆ ವಿಪರೀತವಾಗಿತ್ತು. 2024ರ ಲೋಕಸಭಾ ಚುನಾವಣೆ ಹೊತ್ತಿನಲ್ಲಿಯೂ ಇಂತಹುದೇ ಸ್ಥಿತಿ ದೇಶದಲ್ಲಿ ಇದೆ. ಈಗಲೂ ಭಾರತ ಹಸಿವಿನ ಸೂಚ್ಯಂಕದಲ್ಲಿ ಪಾತಾಳದಲ್ಲಿದೆ. ಬೆಲೆ ಏರಿಕೆ ವಿಪರೀತವಾಗಿದೆ. ಆಗಲೂ ಮಿಲಿಟರಿ ವೆಚ್ಚ ಅಧಿಕವಾಗಿತ್ತು. ಈಗಲೂ ಅಧಿಕವಾಗಿದೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ದೇಶದ ಯುವಕರು ದಿಕ್ಕುಗಾಣದೆ ಸಂಸತ್ತಿನ ಒಳಕ್ಕೆ ಜಿಗಿಯುವ ಹಂತ ತಲುಪಿದ್ದಾರೆ.

1967ರ ಲೋಕಸಭಾ ಚುನಾವಣೆಗೆ ಮೊದಲು ಸಮಾಜವಾದಿ ನಾಯಕ ರಾಮಮನೋಹರ ಲೋಹಿಯಾ ಅವರು 'ದೇಶದ ಎಲ್ಲ ವಿರೋಧ ಪಕ್ಷಗಳೂ ಕಾಂಗ್ರೆಸ್ ವಿರುದ್ಧ ಒಂದಾಗಬೇಕು' ಎಂದು ಕರೆ ನೀಡಿದರು. ಆಗ ದೇಶದಲ್ಲಿ ಸಂಚಲನ ಉಂಟಾಗಿ ವಿರೋಧ ಪಕ್ಷಗಳು ಒಂದಾದವು. ಈಗಲೂ ಬಿಜೆಪಿ ವಿರುದ್ಧ ವಿರೋಧ ಪಕ್ಷಗಳು ಒಂದಾಗಿವೆ. 1967ರ ಫೆಬ್ರುವರಿಯಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಲ ಕುಸಿಯಿತು. ಆದರೆ ಲೋಕಸಭೆಯಲ್ಲಿ ಬಹುಮತ ಪಡೆಯುವಲ್ಲಿ ಯಶಸ್ವಿಯಾಯಿತು. 1952ರಲ್ಲಿ ಶೇ 45ರಷ್ಟು ಮತ ಪಡೆದು 363 ಸ್ಥಾನ ಗಳಿಸಿದ್ದ ಕಾಂಗ್ರೆಸ್, 1957ರಲ್ಲಿ ಶೇ 47.8ಕ್ಕೆ ಮತದ ಪ್ರಮಾಣವನ್ನು ಹೆಚ್ಚಿಸಿಕೊಂಡು 371 ಸ್ಥಾನ ಗೆದ್ದಿತ್ತು. 1962ರಲ್ಲಿ ಶೇ 44.7ರಷ್ಟು ಮತ ಪಡೆದು 361 ಸ್ಥಾನ ಗಳಿಸಿತ್ತು. ಆದರೆ 1967ರಲ್ಲಿ ಕಾಂಗ್ರೆಸ್ ಮತದ ಪ್ರಮಾಣ ಶೇ 40.8ಕ್ಕೆ ಕುಸಿಯಿತು. ಲೋಕಸಭೆಯಲ್ಲಿ 283 ಸ್ಥಾನಗಳನ್ನು ಮಾತ್ರ ಪಡೆಯಲು ಸಾಧ್ಯವಾಯಿತು. ಅಂದರೆ 83 ಸ್ಥಾನಗಳನ್ನು ಕಳೆದುಕೊಂಡಿತು.


ಈಗಲೂ ದೇಶದ ರಾಜಕೀಯ ಪರಿಸ್ಥಿತಿ ಹಾಗೆಯೇ ಇದೆ. 2014ರಲ್ಲಿ ಬಿಜೆಪಿ ಶೇ 31ರಷ್ಟು ಮತಗಳನ್ನು ಪಡೆದು 282 ಸ್ಥಾನ ಗಳಿಸಿತ್ತು. ಎನ್‌ಡಿಎ 336 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. 2019ರಲ್ಲಿ ಬಿಜೆಪಿ ಮತದ ಪ್ರಮಾಣ ಶೇ 37.36ಕ್ಕೆ ಏರಿಕೆಯಾಗಿ 303 ಸ್ಥಾನಗಳನ್ನು ಗೆದ್ದುಕೊಂಡಿತು. ಎನ್‌ಡಿಎ 353 ಕ್ಷೇತ್ರಗಳಲ್ಲಿ ಜಯ ಸಾಧಿಸಿತ್ತು. 1967ರಲ್ಲಿ ಕಾಂಗ್ರೆಸ್ ಪಕ್ಷ ಕುಸಿತ ಕಂಡ ಹಾಗೆಯೇ ಈಗ ಬಿಜೆಪಿ ಕುಸಿತ ಕಾಣುವ ಸಾಧ್ಯತೆ ಇದೆ. ಎನ್‌ಡಿಎಗೆ ಬಹುಮತ ಬರಬಹುದು. ಆದರೆ 2019ರಲ್ಲಿ ದೊರೆತಷ್ಟು ಭರ್ಜರಿ ಫಸಲು ದೊರೆಯದಿರಬಹುದು. ಮೇಲೇರಿದವರು ಕೆಳಕ್ಕೆ ಇಳಿಯಲೇಬೇಕಲ್ಲ. ಅದು ಇಂದಿರಾ ಆದರೂ ಸೈ, ನರೇಂದ್ರ ಆದರೂ ಸೈ.

ಅಂದಹಾಗೆ, ಪ್ರಧಾನಿ ನರೇಂದ್ರ ಮೋದಿ ಅವರು ಜವಾಹರಲಾಲ್ ನೆಹರೂ ಅವರನ್ನು ಟೀಕೆ ಮಾಡಿದಷ್ಟು ಇಂದಿರಾ ಗಾಂಧಿ ಅವರನ್ನು ಟೀಕೆ ಮಾಡುವುದಿಲ್ಲ. ಯಾಕೆ?

ಯಾಕೆಂದರೆ, ಸ್ಫೂರ್ತಿದಾಯಕರನ್ನು ಟೀಕೆ ಮಾಡುವುದು ಭಾರತೀಯ ಸಂಪ್ರದಾಯ ಅಲ್ಲ!



ಚುರುಮುರಿ



ಮೂಳೆ ಮಹತ್ವ!

● ನಾರಾಯಣ ರಾಯಚೂರ್

'ರೀ, ಇಲ್ನೋಡಿ... ಮದುವೆ ಊಟದಲ್ಲಿ ಮೂಳೆ ಇರಲಿಲ್ಲ ಅಂತ ಮದುವೇನೇ ಮುರಿದು ಬಿದ್ದಿದೆಯಂತೆ!'

'ಮತ್ತೆ?! ಮೂಳೆ, ಮಾನವನ ದೇಹದಲ್ಲಿ ಎಂಥ ಸ್ಟ್ರಾಂಗ್ ಅಂಗ ಅಂತ ಓದಿಲ್ವಾ? ನಿನಗೆ ಗೊತ್ತಾ, ದಧೀಚಿ ಋಷಿಯ ಬೆನ್ನಮೂಳೆಯಿಂದ ಆಯುಧ ತಯಾರಿಸಿ ದೇವ- ರಾಕ್ಷಸ ಯುದ್ಧದಲ್ಲಿ ಬಳಸಿ ದೇವತೆಗಳು ಗೆದ್ದರಂತೆ. ಅಷ್ಟೇ ಅಲ್ಲ, ಮಾತೆತ್ತಿದರೆ 'ರೈತ ನಾಡಿನ ಬೆನ್ನೆಲುಬು' ಅಂತ ಉದ್ದುದ್ದ ಭಾಷಣ ಬಿಗಿಯೋದು ಕೇಳಿಲ್ವಾ?'

'ಪುರಾಣ ಬಿಡಿ, ವರ್ತಮಾನಕ್ಕೆ ಬನ್ನಿ. ವರ್ತಮಾನ ಪತ್ರಿಕೆಯಲ್ಲಿ ಏನು ಬಂದಿದೆ ನೋಡಿ'.

'ವರ್ತಮಾನದ್ದೇ ಹೇಳ್ತೀನಿ ಕೇಳು. ಸಚಿವರೊಬ್ಬರು ರೈತರ ಬಗ್ಗೆ ಎಲುಬಿಲ್ಲದ ನಾಲಿಗೆ ಹರಿಯಬಿಟ್ಟು, ಮುಖ್ಯಮಂತ್ರಿ ಅವರಿಂದಲೂ ಮಂಗಳಾರತಿ ಮಾಡಿಸಿಕೊಂಡಿದ್ದಾರಲ್ಲ, ಅದೂ ಬಂದಿದೆ ನೋಡು'.

'ನಾಲಿಗೇನೆ ರೀ ಎಲ್ಲದಕ್ಕೂ ಮೂಲ, ಮಾತಿಗೂ- ಚಪಲಕ್ಕೂ... ಈಗ ಮಾಂಗಲ್ಯ ಮಹಾತ್ಮೆ ಕೇಳಿ. ಬೀಗರ ಊಟೋಪಚಾರಕ್ಕೆ ಮೂಳೆ ಬಡಿಸಿಲ್ಲ ಅಂತ ಹುಡುಗನ ಕಡೆಯವರು ಗಲಾಟೆ ಮಾಡಿ, ಪೊಲೀಸರ ಆಗಮನವಾಗಿ ಪರಿಸ್ಥಿತಿ ಹತೋಟಿಗೆ ಬಂತಂತೆ'.

'ಹೆಣ್ಣು ಕೊಟ್ಟ ಮಾವನ ಮನೆಗೆ ಹೋಗುವ ಬದಲಾಗಿ ಕೇಸು, ಅರೆಸ್ಟು ಅಂತೆಲ್ಲ ಪೊಲೀಸ್ 'ಮಾವ'ನ ಮನೆ ಸೇರುವಂತೆ ಆಗಲಿಲ್ಲವಲ್ಲ'.

'ಮದುವೇನೇ ಬಂಧನ ಅಲ್ಲವೇ?! ಮತ್ತಿನ್ನೇನು ಬಂಧನ?'.

'ಅದ್ಸರಿ... ಕಾರು, ಸೈಟು, ಫ್ಲ್ಯಾಟು, ದುಡ್ಡು, ಚಿನ್ನ ಕೊಟ್ಟಿಲ್ಲ ಅಂತೆಲ್ಲ ಮದುವೆ ಮುರಿದು ಬೀಳೋದು ನೋಡಿದೀವಿ. ಸಾಮಾನ್ಯವಾಗಿ ಅಂದವಾದ ಹುಡುಗಿಯ 'ಬೋನ್'ಗೆ ಹುಡುಗ ಬೀಳೋದು ಸಹಜ. ಈ ಕೇಸಲ್ಲಿ 'ಬೋನೇ' ಸಂಬಂಧಾನ ಬೀಳಿಸಿಬಿಟ್ಟಿದೆ'.

'ರಕ್ತ ಸಂಬಂಧದಲ್ಲಿ ಮದುವೆ ಮಾಡಿ-ಕೊಳ್ಳೋದನ್ನ ವಿಜ್ಞಾನ ಒಪ್ಪದೆ ಇರೋ ಬಗ್ಗೆ ಕೇಳಿದ್ದೆ, ಆದರೆ ಈಗ ಮೂಳೆ ಸಂಬಂಧದ ಬಗ್ಗೆಯೂ ಎಚ್ಚರ ವಹಿಸಬೇಕಾಗಿದೆ'.

'ಮಾನವಾ, ದೇಹವು ಮೂಳೆ ಮಾಂಸದ ತಡಿಕೆ'- ಎಫ್.ಎಂ.ನಲ್ಲಿ 'ಭಕ್ತ ಕುಂಬಾರ' ಚಿತ್ರದ ಹಾಡು ಜೋರಾಗಿ ಕೇಳಿಬರುತ್ತಿತ್ತು.

ಸಂಗತ

ಮೊಸಳೆ ಸಂರಕ್ಷಣೆ: ಲೆಕ್ಕ ತಪ್ಪಿದ್ದೆಲ್ಲಿ?

ಒಡಿಶಾದ ರಾಷ್ಟ್ರೀಯ ಉದ್ಯಾನದಲ್ಲಿ ಸಂರಕ್ಷಣಾ ಕಾರ್ಯದಿಂದ ಮೊಸಳೆಗಳ ಸಂಖ್ಯೆ ನಿರೀಕ್ಷೆಗೂ ಮೀರಿ ಹೆಚ್ಚಾಗಿರುವುದು ಅರಣ್ಯ ಇಲಾಖೆಯ ನಿದ್ದೆಗೆಡಿಸಿದೆ

● ಶಿಶಿರ ವಸಿಷ್ಠ

ವನ್ಯಜೀವಿ, ಪಕ್ಷಿ, ಪರಿಸರದ ಮಾತು ಬಂದಾಗಲೆಲ್ಲ ಅವುಗಳ ಸಂರಕ್ಷಣೆಯ ಬಗೆಗೂ ಚರ್ಚೆಗಳಾಗುತ್ತವೆ. ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್ (ಐಯುಸಿಎನ್) ನಾಲ್ಕು ವರ್ಷಗಳಿಗೊಮ್ಮೆ ಇಂಥಿಂಥ ಪ್ರಾಣಿ, ಪಕ್ಷಿ, ಜಲಚರಗಳು ವಿನಾಶದ ಅಂಚು ತಲುಪಿವೆ ಎಂಬ ಪಟ್ಟಿ ನೀಡಿದಾಗ, 'ಅಯ್ಯೋ ಸರಿಯಾದ ಸಂರಕ್ಷಣೆ ಇಲ್ಲದೆ ಹೀಗಾಗಿದೆ' ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಜೊತೆಗೆ, ಅದಕ್ಕೆ ಪರಿಹಾರವೆಂಬಂತೆ ವಿಶ್ವದ ಅಥವಾ ಅದೇ ದೇಶದ ಇತರ ಪ್ರದೇಶಗಳಲ್ಲಿ ನಡೆದ ಸಂರಕ್ಷಣಾ ಕೆಲಸಗಳು ಯಶಸ್ವಿಯಾದದ್ದರ ಬಗ್ಗೆ ಸಚಿತ್ರ ವರದಿಗಳು ಪ್ರಕಟಗೊಂಡು, ಇಲ್ಲಿ ಮಾಡಿದಂತೆ ಬೇರೆಡೆಯೂ ಕೆಲಸ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ, ಅದಕ್ಕಾಗಿ ಕ್ರಮ ವಹಿಸಿ ಎಂಬ ಒತ್ತಾಯ ಜೋರಾಗುತ್ತದೆ.

ಒಂದು ಜೀವಿಆವಾಸದ ಪ್ರಾಣಿ, ಪಕ್ಷಿ, ಗಿಡ, ಜಲಚರಗಳ ಸಂಖ್ಯೆ ಕಡಿಮೆಯಾದಾಗ ಆತಂಕ ಮೂಡುವುದು ಸಹಜ. ಪರಿಸರದಲ್ಲೇನೋ ಅಪರಾ ತಪರಾ ಆಗಿದೆ ಎನ್ನಬಹುದು. ಆದರೆ, ಅಳಿವಿನಂಚಿನಲ್ಲಿದ್ದ ಜೀವಿಯೊಂದರ ಸಂಖ್ಯೆಯು ಸಂರಕ್ಷಣಾ ಕ್ರಮಗಳಿಂದಾಗಿ ಮಿತಿಮೀರಿದರೆ ಅದಕ್ಕೆ ಏನನ್ನುತ್ತೀರಿ? ಹೌದು, ಸರ್ಕಾರದ ಯೋಜನೆಯಂತೆ ನಡೆದ ಸಂರಕ್ಷಣಾ ಕೆಲಸದಿಂದ ಒಡಿಶಾ ರಾಜ್ಯದ ರಾಷ್ಟ್ರೀಯ ಉದ್ಯಾನದಲ್ಲಿ ಮೊಸಳೆಗಳ ಸಂಖ್ಯೆ ನಿರೀಕ್ಷೆಗೂ ಮೀರಿ ಹೆಚ್ಚಾಗಿ, ಅವು ಜನವಸತಿಯತ್ತ ನುಗ್ಗಿ ಹಲವರ ಪ್ರಾಣ ತೆಗೆದಿವೆ. ಹಿಂದಿನ ಆರು ತಿಂಗಳಲ್ಲಿ ಆರು ಜನರನ್ನು ಕೊಂದಿರುವ ಮೊಸಳೆಗಳಿಗೆ ಆವಾಸದ ವ್ಯಾಪ್ತಿ ಸಾಲುತ್ತಿಲ್ಲ ಎಂಬ ಮಾತಿದೆ. ಮೊಸಳೆಗಳ ಸಂಖ್ಯೆ ವಿಪರೀತ ಹೆಚ್ಚಿರುವುದು ಅರಣ್ಯ ಇಲಾಖೆಯ ನಿದ್ದೆಗೆಡಿಸಿದೆ.

ಒಡಿಶಾದ ಪ್ರಮುಖ ಕಾಂಡ್ಲಾ ಕಾಡಿನ ವ್ಯಾಪ್ತಿಯಲ್ಲಿರುವ ಭೈತರ್ಕನಿಕಾ ರಾಷ್ಟ್ರೀಯ ಉದ್ಯಾನದಲ್ಲಿ 1,800ರಷ್ಟಾಗಿರುವ ಉಪ್ಪುನೀರಿನ ಮೊಸಳೆಗಳು, ಉದ್ಯಾನದಿಂದ ಹೊರಗೆ ನೂರು ಕಿ.ಮೀ. ದೂರದವರೆಗೂ ಸಂಚರಿಸಿ ಜನರ ಮೇಲೆ ಆಕ್ರಮಣ ಮಾಡುತ್ತಿವೆ.

ಮೊಸಳೆಗಳು ಜನರನ್ನು ಕೊಲ್ಲುತ್ತಿರುವುದರಿಂದ ವಸತಿ ಪ್ರದೇಶದ ನಿವಾಸಿಗಳು ಸಹಜವಾಗಿಯೇ ಆತಂಕಗೊಂಡಿದ್ದಾರೆ. ಸಂರಕ್ಷಣಾ ಕೆಲಸ ಯಶಸ್ವಿಯಾದದ್ದರ ಬಗ್ಗೆ ಖುಷಿಪಡಬೇಕೋ ಅಥವಾ ಸಂಖ್ಯಾ ಹೆಚ್ಚಳ ಸರಿಯಲ್ಲ ಎನ್ನಬೇಕೋ ಎಂಬ ಗೊಂದಲದಲ್ಲಿರುವ ಅರಣ್ಯ ಇಲಾಖೆಯು ತಜ್ಞರ ಅಭಿಪ್ರಾಯಕ್ಕಾಗಿ ಎದುರು ನೋಡುತ್ತಿದೆ.

ಇದೆಲ್ಲ ಶುರುವಾದದ್ದು 1997ರಲ್ಲಿ. ಆಗ ಮೊಸಳೆಗಳ ಸಂಖ್ಯೆ ಸಾವಿರದಷ್ಟಿತ್ತು. ಈಗ ಅವುಗಳ ಸಂಖ್ಯೆ ಹೆಚ್ಚಿರುವುದರಿಂದ, 23 ಅಡಿ ಉದ್ದ ಬೆಳೆಯುವ ಮೊಸಳೆಗಳಿಗೆ ಅಲ್ಲಿರುವ ಸ್ಥಳಾವಕಾಶ ಕಡಿಮೆಯಾಗಿದೆ. ಅಲ್ಲದೆ, ಗಂಡು ಮೊಸಳೆಗಳ ಸಂಖ್ಯೆ ಮಿತಿಮೀರಿರುವುದು ಮತ್ತು ಸಂಗಾತಿಯ ಸಹವಾಸಕ್ಕೆ ನಿರಂತರ ಪೈಪೋಟಿ ನಡೆಯುತ್ತಿರುವುದು ಅವುಗಳ ಆಕ್ರಮಣಾ ಪ್ರವೃತ್ತಿಯನ್ನು ಹೆಚ್ಚಿಸಿದೆ ಎಂಬುದು ಮೊಸಳೆ ತಜ್ಞರ ಅಭಿಪ್ರಾಯವಾಗಿದೆ. ಇದಕ್ಕೂ ಮುಂಚೆ 1975ರಲ್ಲಿ, ಮಹಾನದಿಗೆ ಹೊಂದಿಕೊಂಡಿರುವ ಸತ್ಕೋಸಿಯ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಘರಿಯಾಲ್ ಮೊಸಳೆ, ಸಿಮಿಲಿಪಾಲ್ ಪ್ರದೇಶದಲ್ಲಿ ಮಗ್ಗರ್ ಮೊಸಳೆ ಮತ್ತು ಭೈತರ್ಕನಿಕಾದಲ್ಲಿ ಉಪ್ಪುನೀರಿನ ಮೊಸಳೆಗಳ ಸಂಖ್ಯೆಯನ್ನು ಹೆಚ್ಚಿಸಲು ಬೇಕಾದ ಎಲ್ಲ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು.

ಯೋಜನೆಗೆ ಯಾವುದೇ ಅಡೆತಡೆ ಇಲ್ಲದಿದ್ದುದರಿಂದ ಭೈತರ್ಕನಿಕಾದಲ್ಲಿನ ಮೊಸಳೆಗಳ ಸಂಖ್ಯೆ 1992ರ ಹೊತ್ತಿಗೆ ಆರೋಗ್ಯಕರ ಸಂಖ್ಯೆ ತಲುಪಿತು. ಹೀಗಾಗಿ, ಯೋಜನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಆದರೆ ಅರಣ್ಯ ಅಧಿಕಾರಿಗಳು ರಾಷ್ಟ್ರೀಯ ಉದ್ಯಾನದಲ್ಲಿ ಜಾಗವಿಲ್ಲ ಎಂಬ ಕಾರಣಕ್ಕೆ, ಸಂಶೋಧನೆಗೆಂದು ತಂದ ಮೊಸಳೆ ಮೊಟ್ಟೆಗಳು ಮರಿಯಾದ ನಂತರ ಅವುಗಳನ್ನು ಪಕ್ಕದ ನದಿಗೆ ಬಿಡುವುದನ್ನು ರೂಢಿಸಿಕೊಂಡಿದ್ದಾರೆ. ಇದು ಅನಾಹುತಗಳಿಗೆ ಕಾರಣವಾಗುತ್ತಿದೆ ಎನ್ನುವ ಹಿರಿಯ ವನ್ಯಜೀವಿ ವಿಜ್ಞಾನಿ ಸುಧಾಕರ್, ಭೈತರ್ಕನಿಕಾದಲ್ಲಿರುವ ಮೊಸಳೆಗಳ ಪೈಕಿ ಅರ್ಧದಷ್ಟು ವಯಸ್ಕ ಮೊಸಳೆಗಳಿವೆ, ನಲವತ್ತು ಹದಿವಯಸ್ಕ ಮೊಸಳೆಗಳಿವೆ, ಇವೆಲ್ಲ ಮನುಷ್ಯರ ಮೇಲೆ ದಾಳಿ ಮಾಡುವ ಶಕ್ತಿ ಪಡೆದಿವೆಯಾದ್ದರಿಂದ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ.



ಉತ್ತರ ಭಾರತದ ನದಿ ಪಾತ್ರಕ್ಕಷ್ಟೇ ಸೀಮಿತವಾಗಿರುವ ಘರಿಯಾಲ್ ಮೊಸಳೆಗಳು ಅಳಿವಿನಂಚಿಗೆ ಸರಿದಿವೆ. ಘರಿಯಾಲ್ ಮೊಸಳೆಗಳ ಮೊಟ್ಟೆಗಳು ಇತರ ವನ್ಯಪ್ರಾಣಿ ಮತ್ತು ಮನುಷ್ಯನ ನಿರಂತರ ದಾಳಿಯಿಂದ ನಲುಗುತ್ತಿವೆ. ನದಿ ಮಾಲಿನ್ಯ, ಅಣೆಕಟ್ಟೆ ನಿರ್ಮಾಣ, ಅನಿಯಂತ್ರಿತ ಮೀನುಗಾರಿಕೆ, ಅಕ್ರಮ ಮರಳು ಗಣಿಗಾರಿಕೆಯಿಂದ ತೀವ್ರ ಅಪಾಯದಲ್ಲಿವೆ. ಈ ಮೊಸಳೆಗಳ ಸಂಖ್ಯೆ ಹೆಚ್ಚಾದಷ್ಟೂ ನದಿ ಮಾಲಿನ್ಯ ಕಡಿಮೆ ಇರುತ್ತದಾದ್ದರಿಂದ ಘರಿಯಾಲ್ ಮೊಸಳೆಗಳನ್ನು ರಕ್ಷಿಸಲೇಬೇಕಾದ ಅನಿವಾರ್ಯ ನಮಗಿದೆ.

ಇದೇ ಆಗಸ್ಟ್ ತಿಂಗಳಿನಲ್ಲಿ ಅರಣ್ಯ ಇಲಾಖೆಯ ಕೆಲಸಗಾರರು 38 ಮರಿಗಳನ್ನು ನದಿಗೆ ಬಿಟ್ಟಿದ್ದರು. ಹಿಂದಿನ ಹತ್ತು ವರ್ಷಗಳಲ್ಲಿ 50 ಜನ ಮೊಸಳೆ ದಾಳಿಯಿಂದ ಸಾವನ್ನಪ್ಪಿದ್ದಾರೆ. ಡೆಹ್ರಾಡೂನ್‌ನ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ವಿಜ್ಞಾನಿ ಬಿ.ಸಿ. ಚೌಧರಿ ಅವರ ಪ್ರಕಾರ, ಆವಾಸದ ವ್ಯಾಪ್ತಿಯನ್ನು ಮೀರಿ ಮೊಸಳೆಗಳ ಸಂಖ್ಯೆ ಬೆಳೆದಿರುವುದು ಅಪಾಯಕಾರಿ ಸನ್ನಿವೇಶವೇ ಸರಿ. ಇದನ್ನು ಸರಿಪಡಿಸಲು ಅರಣ್ಯ ಇಲಾಖೆಯು ಹಿರಿಯ ತಜ್ಞರ ತಂಡ ರಚಿಸುವ ತಯಾರಿಯಲ್ಲಿದೆ. ಇವರು ತಂಡ ರಚಿಸುವವರೆಗೆ ಮೊಸಳೆಗಳು ಸುಮ್ಮನಿರುತ್ತವೆಯೇ?

ವಾಚಕರ ವಾಣಿ

ಆಧುನಿಕ ಭಾರತದ ವಿಕರ್ಣ?

ಮಹಾಭಾರತದಲ್ಲಿ ಬರುವ ದ್ರೌಪದಿ ವಸ್ತ್ರಾಪಹರಣದ ಘಟ್ಟದಲ್ಲಿ, ಇಡೀ ಸಭೆಯಲ್ಲಿದ್ದವರು ಮೂಕಪ್ರೇಕ್ಷಕರಂತೆ ಇದ್ದರೂ ವಿಕರ್ಣ ಮಾತ್ರ ದುಶ್ಶಾಸನನನ್ನು ತಡೆದನಂತೆ. ಅದೇ ರೀತಿ, ಆಧುನಿಕ ಭಾರತದಲ್ಲಿ, ಬೆಳಗಾವಿ ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ ಮಹಿಳೆಯೊಬ್ಬರನ್ನು ಗುಂಪೊಂದು ವಿವಸ್ತ್ರಗೊಳಿಸುತ್ತಿದ್ದುದನ್ನು ತಡೆಯಲು ಪ್ರಯತ್ನಪಟ್ಟ ಜಹಾಂಗೀರ್ ಎಂಬುವವರೂ ಆಧುನಿಕ ಭಾರತದ ವಿಕರ್ಣನೇ ಇರಬೇಕು.

ರಂಗಸ್ವಾಮಿ ಮಾರ್ಲಬಂಡಿ, ದೊಡ್ಡ ಹರಿವಾಣ, ಕರ್ನೂಲು, ಆಂಧ್ರಪ್ರದೇಶ

ಅಂಚೆ ಕಚೇರಿ ಗ್ರಾಹಕಸ್ನೇಹಿ ಆಗಲಿ

ಕೆಲವು ಅಂಚೆ ಕಚೇರಿಗಳಲ್ಲಿ ಪೋಸ್ಟ್ ಕಾರ್ಡ್, ಇನ್‌ಲ್ಯಾಂಡ್ ಲೆಟರ್, ಸ್ಟ್ಯಾಂಪ್‌ನಂತಹ ಅಗತ್ಯ ವಸ್ತುಗಳ ಕೊರತೆ ಎದ್ದು ಕಾಣುತ್ತದೆ. ಸೋವಿಯಾಗಿ ಅಂಚೆ ಸೇವೆ ದೊರಕಿಸಿಕೊಡುವ ಮೂಲಕ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡಲು ಕೇಂದ್ರವು ಅಂಚೆ ಕಚೇರಿಗಳನ್ನು ಸ್ಥಾಪಿಸಿತು. ಈ ಹಿಂದೆ ಕೈಗೆಟಕುವ ಬೆಲೆಯಲ್ಲೇ ಅಂಚೆ ಸೇವೆಗಳು ದೊರಕುತ್ತಿದ್ದವು. ಕಾಲಕ್ರಮೇಣ ಸೇವಾದಕ್ಷತೆ ಕುಸಿಯಿತು. ಅಲ್ಲದೆ ಬರಬರುತ್ತಾ ಅಂಚೆ ಸೇವೆಯು ರಾಯರ ಕುದುರೆ ಕತ್ತೆಯಾಯಿತು ಎಂಬಂತೆ ಆಗಿದ್ದರಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳ ಪಾತ್ರವೂ ಇದೆ. ಇದರಿಂದಾಗಿಯೇ ಕೊರಿಯರ್ ಸೇವೆ ಹುಟ್ಟಿಕೊಂಡಿತು. ಅಂಚೆ ಸೇವೆ ಹಳ್ಳ ಹಿಡಿದು ತನ್ನ ಮೊದಲಿನ ಛಾಪು ಕಳೆದುಕೊಳ್ಳಲಾರಂಭಿಸಿತು.

ಕೆಲವೊಮ್ಮೆ ಅತ್ಯವಶ್ಯವಾದ ಅಂತರ್ದೇಶೀಯ ಪತ್ರಕ್ಕೆ ಕೊಕ್, ಎಲ್ಲರಿಗೂ ಎಲ್ಲ ಕಾಲಕ್ಕೂ ಬೇಕಾಗುವ ₹ 5ರ ಕವರ್ ಮಾಯ... ಈ ಕವರ್ ಅಂತೂ ಒಂದೆರಡು ತಿಂಗಳಿನಿಂದ ಬಹುತೇಕ ಶಾಖೆಗಳಲ್ಲಿ ಸಿಗುತ್ತಿಲ್ಲ. ಇದರಿಂದಾಗಿ, ಅಂಗಡಿಗಳಲ್ಲಿ ₹ 1 ಇದ್ದ ಕವರ್ ಬೆಲೆ ₹ 5ಕ್ಕೆ ಏರಿದೆ. ಅಂಚೆ ಇಲಾಖೆ ಇನ್ನಾದರೂ ಎಚ್ಚೆತ್ತು ಗ್ರಾಹಕರ ಬಗ್ಗೆ ಕಾಳಜಿ ವಹಿಸಲಿ.

ಕೆ.ಸದಾನಂದ ಶಾಸ್ತ್ರಿ, ಬೆಂಗಳೂರು

ಮೂಕಪ್ರೇಕ್ಷಕರೆಲ್ಲರೂ ಅಂತಃಕರಣ ಇಲ್ಲದವರಲ್ಲ!

ದೌರ್ಜನ್ಯ ನಡೆಯುವಾಗ ಮೂಕಪ್ರೇಕ್ಷಕರಂತೆ ನಿಂತು ನೋಡುವ ಸಾರ್ವಜನಿಕರಿಗೆ ಪುಂಡುಗಂದಾಯ ವಿಧಿಸುವ ಪ್ರಸ್ತಾಪದ ಸಾಧ್ಯಾಸಾಧ್ಯತೆಯನ್ನು ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು ಹೊಸ ವಂಟಮೂರಿ ಪ್ರಕರಣವನ್ನು ಆಧಾರವಾಗಿಟ್ಟು ಮನೋಜ್ಞವಾಗಿ ವಿಶ್ಲೇಷಿಸಿದ್ದಾರೆ (ಪ್ರ.ವಾ., ಡಿ. 27). ಆದರೆ ಇಂದು ದೌರ್ಜನ್ಯ ಎಸಗುತ್ತಿರುವವರು ಜಾತಿಬಲ, ಜನಬಲ, ಅಧಿಕಾರಬಲ, ಹಣಬಲ ಇರುವವರು. ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳುವ ಚಾಣಾಕ್ಷತನ ಹೊಂದಿರುವವರು. ಹೊಸ ವಂಟಮೂರಿ ಪ್ರಕರಣದಲ್ಲಿ, ಮೂಕಪ್ರೇಕ್ಷಕರಾದ ಸಾರ್ವಜನಿಕರ ವರ್ತನೆಗೆ ಅವರಲ್ಲಿ ಅಂತಃಕರಣ ಅಥವಾ ಸಾತ್ವಿಕ ಆಕ್ರೋಶದ ಗುಣ ಇಲ್ಲದಿರುವುದು ಕಾರಣವೆಂದು ದೂರುವ ಬದಲು, ಅವರ ಅಸಹಾಯಕತೆಗೆ, ಪ್ರಬಲರ ಬಗೆಗಿನ ಭಯಕ್ಕೆ, ಕಾನೂನಿನ ಕುರಿತ ಅಪನಂಬಿಕೆಗೆ ಕಾರಣ ತಿಳಿದು, ಅವುಗಳನ್ನು ಅವರ ಮನಸ್ಸಿನಿಂದ ಹೋಗಲಾಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಲ್ಲವೇ?

ಇಂತಹ ಸ್ಥಿತಿಯಲ್ಲಿ, ಸಾಮಾನ್ಯ ಪ್ರಜೆಗಳು ಪ್ರಬಲರ ವಿರುದ್ಧ ಸಾಕ್ಷ್ಯ ಹೇಳುವ ಧೈರ್ಯ ತೋರಬಲ್ಲರೇ? ಮೂಕಪ್ರೇಕ್ಷಕರನ್ನು ಶಿಕ್ಷಿಸಲು ಅನುವಾಗಿಸುವ ಹೊಸ ಕಾನೂನು ಜಾರಿಗೊಳಿಸುವುದನ್ನು ಸ್ವಾಗತಿಸೋಣ. ಆದರೆ ಈಗಿರುವ ಕಾನೂನುಗಳನ್ನೇ ಪಾಲಿಸದಿರುವ, ರಕ್ಷಿಸುವವರೇ ಭಕ್ಷಕರಾಗಿ ಬದಲಾಗುತ್ತಿರುವ, ಕಾನೂನು ಉಲ್ಲಂಘನೆಯೇ ತಮ್ಮ ಶಕ್ತಿ ಎಂದು ತೋರ್ಪಡಿಸಿಕೊಳ್ಳುವ ವರ್ಗವೇ ಸೃಷ್ಟಿಯಾಗುತ್ತಿರುವಾಗ, ವ್ಯವಸ್ಥೆ ಎಂಬ ಬೆಕ್ಕಿಗೆ ಗಂಟೆ ಕಟ್ಟುವವರಾರು? ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದಡೆ...?

ಮಂಜುನಾಥ್ ಕೇಶವ್, ಕೃಷ್ಣರಾಜಪೇಟೆ, ಮಂಡ್ಯ

ಹಿಂದಿ ಭಾಷೆ: ಅನಿವಾರ್ಯ ಯಾಕೆ?

ಹಿಂದಿ ಭಾಷೆಯನ್ನು ಕಲಿಯುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಗುರು ಜಗಳೂರು ವಿವರಿಸಿದ್ದಾರೆ (ವಾ.ವಾ., ಡಿ. 25). ನಮ್ಮಲ್ಲಿ ದುಡಿಯಲು ಬರುವ ಉತ್ತರ ಭಾರತೀಯ ಕೆಲಸಗಾರರ ಜೊತೆ ಸಂವಹಿಸುವ ಸಲುವಾಗಿ ನಾವು ಹಿಂದಿ ಕಲಿಯಬೇಕೆ? ಇಲ್ಲಿಯವರನ್ನೇ ಕೆಲಸಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲವೇ? ಈಗಾಗಲೇ ಹಿಂದಿ ಭಾಷಿಕ ರಾಜ್ಯಗಳ ಸಂಖ್ಯೆ ಹೆಚ್ಚಿಗೆ ಇದೆ. ಮುಂದೆ ನಮ್ಮನ್ನೂ ಅಂತಹ ರಾಜ್ಯಗಳ ಪಟ್ಟಿಗೆ ಸೇರಿಸಿಕೊಳ್ಳುವ ಅಥವಾ ಹಿಂದಿ ಭಾಷೆಯನ್ನು ಉದ್ಯೋಗದ ಭಾಷೆಯನ್ನಾಗಿ ಮಾಡುವ ಹುನ್ನಾರವೇ?

ಹಿಂದಿಯಲ್ಲಿ ಮಾತನಾಡಲೇಬೇಕಾದ ಅನಿವಾರ್ಯ ಏನು? ಇಂಗ್ಲಿಷ್ ಭಾಷೆಯಲ್ಲಿ ಅಪಾರ ಜ್ಞಾನ ಭಂಡಾರವಿದೆ. ಈ ಭಾಷೆಯ ಮೇಲಿದ್ದ ಹಿಡಿತವೇ ಅಂಬೇಡ್ಕರ್ ಅವರಿಗೆ ಶಕ್ತಿ ಕೊಟ್ಟಿದ್ದು. ಅನ್ನದ ಮತ್ತು ಮಣ್ಣಿನ ಭಾಷೆಯಾದ ಕನ್ನಡವನ್ನು ವೈಜ್ಞಾನಿಕ ಹಾಗೂ ಅನ್ವೇಷಕ ಭಾಷೆಯಾಗಿ ಅಭಿವೃದ್ಧಿಪಡಿಸಲು ಸಾಧ್ಯವಿಲ್ಲವೇ?

ಆಶಯ ಮೈಸೂರು, ಮೈಸೂರು

ಸರ್ಕಾರಿ ಶಾಲೆ: ನಿಗಾ ಇಡಬೇಕಾದವರ ನಿಷ್ಕ್ರಿಯತೆ

ದುರ್ಬಲ ಸಮುದಾಯಗಳ ಮಕ್ಕಳ ಸಬಲೀಕರಣದ ಕೀಲಿಕೈ ಸರ್ಕಾರಿ ಶಾಲೆಗಳ ಶಿಕ್ಷಕರ ಕೈಯಲ್ಲಿದೆ ಎಂದು ಸಂಪಾದಕೀಯ (ಪ್ರ.ವಾ., ಡಿ. 28) ಅಭಿಪ್ರಾಯಪಟ್ಟಿರುವುದು ಅಕ್ಷರಶಃ ಸತ್ಯ. ಮಂಡ್ಯ ತಾಲ್ಲೂಕಿನ ಪುರದಕೊಪ್ಪಲು ಗ್ರಾಮದಲ್ಲಿ ಐದು ವರ್ಷಗಳಿಂದ ಮುಚ್ಚಿದ್ದ ಸರ್ಕಾರಿ ಶಾಲೆಯಲ್ಲಿಗ 118 ವಿದ್ಯಾರ್ಥಿಗಳು ಓದುತ್ತಿರುವುದರ ಕುರಿತ ವರದಿಯನ್ನು (ವಾ.ವಾ., ಡಿ. 21) ಗಮನಿಸಿದರೆ ಇದು ಅರಿವಿಗೆ ಬರುತ್ತದೆ. ಮೂಲ ಸೌಕರ್ಯ ಮತ್ತು ಶಿಕ್ಷಕರ ಕೊರತೆಯಷ್ಟೇ ಸರ್ಕಾರಿ ಶಾಲೆಗಳ ಇಂದಿನ ದುಃಸ್ಥಿತಿಗೆ ಕಾರಣಗಳಲ್ಲ. ಬದಲಿಗೆ, ಕಲಿಕಾ ಪ್ರಕ್ರಿಯೆ ಪರಿಣಾಮಕಾರಿ ಆಗದಿರುವುದು ಮತ್ತು ಇರುವ ಶಿಕ್ಷಕರು ದಕ್ಷತೆ, ಬದ್ಧತೆಯಿಂದ ಕಾರ್ಯನಿರ್ವಹಿಸದಿರುವುದು, ಶಾಲೆಗಳ ಮೇಲೆ ನಿಗಾ ಇಡಬೇಕಾದವರ ನಿಷ್ಕ್ರಿಯತೆ ಕೂಡ ಕಾರಣಗಳಾಗಿವೆ ಎಂಬ ಸತ್ಯವನ್ನು ನಾವು ಒಪ್ಪಿಕೊಳ್ಳಲೇಬೇಕು. ಶಿಕ್ಷಕರಾಗಲೀ ಈ ಶಾಲೆಗಳ ಮೇಲೆ ನಿಗಾ ವಹಿಸಬೇಕಾದವರಾಗಲೀ ತಮ್ಮ ಹೊಣೆಗಾರಿಕೆಯಿಂದ ಪಾರಾಗಲು ನೆಪಗಳನ್ನು ಹೇಳುವುದು ಒಂದು ರೀತಿಯಲ್ಲಿ 'ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಕುದುರೆಯನೇರ ಬಯಸುವವರಂತೆ' ಆಗಿಬಿಡುತ್ತದೆ. ಈ ಅಪವಾದದಿಂದ ಪಾರಾಗಬೇಕಾದರೆ, ಶಾಲೆಗಳ ಮೇಲ್ವಿಚಾರಣೆ ಹೊಣೆ ಹೊತ್ತಿರುವವರು ಹೊಸ ಯೋಜನೆಗಳನ್ನು ರೂಪಿಸುವುದಕ್ಕಷ್ಟೇ ಸೀಮಿತವಾಗದೆ, ಅವು ಕಟ್ಟುನಿಟ್ಟಾಗಿ ಅನುಷ್ಠಾನಗೊಳ್ಳುತ್ತಿವೆಯೇ ಎಂಬುದನ್ನು ಸಮುದಾಯಗಳ ಸಹಭಾಗಿತ್ವದೊಂದಿಗೆ ಪರಿಶೀಲಿಸಬೇಕು.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೋರ್ಟ್ ಅಂಗಳವ ಹಿಂದಿರುಗಿ ನೋಡಿದಾಗ

ಸುಪ್ರೀಂ ಕೋರ್ಟ್ 2023ರಲ್ಲಿ ನೀಡಿರುವ ಕೆಲವು ತೀರ್ಪುಗಳು ಅವುಗಳಲ್ಲಿನ ಒಳನೋಟ, ಕಾನೂನು ವ್ಯಾಖ್ಯಾನದ ಕಾರಣದಿಂದಾಗಿ ಹಾಗೂ ಜನಜೀವನದ ಮೇಲೆ ಅವು ಬೀರಲಿರುವ ಪರಿಣಾಮದ ಕಾರಣದಿಂದಾಗಿ ಸ್ಮರಣೀಯ. ಅಂತಹ ಕೆಲವು ತೀರ್ಪುಗಳ ಮೇಲೊಂದು ಕಿರುನೋಟ ಇಲ್ಲಿದೆ

• ವಿಜಯ್ ಜೋಷಿ

ನೋಟು ರದ್ದತಿ ಮಾನ್ಯ

ಗರಿಷ್ಠ ಮುಖಬೆಲೆಯ ನೋಟುಗಳ ಮಾನ್ಯತೆಯನ್ನು 2016ರ ನವೆಂಬರ್ 8ರಂದು ರದ್ದುಪಡಿಸಿದ ಕೇಂದ್ರ ಸರ್ಕಾರದ ತೀರ್ಮಾನವು ಕಾನೂನಿಗೆ ಅನುಗುಣವಾಗಿಯೇ ಇತ್ತು ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಜನವರಿಯಲ್ಲಿ ನೀಡಿದ ಬಹುಮತದ ತೀರ್ಪಿನಲ್ಲಿ ಹೇಳಿತು.

ನೋಟು ರದ್ದತಿ ಕ್ರಮ ಪ್ರಶ್ನಿಸಿ ವಕೀಲ ವಿವೇಕ್ ನಾರಾಯಣ ಶರ್ಮ ಹಾಗೂ ಇತರರು ಸಲ್ಲಿಸಿದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್, ಬಿ.ಆರ್.ಗವಾಯಿ, ಎ.ಎಸ್. ಬೋಪಣ್ಣ, ವಿ.ರಾಮಸುಬ್ರಮಣಿಯನ್ ಹಾಗೂ ಬಿ.ವಿ. ನಾಗರತ್ನ ಅವರಿದ್ದ ಸಂವಿಧಾನ ಪೀಠ ಈ ತೀರ್ಪು ನೀಡಿತು.

ಸಂವಿಧಾನ ಪೀಠದಲ್ಲಿ ಇದ್ದ ನ್ಯಾಯಮೂರ್ತಿ ನಾಗರತ್ನ ಅವರು ಭಿನ್ನಮತದ ತೀರ್ಪು ಬರೆದರು. ನೋಟು ರದ್ದತಿಯು ಕಾನೂನುಬಾಹಿರ ಎಂದು ಹೇಳಿದರು. ನೋಟು ರದ್ದತಿಯ ಉದ್ದೇಶ ಸರಿ ಇದ್ದಿರಬಹುದು. ಆದರೆ ಅದನ್ನು ಜಾರಿಗೆ ತಂದ ಬಗೆಯು, ಅನುಸರಿಸಿದ ಪ್ರಕ್ರಿಯೆಗಳು ಕಾನೂನುಬದ್ಧವಾಗಿ ಇರಲಿಲ್ಲ ಎಂದು ಅವರು ಹೇಳಿದರು. ಕೇಂದ್ರ ಸರ್ಕಾರಕ್ಕೆ ಯಾವುದೇ ಕರೆನ್ಸಿಯನ್ನು ಅಮಾನ್ಯ ಮಾಡುವ ಅಧಿಕಾರ ಇದೆಯಾದರೂ ಅದನ್ನು ಶಾಸನಬದ್ಧವಾಗಿ ಮಾಡಬೇಕೇ ಹೊರತು ಗೆಜೆಟ್ ಅಧಿಸೂಚನೆ ಮೂಲಕ ಅಲ್ಲ ಎಂದು ನಾಗರತ್ನ ಅವರು ತೀರ್ಪಿನಲ್ಲಿ ಬರೆದಿದ್ದಾರೆ.

ವಿಶೇಷ ಸ್ಥಾನಮಾನ ರದ್ದತಿ ಎತ್ತಿಹಿಡಿದ ಸುಪ್ರೀಂ ಕೋರ್ಟ್

ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆಯುವ ಕೇಂದ್ರ ಸರ್ಕಾರದ ತೀರ್ಮಾನವನ್ನು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಡಿಸೆಂಬರ್ 11ರಂದು ಸರ್ವಾನುಮತದಿಂದ ಎತ್ತಿಹಿಡಿಯಿತು. ಇದು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕೈಗೊಂಡ ತೀರ್ಮಾನಕ್ಕೆ ಸಿಕ್ಕ ಜಯ ಎಂದು ವಿಶ್ಲೇಷಿಸಲಾಯಿತು. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು 'ಆದಷ್ಟು ಬೇಗ ಮರಳಿಸಬೇಕು' ಎಂದು ಕೋರ್ಟ್ ತಾಕೀತು ಮಾಡಿತು.

'370ನೆಯ ವಿಧಿ ಹಾಗೂ 1ನೆಯ ವಿಧಿಯನ್ನು ಒಟ್ಟಾಗಿ ಓದಿದಾಗ, ಜಮ್ಮು ಮತ್ತು ಕಾಶ್ಮೀರವನ್ನು ದೇಶದ ಭಾಗವನ್ನಾಗಿ ವಿಲೀನಗೊಳಿಸಿದ್ದು ಪರಿಪೂರ್ಣವಾಗಿತ್ತು ಎಂಬುದರಲ್ಲಿ ಯಾವ ಅನುಮಾನವೂ ಉಳಿಯುವುದಿಲ್ಲ ಎಂದು ಸಿಜೆಐ ಡಿ.ವೈ. ಚಂದ್ರಚೂಡ್ ಹೇಳಿದ್ದರು.



ಜಮ್ಮು–ಕಾಶ್ಮೀರದ ವಿಶೇಷ ಸ್ಥಾನ ತೆಗೆದುಹಾಕಿದ ಕ್ರಮವನ್ನು ಎತ್ತಿಹಿಡಿದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರ ಬಜರಂಗ ದಳದ ಕಾರ್ಯಕರ್ತರು ಜಮ್ಮುವಿನಲ್ಲಿ ಸಂಭ್ರಮಾಚರಿಸಿದ ಸಂದರ್ಭ –ಪಿಟಿಐ ಚಿತ್ರ

ಒಳಚರಂಡಿ ಸ್ವಚ್ಛಗೊಳಿಸುವಾಗ ಮೃತಪಟ್ಟರೆ ₹30 ಲಕ್ಷ ಪರಿಹಾರ



ಒಳಚರಂಡಿ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಕಾರ್ಮಿಕರು ಮೃತಪಟ್ಟರೆ ಅವರ ಕುಟುಂಬಕ್ಕೆ ಸರ್ಕಾರದ ಪ್ರಾಧಿಕಾರಗಳು ₹30 ಲಕ್ಷ ಪರಿಹಾರ ಒದಗಿಸಬೇಕು, ಒಳಚರಂಡಿ ಸ್ವಚ್ಛಗೊಳಿಸುವಾಗ ಕಾರ್ಮಿಕರು ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದಲ್ಲಿ ಅವರಿಗೆ ಕನಿಷ್ಠ ₹20 ಲಕ್ಷ ಪರಿಹಾರ ನೀಡಬೇಕು ಎಂದು ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಮತ್ತು ಅರವಿಂದ ಕುಮಾರ್ ಅವರಿದ್ದ ವಿಭಾಗೀಯ ಪೀಠವು ಅಕ್ಟೋಬರ್ ತಿಂಗಳಲ್ಲಿ ಆದೇಶಿಸಿತು.

'ಒಳಚರಂಡಿ, ಶೌಚಗುಂಡಿಯನ್ನು ಬರಿಗೈಯಿಂದ ಸ್ವಚ್ಛಗೊಳಿಸುವ ಪದ್ಧತಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಂಪೂರ್ಣವಾಗಿ ಇಲ್ಲವಾಗಿಸಬೇಕು' ಎಂದು ತಾಕೀತು ಮಾಡಿತು ಸಹ. ಕಾರ್ಮಿಕರಿಗೆ ಬೇರೆ ಯಾವುದೇ ರೀತಿಯ ಅಂಗವೈಕಲ್ಯ ಉಂಟಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ₹10 ಲಕ್ಷದವರೆಗೆ ಪರಿಹಾರ ಒದಗಿಸಬೇಕು ಎಂದು ನ್ಯಾಯಮೂರ್ತಿ ಭಟ್ ಅವರು ಆದೇಶದಲ್ಲಿ ಹೇಳಿದರು.

ನ್ಯಾಯಮೂರ್ತಿಗಳ ನೇಮಕ: ಮುಂದುವರಿದ ಸಂಘರ್ಷ



ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ಕೊಲಿಜಿಯಂ ವ್ಯವಸ್ಥೆಯ ಮೂಲಕ ನೇಮಕ ಮಾಡುವ ವ್ಯವಸ್ಥೆಯ ವಿಚಾರವಾಗಿ ಕೇಂದ್ರ ಸರ್ಕಾರ ಹಾಗೂ ನ್ಯಾಯಾಂಗದ ನಡುವಿನ ಸಂಘರ್ಷ 2023ರಲ್ಲಿಯೂ ಮುಂದುವರಿಯಿತು. ಕೊಲಿಜಿಯಂ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿ ಕೂಡ ಇರಬೇಕು ಎಂದು ಕೇಂದ್ರ ಕಾನೂನು ಸಚಿವ ಆಗಿದ್ದ ಕಿರಣ್ ರಿಜಿಜು ಒತ್ತಾಯಿಸಿದ್ದರು. ಆದರೆ ನ್ಯಾಯಾಂಗವು, ಕೊಲಿಜಿಯಂ ವ್ಯವಸ್ಥೆಯನ್ನು ಸಮರ್ಥಿಸಿಕೊಂಡಿತು. ಸಿಜೆಐ ಡಿ.ವೈ. ಚಂದ್ರಚೂಡ್ ಅವರು ಕೊಲಿಜಿಯಂ ವ್ಯವಸ್ಥೆಯನ್ನು ಅತ್ಯುತ್ತಮ ಎಂದು ಬಣ್ಣಿಸಿದರು.

ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ವರ್ಷದ ಆರಂಭದಲ್ಲಿ, ಸಂವಿಧಾನದ ಮೂಲ ಸ್ವರೂಪದ ತಾತ್ವಿಕತೆಯ ಬಗ್ಗೆಯೂ ಪ್ರಶ್ನೆಗಳನ್ನು ಎತ್ತಿದ್ದರು. ಸಂಸತ್ತಿನ ಪಾರಮ್ಯವನ್ನು ತಗ್ಗಿಸುವ ಕೆಲಸವನ್ನು ನ್ಯಾಯಾಂಗ ಮಾಡಬಾರದು ಎಂದಿದ್ದರು.

ಸಲಿಂಗ ವಿವಾಹಕ್ಕೆ ಮಾನ್ಯತೆ ಇಲ್ಲ

ಸಲಿಂಗ ಜೋಡಿಗಳ ಸಹಬಾಳ್ವೆಯ ಹಕ್ಕನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿಯಿತಾದರೂ, ಸಲಿಂಗ ಜೋಡಿಗಳ ಮದುವೆಗೆ ವಿಶೇಷ ವಿವಾಹ ಕಾಯ್ದೆಯ ಅಡಿಯಲ್ಲಿ ಕಾನೂನಿನ ಮಾನ್ಯತೆ ನೀಡಲು ನಿರಾಕರಿಸಿತು. ಹೀಗಿದ್ದರೂ, ಅವರ ಮದುವೆಗೆ ಕಾನೂನಿನ ಮಾನ್ಯತೆ ನೀಡುವ ಬಗ್ಗೆ ಸಂಸತ್ತು ಕಾನೂನು ರೂಪಿಸಬಹುದು ಎಂದು ಅಕ್ಟೋಬರ್‌ನಲ್ಲಿ ನೀಡಿದ ತೀರ್ಪಿನಲ್ಲಿ ಸ್ಪಷ್ಟಪಡಿಸಿತು. ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಬೇಕು ಎಂದು ಕೋರಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು.

ಸಾಹಿತ್ಯಲೋಕ

ಕವಿದ ಮೋಡದ ನಡುವೆ ಹೊಳೆದ ತಾರೆ

• ವಿನಾಯಕ ಕೆ.ಎಸ್.

ಮೋಡ ಕವಿದ ಮಬ್ಬು ವಾತಾವರಣದಲ್ಲಿ ಎಳೆಬಿಸಿಲು ಮೂಡುವಂತೆ ವರ್ಷದ ಕೊನೆಯಲ್ಲಿ ಸಾಹಿತಿ ಲಕ್ಷ್ಮೀಶ ತೋಳ್ಪಾಡಿ ಅವರ 'ಮಹಾಭಾರತ ಅನುಸಂಧಾನ ಭಾರತಯಾತ್ರೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಒಲಿದುಬಂದಿತು. 'ಪ್ರಜಾವಾಣಿ' ಪತ್ರಿಕೆಯ 'ಮುಕ್ತಛಂದ' ಪುರವಣಿಯಲ್ಲಿ ಪ್ರಕಟವಾಗಿದ್ದ ಅಂಕಣಗಳ ಬರಹಗಳನ್ನು ಒಳಗೊಂಡ ಕೃತಿ ಇದು.

ಅಂದುಕೊಂಡಂತೆ ಆಗಿದ್ದರೆ ಇದೇ ತಿಂಗಳಲ್ಲಿ ಮಂಡ್ಯದಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಡೆಯಬೇಕಿತ್ತು. ಬರಗಾಲದ ಕಾರಣದಿಂದಾಗಿ ಅದೀಗ ಮುಂದಕ್ಕೆ ಹೋಗಿದೆ.



ಲಕ್ಷ್ಮೀಶ ತೋಳ್ಪಾಡಿ

ಸಾಹಿತ್ಯಿಕವಾಗಿ ಈ ವರ್ಷ ಶುರುವಾದದ್ದು ಸಂಭ್ರಮದಿಂದಲೇ. ಜನವರಿ 6ರಿಂದ ಹಾವೇರಿಯಲ್ಲಿ ಮೂರು ದಿನ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಡೆಯಿತು. ಡಿಸೆಂಬರ್‌ನಲ್ಲಿಯೇ ಇನ್ನೊಂದು ಸಮ್ಮೇಳನ ನಡೆಸುವುದಾಗಿ, ಕರ್ನಾಟಕ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಆಗ ಹೇಳಿದ್ದರು. ಆದರದು ಸಾಧ್ಯವಾಗಲಿಲ್ಲ.


ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪುಸ್ತಕ ಪ್ರಾಧಿಕಾರಗಳಿಗೆ ಪದಾಧಿಕಾರಿಗಳ ನೇಮಕವೇ ಇಲ್ಲದೆ ಕೆಲಸ ಮಾಡುವ ಸ್ಥಿತಿಯಲ್ಲಿ ಇಲ್ಲ. ಕನ್ನಡನಾಡಿಗೆ ಕರ್ನಾಟಕ ಮರುನಾಮಕರಣವಾಗಿ ಐವತ್ತು ವರ್ಷಗಳು ಪೂರ್ಣವಾಗಿರುವ ಸಂಭ್ರಮಕ್ಕೂ ಈ ವರ್ಷ ಸಾಕ್ಷಿಯಾಗಿದೆ.

ಸಾಲು ಸಾಲು ಆತ್ಮಕತೆಗಳು

ಹೊಸ ಲೇಖಕರ ಕೃತಿ ಫಸಲು ಕನ್ನಡದಲ್ಲಿ ಒಂದು ಕಡೆ ಜೋರಾಗಿದ್ದರೆ, ಇನ್ನೊಂದೆಡೆ ಪಳಗಿದ ಲೇಖಕರು ಸೃಜನಶೀಲ ಹಾಗೂ ಸೃಜನೇತರ ಪ್ರಕಾರಗಳಲ್ಲಿ ಆತ್ಮಕಥನದ ಮಾದರಿಯ ಪುಸ್ತಕಗಳನ್ನು ಈ ವರ್ಷ ಹೆಚ್ಚಾಗಿ ಪ್ರಕಟಿಸಿದ್ದಾರೆ.

ಬರಗೂರು ರಾಮಚಂದ್ರಪ್ಪನವರ 'ಕಾಗೆ ಕಾರುಣ್ಯದ ಕಣ್ಣು', ರಹಮತ್ ತರೀಕೆರೆ ಅವರ 'ಕುಲುಮೆ', ಹೆಣ್ಣಿನಿಂದ ಗಂಡಾಗಿ ಪರಿವರ್ತನೆಯಾದ ರೂಮಿ ಹರೀಶ್ ಅವರ 'ಜೋನ್ಪುರಿ ಖಯಾಲ್' (ನಿರೂಪಣೆ: ದಾದಾಪೀರ್ ಜೈಮನ್), ಎಸ್.ಆರ್. ಹಿರೇಮಠ ಅವರ 'ಮಹಾಸಂಗ್ರಾಮಿ' (ನಿರೂಪಣೆ: ರೂಪ ಹಾಸನ), ಗುರುಪ್ರಸಾದ್ ಕಂಟಲಗೆರೆ ನಿರೂಪಿಸಿರುವ, ಕುಂದೂರು ತಿಮ್ಮಪ್ಪಯ್ಯನವರ 'ಅಂಗುಲಿಮಾಲ', ಟಿ.ಎನ್. ಸೀತಾರಾಂ ಅವರ 'ನೆನಪಿನ ಪುಟಗಳು', ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ಅವರ ಆತ್ಮಕಥನ 'ಕಲ್ಯಾಣ ಕೆಡುವ ಹಾದಿ' (ಅನುವಾದ: ಎನ್. ಸಂಧ್ಯಾರಾಣಿ), ಮಾನದಾ ದೇವಿ ಪ್ರಣೀತ ಅವರ 'ವಿದ್ಯಾವಂತ ವೇಶ್ಯೆಯ ಆತ್ಮಕತೆ' (ಅನು: ನಾಗ ಎಚ್. ಹುಬ್ಳಿ), ಮಲ್ಲೇಪುರಂ ವೆಂಕಟೇಶ ಅವರ 'ದಿಟದ ದೀವಟಿಗೆ'- ಈ ವರ್ಷ ಪುಸ್ತಕದ ಶೆಲ್ಫ್‌ಗಳನ್ನು ಸೇರಿದ ಆತ್ಮಕತೆಗಳ ಭರ್ಜರಿ ಫಸಲಿಗೆ ಉದಾಹರಣೆಗಳು.

ಅಗಲಿದ ಸಾಹಿತಿಗಳು



ಜಿ.ಎಚ್.ನಾಯಕ



ಸಾರಾ ಅಬೂಬಕ್ಕರ್

ಕನ್ನಡ ವಿಮರ್ಶೆಯ ಲೋಕದಲ್ಲಿ ಜಿ.ಎಚ್.ನಾಯಕ ಎಂದೇ ಪ್ರಖ್ಯಾತರಾಗಿದ್ದ ಗೋವಿಂದರಾಯ ಹಮ್ಮಣ್ಣ ನಾಯಕ, ಶ್ರೀರಂಗಪಟ್ಟಣದ ಸಾಹಿತಿ–ಬಹುಭಾಷಾ ಪಂಡಿತ ಪ್ರೊ. ಎಂ. ಕರಿಮುದ್ದೀನ್, 'ಚಂದ್ರಗಿರಿ ತೀರದಲ್ಲಿ' ಖ್ಯಾತಿಯ ಸಾರಾ ಅಬೂಬಕ್ಕರ್, ಸಾಹಿತಿ–ಸಂಘಟಕ ಶೇಖರ್ ಅಜೆಕಾರ್, ಬೀದರ್‌ನ ಸಾನೆಟ್ ಕವಿ ಎಂ.ಜಿ. ಗಂಗನಪಳ್ಳಿ ಇವರೆಲ್ಲ ಈ ವರ್ಷ ಅಗಲಿದರು.

ಪ್ರಶಸ್ತಿ ಸಂದವರು

ಸುಬ್ಬು ಹೊಲೆಯಾರ್, ಪ್ರೊ. ಸಿ. ನಾಗಣ್ಣ, ಸತೀಶ ಕುಲಕರ್ಣಿ, ಲಕ್ಷ್ಮೀಪತಿ ಕೋಲಾರ, ಕೆ. ಷರೀಫ ಹಾಗೂ ಪರಪ್ಪ ಗುರುಪಾದಪ್ಪ ಸಿದ್ದಾಪುರ ಅವರಿಗೆ ಈ ವರ್ಷ ಸಾಹಿತ್ಯಕ್ಕಾಗಿ ರಾಜ್ಯೋತ್ಸವ ಪ್ರಶಸ್ತಿಗಳು ಸಂದವು. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನೀಡುವ ನೃಪತುಂಗ ಪ್ರಶಸ್ತಿಗೆ 2022ನೇ ಸಾಲಿಗೆ ಸಾಹಿತಿ ವೈದೇಹಿ ಅವರನ್ನು ಆಯ್ಕೆ ಮಾಡಲಾಯಿತು. 2022-23ನೇ ಸಾಲಿನ ಪಂಪ ಪ್ರಶಸ್ತಿಗೆ ಸಿ.ಪಿ. ಕೃಷ್ಣಕುಮಾರ್, ಬಾಬು ಕೃಷ್ಣಮೂರ್ತಿ ಹಾಗೂ ಎಸ್.ಆರ್. ರಾಮಸ್ವಾಮಿ ಆಯ್ಕೆಯಾದರು.


ಯೋನ್ ಫಾಸ್ಸಾಗೆ ನೊಬೆಲ್, ದಾಮೋದರ್ ಮೌಜೊಗೆ ಜ್ಞಾನಪೀಠ



ಫಾಸ್ಸಾ ಕೃತಿಗಳು



ದಾಮೋದರ್ ಮೌಜೊ



ಯೋನ್ ಫಾಸ್ಸಾ

2023ರ ಸಾಹಿತ್ಯದ ನೊಬೆಲ್ ಪ್ರಶಸ್ತಿಗೆ ನಾರ್ವೆಯ ನಾಟಕಕಾರ ಹಾಗೂ ಲೇಖಕ ಯೋನ್ ಫಾಸ್ಸಾ ಭಾಜನರಾದರು. ಅವರ 'ಸೀನ್ಸ್ ಫ್ರಮ್ ಎ ಚೈಲ್ಡ್‌ಹುಡ್' ಎಂಬ ಕೃತಿಯು ಕಳೆದ ವರ್ಷವೇ ಮಲಯಾಳ ಸಾಹಿತ್ಯ ಲೋಕದಲ್ಲಿ ಹೆಚ್ಚು ಚರ್ಚಿತವಾಗಿತ್ತು. ಫಾಸ್ಸಾ ಸಾಹಿತ್ಯವನ್ನು ಕಳೆದ ವರ್ಷವೇ ಕೇರಳದಲ್ಲಿ ಸಂಭ್ರಮಿಸಲಾಗಿತ್ತು. ಮೌನವನ್ನೂ ಸಶಕ್ತ ಸಂವಹನ ಆಗಿಸಿದ್ದು ಈ ಸಾಹಿತಿಯ ವೈಶಿಷ್ಟ್ಯ.

ಗೋವಾ ಲೇಖಕ ದಾಮೋದರ್ ಮೌಜೊ ಅವರಿಗೆ ಈ ವರ್ಷ ಜ್ಞಾನಪೀಠ ಪ್ರಶಸ್ತಿ ಪ್ರದಾನ ಮಾಡಲಾಯಿತು. 'ಕರ್ಮೆಲಿನ್' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವಕ್ಕೂ ಪಾತ್ರರಾಗಿರುವ ದಾಮೋದರ್ ಇಪ್ಪತ್ತೈದು ಕೃತಿಗಳನ್ನು ಬರೆದಿದ್ದಾರೆ. ಕೊಂಕಣಿ ಸಾಹಿತ್ಯಕ್ಕೆ ಈ ಜ್ಞಾನಪೀಠ ಹೆಮ್ಮೆ ತಂದಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ 'P/500 ಎಂದು ನಮೂದಿಸಲಾಗಿರುವ ಪ್ಯಾರಸಿಟಮಾಲ್ ಮಾತ್ರೆಗಳನ್ನು ಸೇವಿಸಬೇಡಿ. ಚೀನಾವು ಈ ಮಾತ್ರೆಗಳಲ್ಲಿ 'ಮ್ಯಾಚಿಪೊ' ವೈರಾಣುವನ್ನು ಸೇರಿಸಿ, ಭಾರತಕ್ಕೆ ರಫ್ತು ಮಾಡುತ್ತಿದೆ. ಈ ಮಾತ್ರೆ ಬಳಸಿದವರಿಗೆ 'ಮ್ಯಾಚಿಪೊ' ರೋಗ ಬರುತ್ತದೆ. ಮಾತ್ರೆ ಸೇವಿಸಿದ ಕೆಲವೇ ನಿಮಿಷಗಳಲ್ಲಿ ಆ ವ್ಯಕ್ತಿಯ ಮೈಮೇಲೆಲ್ಲಾ ಗಂದೆಗಳು ಏಳುತ್ತವೆ. ತೀವ್ರ ಜ್ವರವೂ ಬರುತ್ತದೆ. ಇದಕ್ಕೆ ಚಿಕಿತ್ಸೆಯೇ ಇಲ್ಲ. ಅಂತಿಮವಾಗಿ ವ್ಯಕ್ತಿ ಸಾಯುತ್ತಾನೆ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಇದು ಸುಳ್ಳು ಸುದ್ದಿ.



✓ 'P/500 ಎಂದು ನಮೂದಿಸಲಾಗಿರುವ ಪ್ಯಾರಸಿಟಮಾಲ್ ಮಾತ್ರೆಗಳಲ್ಲಿ 'ಮ್ಯಾಚಿಪೊ' ವೈರಾಣು ಇದೆ ಎಂಬುದಕ್ಕೆ ಯಾವುದೇ ಸಾಕ್ಷ್ಯ ಇಲ್ಲ. 'ಮ್ಯಾಚಿಪೊ' ವೈರಾಣು ಪ್ರಾಣಿಗಳಿಂದ ಮನುಷ್ಯರಿಗೆ ಮತ್ತು ಮನುಷ್ಯರಿಂದ ಮನುಷ್ಯರಿಗೆ ಹರಡುತ್ತದೆ. ಅದು ಯಾವುದೇ ನಿರ್ಜೀವ ವಸ್ತುಗಳ ಮೂಲಕ ಹರಡುವುದಿಲ್ಲ. ಹೀಗಾಗಿ ಮಾತ್ರೆಯ ಮೂಲಕವೂ ಅದು ಹರಡುವುದಿಲ್ಲ. ಅಲ್ಲದೆ P/500 ಎಂದು ನಮೂದಿಸಲಾಗಿರುವ ಪ್ಯಾರಸಿಟಾಮಲ್ ಮಾತ್ರೆಗಳನ್ನು ಸೇವಿಸಿದ ಕಾರಣಕ್ಕೆ ಗಂದೆಗಳು ಉಂಟಾದ ಮತ್ತು ತೀವ್ರ ಜ್ವರಕ್ಕೆ ತುತ್ತಾದ ಬಗ್ಗೆ ಯಾವುದೇ ವರದಿಗಳಿಲ್ಲ. ಇಂತಹ ಊಹಾಪೋಹಗಳನ್ನು ನಂಬಬಾರದು ಎಂದು ದೆಹಲಿ ಏಮ್ಸ್‌ನ ವೈದ್ಯಾಧಿಕಾರಿಗಳು ಹೇಳಿದ್ದಾರೆ' ಎಂದು ಹಲವು ಫ್ಯಾಕ್ಟ್‌ಚೆಕ್ ವೇದಿಕೆಗಳು ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.


ಗುಂಡಣ್ಣ



ನುಡಿ ಬೆಳಗು

ನಾವು ಕೊಟ್ಟದ್ದು ನಮಗೇ ವಾಪಸ್





ಪ್ರೊ.ಎಂ. ಕೃಷ್ಣೇಗೌಡ

ಫಟೀರ್... ಅಂತ ಬೀರಬಲ್ಲನ ಕೆನ್ನೆಗೆ ಒಂದು ಏಟು ಕೊಟ್ಟ ಅಕ್ಬರ್. ಬೀರಬಲ್ ಕೇಳಿದ. 'ನಾನೇನು ತಪ್ಪು ಮಾಡಿದೆ ಹುಜೂರ್?' 'ನನ್ನ ಪ್ರೀತಿಯ ಗೆಳೆಯ ನೀನು. ನಿನ್ನ ತಪ್ಪೇನೂ ಇಲ್ಲದೆ ನನ್ನ ಖುಷಿಗಾಗಿ ಒಂದೇಟು ಹೊಡೆದರೆ ತಪ್ಪಾ? ಅಥವಾ ಮುಂದೆಂದಾದರೂ ನೀನು ತಪ್ಪು ಮಾಡುತ್ತೀಯಲ್ಲ, ಅದಕ್ಕೆ ಇದು ಮುಂಗಡ ಅಂದುಕೋ ಅಷ್ಟೆ'.

ಬೀರಬಲ್‌ಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ. ಆಗ ಅಲ್ಲಿಗೊಬ್ಬ ರಾಜಭಟ ಬಂದ. ಬೀರಬಲ್ 'ಫಟೀರ್' ಅಂತ ಅವನ ಕೆನ್ನೆಗೆ ಬಾರಿಸಿ ರಾಜ ಕೊಟ್ಟದ್ದನ್ನು ಭಟನಿಗೆ ಸಂದಾಯ ಮಾಡಿದ. ಪ್ರಶ್ನಾರ್ಥಕ ಮುಖ ಮಾಡಿ ನಿಂತ ರಾಜಭಟನಿಗೆ, ರಾಜ ತನಗೆ ಹೇಳಿದ್ದನ್ನೇ ಹೇಳಿದ. ರಾಜಭಟ ಕಣ್ಣೀರು ತುಂಬಿಕೊಂಡು ಹೊರಗೆ ಹೋದ. ಬಾಗಿಲಾಚೆ 'ಫಟೀರ್' ಅಂತ ಸದ್ದು ಕೇಳಿಸಿತು. ಅನುಮಾನವೇ ಇಲ್ಲ. ಆ ರಾಜಭಟ, ಬೀರಬಲ್ ತನಗೆ ಕೊಟ್ಟದ್ದನ್ನು ಇನ್ನ್ಯಾರಿಗೋ ಕೊಟ್ಟಿದ್ದಾನೆ. ಅಕ್ಬರ್, ಬೀರಬಲ್ ಇಬ್ಬರೂ ಗೊಳ್ಳನೆ ನಕ್ಕರು.

ಮಧ್ಯಾಹ್ನದ ಹೊತ್ತಿಗೆ ಈ ಪ್ರಸಂಗ ಮರೆತೇ ಹೋಯಿತು ಅಕ್ಬರ್‌ಗೆ. ಆದರೆ ರಾಜಧಾನಿಯಲ್ಲಿ ಹೀಗೆ ತಪ್ಪೇ ಇಲ್ಲದೆ ಒಬ್ಬರಿಗೊಬ್ಬರು ಕೆನ್ನೆಗೆ ಹೊಡೆಯುವ ಆಟ ನಡೆಯುತ್ತಿತ್ತು.

ದಿನದ ಕಲಾಪಗಳನ್ನೆಲ್ಲಾ ಮುಗಿಸಿ ಅಂತಃಪುರಕ್ಕೆ ನಡೆದ ಅಕ್ಬರ್. ರಾಜ ಅತ್ತ ಬರುತ್ತಿದ್ದಂತೆಯೇ ಮುಗುಳ್ನಗುತ್ತಾ, ಎದುರುಗೊಂಡು ಅತ್ತರು ಸಿಂಪಡಿಸಿ ತನ್ನ ಚಿಗುರು ಬೆರಳುಗಳಿಂದ ರಾಜನ ಬೆರಳು ಹಿಡಿದು ಅದೊಂದು ಬಗೆ ವೈಯಾರದಿಂದ ಅಂತಃಪುರದೊಳಕ್ಕೆ ಕರೆದೊಯ್ದಳು ಮಹಾರಾಣಿ. ಇಬ್ಬರೂ ಭೋಜನ ಮುಗಿಸಿ ವೀಳ್ಯ ಮೆಲ್ಲುತ್ತಾ ಸರಸ ಸಂಕಥಾ ವಿನೋದದಲ್ಲಿರುವಾಗ...

'ಫಟೀರ್' ಅಂತ ರಾಜನ ಕೆನ್ನೆಗೆ ಹೊಡೆದಳು ರಾಣಿ.

ರಾಜ ಸಿಟ್ಟಿನಿಂದಲೇ ಕೇಳಿದ- 'ಮಹಾರಾಣಿ, ಏನಾಯಿತು ನಿಮಗೆ? ಹೊಡೆದದ್ದೇಕೆ ನನ್ನ ಕೆನ್ನೆಗೆ?'

ರಾಣಿ ಹೇಳಿದಳು- 'ಸಿಟ್ಟಾಗಬೇಡಿ ನನ್ನ ದೊರೆ, ನನ್ನ ಪ್ರೀತಿಯ ಮನದನ್ನ ನೀವು, ನೀವೇನೂ ತಪ್ಪು ಮಾಡಿಲ್ಲದಿರಬಹುದು, ಆದರೂ ನನ್ನ ಖುಷಿಗಾಗಿ ಒಂದೇಟು ಹೊಡೆದರೆ ತಪ್ಪಾ? ಅಥವಾ ಮುಂದೆ ನೀವು ಮಾಡಬಹುದಾದ ತಪ್ಪಿಗೆ ಇದು ಮುಂಗಡ ಅಂದುಕೊಳ್ಳಿ'.

ಅಕ್ಬರ್‌ಗೆ ಅನ್ನಿಸಿತು- ನಾನೇ ಶುರು ಮಾಡಿದ ಆಟ ಇದು. ನನ್ನ ಏಟು ಅದರೊಂದಿಗಿನ ಮಾತು ಎರಡೂ ವಾಪಸ್ ಬಂದಿವೆ ಅಷ್ಟೆ.

ಇದು ಅಕ್ಬರ್‌ಗೆ ಮಾತ್ರ ಅಲ್ಲ. ನಮಗೂ ಅಷ್ಟೆ. ನಾವು ಯಾರಿಗೋ ಹೊಡೆದ ಏಟು, ಅದು ಎಲ್ಲೆಲ್ಲೋ ಸಂಚಾರ ಮಾಡಿ ಒಂದಲ್ಲ ಒಂದು ದಿನ ನಮಗೆ ವಾಪಸ್ ಬರುತ್ತದೆ. ಕೆಲವೊಮ್ಮೆ ಅದು ಬಂದಾಗ ನಾವೇ ಶುರು ಮಾಡಿದ ಆಟ ನಮಗೇ ಮರೆತು ಹೋಗಿರುತ್ತದೆ. ಕೆನ್ನೆಗೆ ಏಟು ಬಿದ್ದಾಗಲೇ ಅದು ನೆನಪಾಗುವುದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಡಿಸೆಂಬರ್ 29, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ದ್ವಿತೀಯ ಗಂ. 08-00 ನಕ್ಷತ್ರ: ಪುಷ್ಯ ಗಂ. 27-10 ಯೋಗ: ವೈಧೃತಿ ಗಂ 26-29 ಕರಣ: ಗರ ಗಂ. 08-00, ಧನು ಮಾಸದ 13 ನೇ ದಿನ, ಮಳೆನಕ್ಷತ್ರ: ಮೂಲಾ 4.

ರಾಹುಕಾಲ: ಬೆಳಿಗ್ಗೆ 10-30 – 12-00

ಸೂರ್ಯೋದಯ: 06-56 **ಸೂರ್ಯಾಸ್ತ:** 06-09

ಮುಸ್ಲಿಂ ದಿನಾಂಕ: 15 ಜುಮಾದುಸ್ಸಾನಿ

ಅದೃಷ್ಟ ಸಂಖ್ಯೆ: 2, 1

ಮೇಷ: ಮನೆಯಲ್ಲಿ ಮಂಗಳ ಕಾರ್ಯ ನಡೆಸಲು ತೀರ್ಮಾನಿಸಿ, ಅದಕ್ಕೆ ಬೇಕಾದ ಜನಬಲ ಮತ್ತು ಆರ್ಥಿಕ ಬೆಂಬಲವು ಬಂಧುಗಳಿಂದ ಒದಗಿಬರಲಿದೆ. ಆರಕ್ಷಕ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ.

ವೃಷಭ: ನಿಮ್ಮ ಇಷ್ಟಾರ್ಥ ನೆರವೇರುವ ಸಲುವಾಗಿ ಬೇಡಿಕೊಂಡ ಹರಕೆ ತೀರಿಸುವ ಬಗ್ಗೆ ಗಮನವಿರಲಿ. ಕುಟುಂಬ ವರ್ಗದಲ್ಲಿ ಆರೋಗ್ಯ ಉತ್ತಮವಾಗಿರಲಿದೆ. ಯೋಗಾಭ್ಯಾಸದಿಂದ ಆರೋಗ್ಯ ವೃದ್ಧಿ ಆಗಲಿದೆ.

ಮಿಥುನ: ಸಂಬಂಧಿಕರೊಂದಿಗಿನ ವ್ಯವಹಾರ ಕಡಿಮೆ ಮಾಡಿಕೊಳ್ಳುವುದು ಉತ್ತಮ. ನಿರಪರಾಧಿಯಾದರೂ ಶಿಕ್ಷೆಗೆ ಒಳಗಾಗುವ ಸಾಧ್ಯತೆ ಇದೆ. ಈ ಬಗ್ಗೆ ಎಚ್ಚರದಿಂದಿರಿ. ಸಿನಿಮಾ ರಂಗದವರಿಗೆ ಹೆಚ್ಚಿನ ಅವಕಾಶ ಲಭಿಸುವುದು.

ಕರ್ಕಾಟಕ: ಮೇಧಾವಿಗಳ ಮೂಲಕ ಧನ ಸಂಪಾದನೆ ಆಗಲಿದೆ. ಸಂಬಂಧಗಳಿಗೆ ಪ್ರಾಮುಖ್ಯತೆ ನೀಡಿದಲ್ಲಿ ಹೊಸ ಬದಲಾವಣೆಯ ಸೂಚನೆ ಸಿಗಲಿದೆ. ದೇವರ ಆರಾಧನೆಯಿಂದ ಹೆಚ್ಚಿನ ಕಾರ್ಯ ಸಾಧನೆಗೆ ನೆರವಾಗಲಿದೆ.

ಸಿಂಹ: ಅಧಿಕಾರಸ್ಥರು ಹಾಗೂ ನಿಮ್ಮ ಹಿರಿಯ ನೌಕರರ ಜತೆ ಸ್ನೇಹ ಸಂಬಂಧ ಹೆಚ್ಚಾಗಿ, ವೃತ್ತಿಯಲ್ಲಿ ನವ ಉಲ್ಲಾಸ ಮೂಡಲಿದೆ. ಇಂದು ವೃತ್ತಿರಂಗದಲ್ಲಿ ನಿಮಗಾಗಿ ಅದೃಷ್ಟದ ಬಾಗಿಲು ತೆರೆಯಲಿದೆ.

ಕನ್ಯಾ: ಮರಕೆಲಸ ಮಾಡುವವರಿಗೆ ಹೆಚ್ಚಿನ ಅವಕಾಶಗಳು ಬಂದರೂ ಕೆಲಸಕ್ಕೆ ಸೋಮಾರಿತನ ಅಡ್ಡಿಯಾಗಲಿದೆ. ರಾಜಕೀಯ ವ್ಯಕ್ತಿಗಳಿಗೆ ತಮ್ಮ ಚಟುವಟಿಕೆಗಳಿಗಾಗಿ ಬಿರುಸಿನ ಓಡಾಟ ಅನಿವಾರ್ಯವಾಗಲಿದೆ.

ತುಲಾ: ನಿಮ್ಮಲ್ಲಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ವೇದಿಕೆ ಸಿಗಲಿದೆ. ಲೆಕ್ಕ ಪತ್ರಗಳ ವ್ಯವಹಾರ ನೋಡುವವರಿಗೆ ಸಂದಿಗ್ಧ ಪರಿಸ್ಥಿತಿಗಳು ಎದುರಾಗಬಹುದು. ನಿಮ್ಮ ಮಾತುಗಳಲ್ಲಿ ಸತ್ಯವಿರಲಿ.

ವೃಶ್ಚಿಕ: ಅನಾರೋಗ್ಯದಿಂದ ಹೊರಬರಲು ಚಿಕಿತ್ಸೆ ಜೊತೆ ನವಗ್ರಹ ಶಾಂತಿಯಂತಹ ಧಾರ್ಮಿಕ ಮಾರ್ಗವನ್ನೂ ಅನುಸರಿಸಿ. ಅಪ್ತರ ಕಷ್ಟಗಳ ಕಡೆಗೆ ಗಮನ ಹರಿಸುವುದು ಸಾಧ್ಯವಾಗುತ್ತದೆ.

ಧನು: ವಿಭಿನ್ನ ರೀತಿಯ ಕೆಲಸವೊಂದನ್ನು ನಿಮ್ಮ ಸ್ನೇಹಿತರೊಬ್ಬರು ನಿಮಗೆ ಒಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ ಅದು ನಿಮಗೆ ಸಾಕಷ್ಟು ಆದಾಯ ಮತ್ತು ಹೆಸರು ತರಲಿದೆ. ಹಿಂದಿನ ಕಹಿ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಿ.

ಮಕರ: ಗೌರವಯುತವಾದ ಸ್ಥಾನಮಾನಗಳು ಈ ದಿನ ನಿಮ್ಮದಾಗಲಿವೆ. ಅಧಿಕಾರಕ್ಕಾಗಿ ಯಾವುದೇ ಅಡ್ಡದಾರಿ ಅನುಸರಿಸಬೇಡಿ. ಹೊಸ ಮನೆ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯಲಿದೆ.


ಕುಂಭ: ಅತೀ ಸಂಭ್ರಮದ ಜೀವನ ಶೈಲಿಯಿಂದ ಖರ್ಚುಗಳು ಹೆಚ್ಚಾಗಲಿದೆ. ಆದರೆ ಆದಾಯಕ್ಕೆ ಯಾವುದೇ ರೀತಿಯಲ್ಲೂ ತೊಂದರೆಯಾಗಲಾರದು. ಪತ್ನಿ ವರ್ಗದವರಿಂದ ನಿಮ್ಮೆಲ್ಲ ಕೆಲಸ ಕಾರ್ಯಗಳಿಗೆ ಸಹಾಯ ದೊರೆಯಲಿದೆ.

ಮೀನ: ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಸಿಗಲಿವೆ. ಹಣಕಾಸಿನ ವ್ಯವಹಾರಗಳಲ್ಲಿ ಜಾಗರೂಕರಾಗಿರುವುದು ಒಳ್ಳೆಯದು. ಕುಟುಂಬದವರಿಂದ ಶುಭವಾರ್ತೆ ಕೇಳುವಿರಿ.

ಪದಬಂಧ 5544 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಈತ ಹೊರದೇಶದವನು (4)
5.ಬೇಡತಿ ಇಲ್ಲಿದ್ದಾಳೆ (3)
6.ಕರದಲ್ಲಿರುವ ಚಿನ್ನ! (4)
8.ಬೆಲೆಯುಳ್ಳ ಮಣಿಗಳನ್ನು ಅಡಗಿಸಿಕೊಂಡಿರುವ ಸಮುದ್ರ (4)
12.ಆಕಳ ಹತ್ತಿರವಿರುವ ಎಳೆಮಗು (4)
14.ಗಾಳಿಯ ಸ್ಥಿತಿಗತಿ (4)
15.ಆಕಾಶದಲ್ಲಿ ಹಾಡುವ ಪಕ್ಷಿ (3)
16.ವೃಕ್ಷದ ಹತ್ತಿರವಿರುವ ಪಚ್ಚೆ (4)

ಮೇಲಿಂದ ಕೆಳಕ್ಕೆ
1.ಮೃಗದ ನಡುವಳಿಕೆಯಿದು (5)
2.ನಷ್ಟವನ್ನು ತುಂಬಿಕೊಡುವುದು (4)
3.ಕೈ ಕೊನೆಗಿಟ್ಟು ಹಿಡಿದಿರುವ ಸಾಮಾನು (4)
4.ಶಿರವೆತ್ತಿ ನೋಡಿದಾಗ ಕಾಣಿಸಿದ್ದು ಬೆಟ್ಟದ ತುದಿ (3)
7.ಬಿಡಲು ಯೋಗ್ಯವಾದುದು (2)
9.ಇನ್ನೂ ಕರು ಹಾಕದ ಹಸು (3)
10.ಲಾಂಗೂಲ ಹಿಡಿದು ಬಂದಿರುವ ಅನುಯಾಯಿ (5)
11.ಚರ್ಚೆಯಿಲ್ಲಿ ತಿರುವು ಮುರುವಾಗಿದೆ (2)
12.ಈತ ದುಡ್ಡುಳ್ಳವನು (4)
13.ಇದು ಹೂವಿನ ಶರ (4)
14.ಕೃತಘ್ನ ಇಲ್ಲಿದ್ದಾನೆ (3)



5443 ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಮಡಿವಾಳ 3.ಕರಣಿಕ
5.ಆಕರ 6.ನವರಂಗ
8.ಭವ್ಯ 9.ಜಿಲ್ಲೆ
10.ಯಜಮಾನ 13.ಹಲುಬೆ
16.ಬಹಿರಂಗ 17.ಮಕರಂದ

ಮೇಲಿನಿಂದ ಕೆಳಕ್ಕೆ
1.ಮಲೆ 2.ವಾದಕ
3.ಕಲರವ 4.ಕಲ್ಯಾಣಿ
5.ಆಯವ್ಯಯ 6.ನಯನ
7.ಗಜನಿಂಬೆ 11.ಮಾವಟಿಗ
12.ಆರಂಭ 14.ಉಬ್ಧಕ
15.ಮುದ

ಸುಡೊಕು 5929

	7			9			6	
1		9	6	4				
	6		5		2		9	7
9		2				3		6
	4			5			7	
8		7	2		4	1		9
7			4		5		2	
				2		7		4
		4	1		9		3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5928ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಕಾಂಗ್ರೆಸ್‌ನ 139ನೇ ಸಂಸ್ಥಾಪನಾ ದಿನ • ಲೋಕಸಭೆ ಚುನಾವಣಾ ಪ್ರಚಾರಕ್ಕೆ ಮೊಳಗಿದ ಕಹಳೆ

ಜಾತಿಗಣತಿ, ‘ನ್ಯಾಯ್’ ಜಾರಿ ಭರವಸೆ

ಪ್ರಜಾವಾಣಿ ವಾರ್ತೆ



ಮಹಾರಾಷ್ಟ್ರದ ನಾಗ್ಪುರದಲ್ಲಿ ನಡೆದ ‘ನಾವು ಸಿದ್ಧರಾಗಿದ್ದೇವೆ’ ರ‍್ಯಾಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕರಾದ ರಾಹುಲ್ ಗಾಂಧಿ, ನಾನಾ ಪಟೋಲೆ ಭಾಗವಹಿಸಿದ್ದರು – ಪಿಟಿಐ ಚಿತ್ರ

ನಾಗ್ಪುರ (ಮಹಾರಾಷ್ಟ್ರ): 2024ರ ಲೋಕಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ, ಜಾತಿ ಗಣತಿ ನಡೆಸುವುದಾಗಿ ಮತ್ತು ನ್ಯಾಯ್ ಯೋಜನೆ ಜಾರಿಗೊಳಿಸುವುದಾಗಿ ಕಾಂಗ್ರೆಸ್ ಇಲ್ಲಿ ಗುರುವಾರ ಭರವಸೆ ನೀಡಿದೆ.

ಮುಂಬರುವ ಲೋಕಸಭೆ ಚುನಾವಣೆಗೆ ಪಕ್ಷದ ಪ್ರಚಾರ ಆರಂಭಕ್ಕಾಗಿ ಹಮ್ಮಿಕೊಂಡಿದ್ದ ‘ನಾವು ಸಿದ್ಧರಾಗಿದ್ದೇವೆ’ (ಹಮ್ ತಯಾರ್ ಹೈ) ಕಾರ್ಯಕ್ರಮ ಮತ್ತು ಕಾಂಗ್ರೆಸ್‌ನ 139ನೇ ಸಂಸ್ಥಾಪನಾ ದಿನದ ಅಂಗವಾಗಿ ಏರ್ಪಡಿಸಿದ್ದ ಬೃಹತ್ ರ‍್ಯಾಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪಕ್ಷದ ನಾಯಕ ರಾಹುಲ್ ಗಾಂಧಿ ಮಾತನಾಡಿದರು.

‘ಇಂಡಿಯಾ’ ಮೈತ್ರಿಕೂಟ ಒಗ್ಗಟ್ಟಿನಿಂದ ಇದ್ದರೆ ಬಿಜೆಪಿಯನ್ನು ಎಲ್ಲೂ ಕಾಣಲು ಸಾಧ್ಯವಿಲ್ಲ ಎಂದು ಖರ್ಗೆ ಹೇಳಿದರು.

‘ಚುನಾವಣೆಯಲ್ಲಿ ಜನರು ಮೈತ್ರಿಕೂಟಕ್ಕೆ ಬಲ ನೀಡಿದರೆ, ನಾವು ‘ನ್ಯಾಯ್’ ಯೋಜನೆಯನ್ನು ಜಾರಿಗೊಳಿಸುತ್ತೇವೆ. ದೇಶದ ಮಹಿಳೆಯರನ್ನು ಸಬಲಗೊಳಿಸುತ್ತೇವೆ. ಇದರಿಂದ ಅವರು ಇಡೀ ಕುಟುಂಬವನ್ನು ಸಶಕ್ತಗೊಳಿಸಬಹುದು’ ಎಂದರು.

‘ನಾಗ್ಪುರದಲ್ಲಿ ಎರಡು ಸಿದ್ಧಾಂತಗಳಿವೆ. ಒಂದು ಪ್ರಗತಿಪರವಾಗಿದ್ದು ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಸೇರಿದ್ದಾಗಿದ್ದರೆ ಮತ್ತೊಂದು ದೇಶವನ್ನು ನಾಶಮಾಡಿದ ಆರ್‌ಎಸ್‌ಎಸ್ ಸಂಘಟನೆಯದ್ದು. ದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಅಪಾಯವಿದೆ’ ಎಂದರು.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ರಾಹುಲ್, ಆರ್‌ಎಸ್‌ಎಸ್– ಬಿಜೆಪಿ ಭಾರತವನ್ನು ರಾಜ– ಮಹಾರಾಜರ ಕಾಲದ ಹಿಂದಿನ ದಿನಗಳಿಗೆ ಕೊಂಡೊಯ್ಯುತ್ತಿವೆ ಎಂದು ಟೀಕಿಸಿದರು.

‘ದೇಶದಲ್ಲಿ ಎರಡು ಸಿದ್ಧಾಂತಗಳ ನಡುವೆ ಹೋರಾಟವಿದೆ. ಕಾಂಗ್ರೆಸ್‌ನಲ್ಲಿ ಕಿರಿಯ ಕಾರ್ಯಕರ್ತ ಕೂಡ ಪಕ್ಷದ ಉನ್ನತ ನಾಯಕರನ್ನು ಪ್ರಶ್ನಿಸಬಹುದು ಮತ್ತು ಭಿನ್ನ ಅಭಿಪ್ರಾಯ ವ್ಯಕ್ತಪಡಿಸಬಹುದು. ಆದರೆ ಬಿಜೆಪಿಯಲ್ಲಿ ಇದು ಸಾಧ್ಯವಿಲ್ಲ’ ಎಂದರು.

ಮುಖ್ಯಾಂಶಗಳು

- ರ‍್ಯಾಲಿ ನಡೆದ ಮೈದಾನಕ್ಕೆ ಭಾರತ್ ಜೋಡೊ ಹೆಸರು
- ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಗೈರು

> ಕಳೆದ 10 ವರ್ಷಗಳಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ದೇಶದ ನೆಮ್ಮದಿಗೆಡಿಸಿವೆ. ಈ ಸಂಘ–ಸರ್ಕಾರವನ್ನು ತಡೆಯದಿದ್ದರೆ ದೇಶ ನಾಶವಾಗುತ್ತದೆ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಜನರ ಅಭಿವೃದ್ಧಿ ಪಕ್ಷದ ಗುರಿ: ಖರ್ಗೆ: ನವದೆಹಲಿ (ಪಿಟಿಐ): ಸಂಸದೀಯ ಪ್ರಜಾಸತ್ತೆ ಮತ್ತು ಸಮಾನತೆ ಆಧಾರದಲ್ಲಿ ಭಾರತ ನಿರ್ಮಾಣ ಮಾಡುವತ್ತ ಕಾಂಗ್ರೆಸ್ ಯಾವಾಗಲೂ ಶ್ರಮಿಸಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ಹೇಳಿದರು.

‘ಭಾರತದ ಜನರ ಕಲ್ಯಾಣ ಮತ್ತು ಅಭಿವೃದ್ಧಿಯು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಗುರಿಯಾಗಿದೆ’ ಎಂದು ‘ಎಕ್ಸ್’ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. ಇದೇ ರೀತಿ ಪಕ್ಷದ ವಿವಿಧ ನಾಯಕರು ‘ಎಕ್ಸ್’ನಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಯಾವುದೇ ತಾರತಮ್ಯವಿಲ್ಲದೆ ಎಲ್ಲರಿಗೂ ಸಮಾನತೆ ಮತ್ತು ಅವಕಾಶಗಳನ್ನು ಒದಗಿಸುವ ಸಂಸದೀಯ ಪ್ರಜಾಪ್ರಭುತ್ವ ಆಧರಿಸಿದ ಭಾರತದಲ್ಲಿ ಕಾಂಗ್ರೆಸ್ ನಂಬಿಕೆ ಇರಿಸಿದೆ. ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳ ಕುರಿತು ಸಂವಿಧಾನದಲ್ಲಿ ಹೇಳಿರುವಂತೆ ಅನುಸರಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು, ಆಧುನಿಕ ಭಾರತಕ್ಕೆ ಕಾಂಗ್ರೆಸ್ ಅಡಿಗಲ್ಲು ಹಾಕಿದೆ. ಇದು ಪಕ್ಷವಷ್ಟೆ ಅಲ್ಲ, ಭಾರತದ ಆತ್ಮ ಕೂಡ ಎಂದು ಹೇಳಿದ್ದಾರೆ.

‘ಹಮ್ ತಯಾರ್ ಹೈ’

- ‘ನಾವು ಸಿದ್ಧರಾಗಿದ್ದೇವೆ (ಹಮ್ ತಯಾರ್ ಹೈ) ಎಂಬ ಘೋಷಣೆಯೊಂದಿಗೆ ಇಲ್ಲಿ 2024ರ ಲೋಕಸಭೆ ಚುನಾವಣೆ ಪ್ರಚಾರ ಆರಂಭಿಸಿದ ಕಾಂಗ್ರೆಸ್
- ನಾಗ್ಪುರವು ಭೌಗೋಳಿಕವಾಗಿ ದೇಶದ ಮಧ್ಯಭಾಗದಲ್ಲಿರುವುದನ್ನು ಪರಿಗಣಿಸಿ ಪಕ್ಷದ 139ನೇ ಸಂಸ್ಥಾಪನಾ ದಿನ ಇಲ್ಲಿ ಆಚರಿಸಲಾಯಿತು
- ಪ್ರಧಾನಿ ಮೋದಿ ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಟೀಕೆಗಳ ಸುರಿಮಳೆಗರೆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕ ರಾಹುಲ್

ದಕ್ಷಿಣ ರಾಜ್ಯಗಳ ನಾಯಕರು ಹೇಳಿದ್ದೇನು?


- ಬಿಜೆಪಿಗೆ ದಕ್ಷಿಣ ಭಾರತದ ಬಾಗಿಲುಗಳನ್ನು ಕಾಂಗ್ರೆಸ್ ಮುಚ್ಚಿದೆ ಎಂದು ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ‘ನಾವು ಶ್ರಮ ವಹಿಸಿ ಕೆಲಸ ಮಾಡಿದ್ದು ದಕ್ಷಿಣ ಭಾರತದಲ್ಲಿ ಬಿಜೆಪಿ ಬಾಗಿಲುಗಳು ಮುಚ್ಚುವಂತೆ ನೋಡಿಕೊಂಡಿದ್ದೇವೆ’ ಎಂದರು.
- ದಬ್ಬಾಳಿಕೆ ನಡೆಸಿದ ಬ್ರಿಟಿಷರನ್ನು ಹಿಂದಕ್ಕೆ ಕಳುಹಿಸಿದಂತೆ, ಸರ್ವಾಧಿಕಾರಿ ಧೋರಣೆಯ ಬಿಜೆಪಿಯನ್ನು ಮನೆಗೆ ಕಳುಹಿಸುತ್ತೇವೆ ಎಂದು ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಹೇಳಿದರು. ಐತಿಹಾಸಿಕ ಹಿನ್ನೆಲೆಯ ನಾಗ್ಪುರದಲ್ಲಿ ಸಂಸ್ಥಾಪನಾ ದಿನಾಚರಣೆ ನಡೆಯುತ್ತಿರುವುದು ಹೆಮ್ಮೆಯ ವಿಷಯ. ತುರ್ತುಪರಿಸ್ಥಿತಿ ಬಳಿಕ 1978ರಲ್ಲಿ ದಿ. ಇಂದಿರಾಗಾಂಧಿ ಅವರು ನಾಗ್ಪುರದಲ್ಲಿ ಮೊದಲ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ್ದರು. 1980ರ ಚುನಾವಣೆಯಲ್ಲಿ ಕಾಂಗ್ರೆಸ್ ವಿದರ್ಭದಿಂದ ಲೋಕಸಭೆಯ ಎಲ್ಲಾ 11 ಸ್ಥಾನಗಳಲ್ಲಿ ಗೆದ್ದಿತ್ತು ಎಂದರು.
- ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು, ‘ಬಿಜೆಪಿ ಹೇಳುವ ಡಬಲ್ ಎಂಜಿನ್ ಸರ್ಕಾರ ಎಂದರೆ ಅದಾನಿ– ಅಂಬಾನಿ ಅಲ್ಲದೆ ಬೇರೇನಲ್ಲ ಎಂದರು. ಮೋದಿ ಅವರ ಹೆಸರಿನ ಔಷಧದ ಅವಧಿ ಮುಕ್ತಾಯಗೊಂಡಿದೆ. ಕಾಂಗ್ರೆಸ್ ಪುಟಿದೆದ್ದು ಅಧಿಕಾರಕ್ಕೆ ಬರಲಿದೆ ಎಂದರು.

ಸುದ್ದಿ 2 ನಿಮಿಷ

ಬಂಗಾಳದಲ್ಲಿ ಬಿಜೆಪಿ ವಿರುದ್ಧ ಏಕಾಂಗಿ ಹೋರಾಟ: ಮಮತಾ

ಕೋಲ್ಕತ್ತ (ಪಿಟಿಐ): ‘ಪಶ್ಚಿಮ ಬಂಗಾಳದಲ್ಲಿ ಸಿಪಿಎಂ ಮತ್ತು ಕಾಂಗ್ರೆಸ್ ಪಕ್ಷಗಳು ಒಳಸಂಚು ಮಾಡಿ ಬಿಜೆಪಿ ಜತೆ ಸೇರಿಕೊಂಡಿವೆ. ರಾಜ್ಯದಲ್ಲಿ ಬಿಜೆಪಿ ವಿರುದ್ಧ ಟಿಎಂಸಿ ಏಕಾಂಗಿಯಾಗಿ ಹೋರಾಡಲಿದೆ’ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಹೇಳಿದರು.

ಉತ್ತರ 24 ಪರಗಣ ಜಿಲ್ಲೆಯ ದೇಗಂಗಾದಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು. ‘ಇಂಡಿಯಾ’ ಮೈತ್ರಿಕೂಟದ ತಮ್ಮ ಸಹವರ್ತಿ ಪಕ್ಷಗಳ ವಿರುದ್ಧವೇ ಅವರು ವಾಗ್ದಾಳಿ ನಡೆಸಿದರು. ‘ಇಂಡಿಯಾ’ ಮೈತ್ರಿಕೂಟವು ದೇಶದಾದ್ಯಂತ ಬಿಜೆಪಿ ವಿರುದ್ಧ ಹೋರಾಡುತ್ತದೆ. ಆದರೆ ರಾಜ್ಯದಲ್ಲಿ ಬಿಜೆಪಿ ಜೊತೆಗೆ ಕಾಂಗ್ರೆಸ್, ಸಿಪಿಎಂ ಕೂಡಾ ಟಿಎಂಸಿ ವಿರುದ್ಧ ತುರುಸಿನ ಅಭಿಯಾನ ನಡೆಸುತ್ತಿವೆ ಎಂದರು.



‘ಬಿಜೆಪಿಯು ವಿರೋಧ ಪಕ್ಷಗಳಿಗೆ ಕಳ್ಳರು ಎಂದು ಹಣೆಪಟ್ಟಿ ನೀಡುತ್ತಿದೆ. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಕೇಂದ್ರೀಯ ಸಂಸ್ಥೆಗಳು ನಡೆಸುತ್ತಿವೆ. ಬಿಜೆಪಿಯು ‘ಪೌರತ್ವ’ ವಿಷಯವನ್ನು ರಾಜಕೀಯ ಸ್ವಾರ್ಥಕ್ಕೆ ಬಳಸುತ್ತಿದೆ. ಈ ವಿಚಾರದಲ್ಲಿ ಜನರ ಹಾದಿ ತಪ್ಪಿಸುತ್ತಿದೆ ಎಂದು ಅವರು ಆರೋಪಿಸಿದರು.

‘ಈ ಮೊದಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ಪೌರತ್ವಕ್ಕೆ ಸಂಬಂಧಿಸಿದ ವಿಚಾರಗಳನ್ನು ನಿರ್ಧರಿಸುತ್ತಿದ್ದರು. ಈಗ ಆ ಅಧಿಕಾರವನ್ನು ಅವರಿಂದ ಕಸಿಯಲಾಗಿದೆ’ ಎಂದರು. ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಜಾರಿಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ಈಚೆಗಷ್ಟೇ ಅಮಿತ್ ಶಾ ಅವರು ಹೇಳಿಕೆ ನೀಡಿದ್ದರು. ಈ ಬೆನ್ನಲ್ಲೇ ಮಮತಾ ಹೀಗೆ ಹೇಳಿದರು.

ಐ.ಎಸ್ ನಂಟು: 4,000 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಕೆ

ಮುಂಬೈ (ಪಿಟಿಐ): ಐ.ಎಸ್ ಉಗ್ರ ಸಂಘಟನೆಯ ಪರವಾಗಿ ದೇಶದಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗೆ ಉತ್ತೇಜನ ನೀಡಿರುವ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಆರು ಮಂದಿಯ ವಿರುದ್ಧ ಗುರುವಾರ ದೋಷಾರೋಪ ಪಟ್ಟಿ ಸಲ್ಲಿಸಿದೆ.

ತಬಿಶ್ ಸಿದ್ದೀಖಿ, ಜುಲ್ಫಿಕರ್ ಅಲಿ, ಶಾರ್ಜಿಲ್ ಶೇಖ್, ಅಕಿಫ್ ಅತೀಖ್ ನಚಾನ್, ಜುಬೈರ್ ಶೇಖ್ ಮತ್ತು ಅದ್ನಾನಲಿ ಸರ್ಕಾರ್ ಎಂಬವರ ಮೇಲೆ ನಾಲ್ಕು ಸಾವಿರ ಪುಟಗಳ ದೋಷಾರೋಪ ಪಟ್ಟಿಯನ್ನು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಆರೋಪಿಗಳನ್ನು ಎನ್‌ಐಎ ಮಹಾರಾಷ್ಟ್ರದಿಂದ ಜುಲೈನಲ್ಲಿ ಬಂಧಿಸಿತ್ತು. ಈ ಪ್ರಕರಣದಲ್ಲಿ 16 ಮಂದಿ ಸಾಕ್ಷಿದಾರರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೇಶದ ಭದ್ರತೆಗೆ ಧಕ್ಕೆ ಉಂಟುಮಾಡಲು ಮತ್ತು ಕೋಮು ಸಾಮರಸ್ಯ ಕದಡಲು ಆರೋಪಿಗಳು ಯತ್ನಿಸಿದ್ದಾರೆ ಮತ್ತು ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಲು ಹಣ ಸಂಗ್ರಹ ಮಾಡಿದ್ದಾರೆ ಎಂದು ಎನ್‌ಐಎ ಆರೋಪಿಸಿದೆ.

ರಷ್ಯಾ ಭೇಟಿಗೆ ಪ್ರಧಾನಿಗೆ ಆಹ್ವಾನ ನೀಡಿದ ಪುಟಿನ್

ಮಾಸ್ಕೊ (ಪಿಟಿಐ): ರಷ್ಯಾಕ್ಕೆ ಮುಂದಿನ ವರ್ಷ ಭೇಟಿ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಲ್ಲಿನ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಆಹ್ವಾನ ನೀಡಿದ್ದಾರೆ.

‘ನಮ್ಮ ಗೆಳೆಯ ಮೋದಿ ಅವರನ್ನು ರಷ್ಯಾದಲ್ಲಿ ನೋಡಿ ಸಂತೋಷ ಪಡಲಿದ್ದೇವೆ’ ಎಂದು ಪುಟಿನ್ ಅವರು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ತಿಳಿಸಿದ್ದಾರೆ.

ಜೈಶಂಕರ್, ಐದು ದಿನಗಳ ಭೇಟಿಗಾಗಿ ರಷ್ಯಾಕ್ಕೆ ತೆರಳಿದ್ದು, ಅಲ್ಲಿನ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ‘ಮುಂದಿನ ವರ್ಷದ ವಾರ್ಷಿಕ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಮತ್ತು ಪುಟಿನ್ ಅವರು ಭೇಟಿಯಾಗುವ ವಿಶ್ವಾಸ ಇದೆ ಎಂದು ಸರ್ಗೈ ಅವರೂ ಹೇಳಿರುವುದಾಗಿ’ ಜೈಶಂಕರ್ ತಿಳಿಸಿದ್ದಾರೆ.

ರಾಮಮಂದಿರ ಉದ್ಘಾಟನೆಗೆ ಆಮಂತ್ರಣ: ಕಾಂಗ್ರೆಸ್ ಸಂದಿಗ್ಧ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ರಾಮಮಂದಿರ ಉದ್ಘಾಟನಾ ಕಾರ್ಯಕ್ರಮವು ‘ಇಂಡಿಯಾ’ ಮೈತ್ರಿಕೂಟದಲ್ಲಿ ಗೊಂದಲ ಹಾಗೂ ಸಂದಿಗ್ಧ ಪರಿಸ್ಥಿತಿಯನ್ನುಂಟು ಮಾಡಿದೆ. ಕಾಂಗ್ರೆಸ್ ತನ್ನ ನಿರ್ಧಾರವನ್ನು ಇದುವರೆಗೂ ತಿಳಿಸದೇ ಇರುವುದೇ ಇದಕ್ಕೆ ಮುಖ್ಯ ಕಾರಣ. ಬಿಜೆಪಿಯ ಜಾಲದಲ್ಲಿ ಸಿಲುಕಿಕೊಳ್ಳದಂತೆ ಕಾಂಗ್ರೆಸ್‌ಗೆ ಮೈತ್ರಿಕೂಟದ ಇತರ ಪಕ್ಷಗಳು ಎಚ್ಚರಿಕೆಯನ್ನೂ ನೀಡಿವೆ.

ತೃಣಮೂಲ ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಸಿಪಿಎಂ ಪಕ್ಷಗಳು ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡಿವೆ. ‘ಇಂಡಿಯಾ’ದ ಅಂಗ ಪಕ್ಷಗಳ ಈ ನಿರ್ಧಾರವು ಕಾಂಗ್ರೆಸ್‌ಗೆ ಹೆಚ್ಚಿನ ಸಂಕಷ್ಟವನ್ನು ತಂದೊಡ್ಡಿದೆ. ಕಾರ್ಯಕ್ರಮಕ್ಕೆ ಹೋಗುವುದು ಅಥವಾ ಹೋಗದಿರುವುದು ಕಾಂಗ್ರೆಸ್‌ಗೆ ಕಷ್ಟವಾಗಲಿದೆ. ಕೇರಳ ಕಾಂಗ್ರೆಸ್‌ನ ಹಿರಿಯ ನಾಯಕ, ಸಂಸದ ಕೆ.ಮುರಳೀಧರನ್ ಅವರು ‘ಕಾರ್ಯಕ್ರಮದಲ್ಲಿ ಪಕ್ಷವು ಭಾಗವಹಿಸಬಾರದು’ ಎಂದಿದ್ದಾರೆ.

‘ಕೆಲವರು ಈ ವಿಚಾರವನ್ನು ರಾಜಕೀಯಗೊಳಿಸುತ್ತಿದ್ದಾರೆ. ಒಂದು ವೇಳೆ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ಪಕ್ಷವು ಬಿಜೆಪಿ ಹೇಳಿದಂತೆ ಕೇಳಿತು ಎಂದು ಹೇಳುತ್ತಾರೆ. ಕಾರ್ಯಕ್ರಮಕ್ಕೆ ಹೋಗಲಿಲ್ಲ ಎಂದರೆ, ಇವರು ಹಿಂದೂ ವಿರೋಧಿಗಳು ಎನ್ನುತ್ತಾರೆ. ಆದರೆ, ಇದು ಸರಿಯಲ್ಲ. ಕಾರ್ಯಕ್ರಮಕ್ಕೆ ಹೋಗದಿರುವುದು ಹಿಂದೂ ವಿರೋಧಿ ಆಗುವುದಿಲ್ಲ’ ಎನ್ನುತ್ತಾರೆ ಸಂಸದ ಶಶಿ ತರೂರ್. ‘ಪಕ್ಷದ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು’ ಎನ್ನುವುದು ರಾಜ್ಯಸಭಾ ಸದಸ್ಯ ದಿಗ್ವಿಜಯ ಸಿಂಗ್ ಅವರ ಅಭಿಪ್ರಾಯ.



ರಾಮಮಂದಿರ, ಅಯೋಧ್ಯೆಯ ವಿಮಾನ ನಿಲ್ದಾಣದ ಉದ್ಘಾಟನೆಯ ಕಾರಣಕ್ಕಾಗಿ ನಗರದ ಎಲ್ಲೆಡೆ ರಾಮಮಂದಿರ ಹಾಗೂ ವಿಮಾನ ಹಾರಾಟದ ಚಿತ್ರವಿರುವ ದೊಡ್ಡ ಪೋಸ್ಟರ್‌ಗಳನ್ನು ಅಳವಡಿಸಲಾಗಿದೆ – ಪಿಟಿಐ ಚಿತ್ರ

> ಬಿಜೆಪಿಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಯಾರು ಇಚ್ಛಿಸುತ್ತಾರೆ. ಇದು ರಾಷ್ಟ್ರೀಯ ಕಾರ್ಯಕ್ರಮವಲ್ಲ, ಇದು ಬಿಜೆಪಿಯ ಕಾರ್ಯಕ್ರಮ. ಇದರಲ್ಲಿ ಯಾವ ದೈವತ್ವವೂ ಇಲ್ಲ. ಬಿಜೆಪಿ ಕಾರ್ಯಕ್ರಮ ಮುಗಿದ ಬಳಿಕ, ನಾವು ಅಯೋಧ್ಯೆಗೆ ಭೇಟಿ ನೀಡುತ್ತೇವೆ. ಅವರು ರಾಮನನ್ನು ಅಪಹರಿಸಿದ್ದಾರೆ ಎನ್ನುವಂತಿದೆ
> **ಸಂಜಯ್ ರಾವುತ್,** ಶಿವಸೇನಾ (ಉದ್ಧವ್ ಬಣ) ನಾಯಕ

> ನಮಗೆ ಇದುವರೆಗೂ ಆಮಂತ್ರಣ ಬಂದಿಲ್ಲ. ಒಂದು ವೇಳೆ ಬಂದರೆ ಕಾರ್ಯಕ್ರಮಕ್ಕೆ ಹೋಗುತ್ತೇವೆ. ಇಲ್ಲವಾದಲ್ಲಿ, ಉದ್ಘಾಟನೆಯಾದ ಬಳಿಕ ಒಂದು ದಿನ ಅಖಿಲೇಶ್ ಯಾದವ್ ಅವರು ಅಯೋಧ್ಯೆಗೆ ಹೋಗುತ್ತಾರೆ
> **ಡಿಂಪಲ್ ಯಾದವ್,** ಎಸ್‌ಪಿ ನಾಯಕಿ

> ನನಗೆ ಇದುವರೆಗೂ ಆಮಂತ್ರಣ ಬಂದಿಲ್ಲ. ಒಂದು ವೇಳೆ ಆಮಂತ್ರಣ ಬಂದರೆ, ಕಾರ್ಯಕ್ರಮಕ್ಕೆ ಹೋಗುತ್ತೇನೆ
> **ಹೇಮಂತ್ ಸೊರೇನ್,** ಜಾರ್ಖಂಡ್ ಮುಖ್ಯಮಂತ್ರಿ

> ಮಾರ್ಕ್ಸ್‌ವಾದಿ ಪಕ್ಷ, ಎಡರಂಗ ಪಕ್ಷಗಳು, ಕೆಲವು ಧಾರ್ಮಿಕ ನಾಯಕರು ಒಡ್ಡಿರುವ ಬೆದರಿಕೆಗೆ ಕಾಂಗ್ರೆಸ್ ಬಗ್ಗುತ್ತದೆಯೇ?
> **ಕೆ.ಸುರೇಂದ್ರನ್,** ಕೇರಳದ ಬಿಜೆಪಿ ಘಟಕ ಅಧ್ಯಕ್ಷ

‘ಹೆಸರಾಂತ ಪತ್ರಕರ್ತರ ವಿರುದ್ಧ ಕೇಂದ್ರದಿಂದ ಪೆಗಾಸಸ್ ಬಳಕೆ’

ನವದೆಹಲಿ (ಎಎಫ್‌ಪಿ): ಹೆಸರಾಂತ ಪತ್ರಕರ್ತರನ್ನು ಮತ್ತೊಮ್ಮೆ ಗುರಿಯಾಗಿಸಿಕೊಂಡು ಕೇಂದ್ರ ಸರ್ಕಾರವು ಪೆಗಾಸಸ್ ಕುತಂತ್ರಾಂಶ ಬಳಸಿದೆ ಎಂದು ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಮತ್ತು ‘ವಾಷಿಂಗ್ಟನ್ ಪೋಸ್ಟ್’ ಗುರುವಾರ ಪ್ರಕಟಿಸಿರುವ ಜಂಟಿ ತನಿಖಾ ವರದಿಯಲ್ಲಿ ಹೇಳಿವೆ.



‘ದಿ ವೈರ್’ನ ಪತ್ರಕರ್ತ ಸಿದ್ಧಾರ್ಥ್ ವರದರಾಜನ್ ಮತ್ತು ‘ದಿ ಆರ್ಗನೈಸ್ಡ್ ಕ್ರೈಮ್ ಅಂಡ್ ಕರಪ್ಷನ್ ರಿಪೋರ್ಟಿಂಗ್ ಪ್ರಾಜೆಕ್ಟ್’ನ ಆನಂದ್ ಮಂಗ್ನಾಲೆ ಅವರ ಐಫೋನ್‌ಗಳು ಪೆಗಾಸಸ್ ಕುತಂತ್ರಾಂಶಕ್ಕೆ ಗುರಿಯಾಗಿವೆ ಎಂದು ಆಮ್ನೆಸ್ಟಿ ಹೇಳಿದೆ.

ಇತ್ತೀಚೆಗೆ ಗುರುತಿಸಲಾದ ಪೆಗಾಸಸ್ ಕುತಂತ್ರಾಂಶ ಬಳಕೆಯ ಪ್ರಕರಣವು ಅಕ್ಟೋಬರ್‌ನಲ್ಲಿ ನಡೆದಿದೆ ಎಂದು ಅದು ಹೇಳಿದೆ. ಕೇಂದ್ರ ಸರ್ಕಾರವು ಈ ವರದಿಗೆ ತಕ್ಷಣಕ್ಕೆ ಪ್ರತಿಕ್ರಿಯಿಸಿಲ್ಲ.

2021ರಲ್ಲಿ ಪತ್ರಕರ್ತರು, ವಿರೋಧ ಪಕ್ಷದ ರಾಜಕಾರಣಿಗಳು ಮತ್ತು ಸಾಮಾಜಿಕ ಕಾರ್ಯಕರ್ತರ ಮೇಲೆ ನಿಗಾ ಇಡಲು ಪೆಗಾಸಸ್ ಅನ್ನು ಕೇಂದ್ರ ಬಳಸಿಕೊಂಡಿದೆ. ಸೋರಿಕೆಯಾದ ದಾಖಲೆಗಳ ಪ್ರಕಾರ, ಇದನ್ನು 1,000ಕ್ಕೂ ಹೆಚ್ಚು ಭಾರತೀಯ ಫೋನ್ ಸಂಖ್ಯೆಗಳ ವಿರುದ್ಧ ಬಳಸಲಾಗಿದೆ ಎಂದು ಆರೋಪಿಸಲಾಗಿದೆ

ಇಸ್ರೇಲ್‌ನ ಎನ್‌ಎಸ್‌ಒ ಸಮೂಹದ ಈ ಕುತಂತ್ರಾಂಶವನ್ನು ಸರ್ಕಾರಗಳು ಅಥವಾ ಭದ್ರತಾ ಏಜೆನ್ಸಿಗಳಿಗೆ ಮಾತ್ರ ಮಾರಾಟ ಮಾಡಲಾಗುತ್ತದೆ. ಭಾರತ ಸೇರಿದಂತೆ ಹತ್ತಾರು ದೇಶಗಳಲ್ಲಿ ಪತ್ರಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರ ವಿರುದ್ಧ ಈ ಕುತಂತ್ರಾಂಶವನ್ನು ವ್ಯಾಪಕವಾಗಿ ಬಳಸಲಾಗಿದೆ ಎಂದು ತನಿಖಾ ವರದಿಯಲ್ಲಿ ಹೇಳಲಾಗಿದೆ.

ಕತಾರ್: ಮರಣದಂಡನೆಯಿಂದ ಎಂಟು ಭಾರತೀಯರು ಪಾರು

ಒಂದನೇ ಪುಟದಿಂದ...

ನವತೇಜ್ ಗಿಲ್ ಅವರು ನೌಕಾಪಡೆಯ ಅಕಾಡೆಮಿಯಲ್ಲಿ ಪದವಿ ಪಡೆದಾಗ ರಾಷ್ಟ್ರಪತಿ ಚಿನ್ನದ ಪದಕ ಪುರಸ್ಕೃತರಾಗಿದ್ದಾರೆ.

ವಿವರವಾದ ತೀರ್ಪು ನಿರೀಕ್ಷೆಯಲ್ಲಿ: ಶಿಕ್ಷೆಯನ್ನು ಎಷ್ಟು ಕಡಿಮೆ ಮಾಡಲಾಗಿದೆ ಎಂದು ಭಾರತೀಯ ವಿದೇಶಾಂಗ ಸಚಿವಾಲಯ ತಿಳಿಸಿಲ್ಲ.

‘ತೀರ್ಪು ಪ್ರಕಟಿಸುವ ವೇಳೆ, ಶಿಕ್ಷೆಗೆ ವಿಧಿಸಲಾದ ಮಾಜಿ ಅಧಿಕಾರಿಗಳ ಕುಟುಂಬ ಸದಸ್ಯರು, ರಾಜತಾಂತ್ರಿಕರು ನ್ಯಾಯಾಲಯದಲ್ಲಿ ಹಾಜರಿದ್ದರು. ಈ ವಿಷಯದಲ್ಲಿ ನಾವು ಮೊದಲಿನಿಂದಲೂ ಅವರ ಪರ ನಿಂತಿದ್ದೇವೆ. ನಮ್ಮ ರಾಜತಾಂತ್ರಿಕ, ಕಾನೂನು ನೆರವು ಮುಂದುವರಿಯಲಿದೆ. ಕತಾರ್‌ನ ಅಧಿಕಾರಿಗಳ ಜತೆಗೂ ಈ ಬಗ್ಗೆ ಚರ್ಚಿಸುತ್ತೇವೆ’ ಎಂದು ಸಚಿವಾಲಯ ಹೇಳಿದೆ.

> ಈ ಪ್ರಕ್ರಿಯೆಯು ಅತ್ಯಂತ ಸೂಕ್ಷ್ಮ ಮತ್ತು ಗೋಪ್ಯತೆಯಿಂದ ಕೂಡಿದ್ದಾಗಿದೆ. ಇದರಿಂದ ಯಾವುದೇ ಹಂತದಲ್ಲೂ ಈ ಬಗ್ಗೆ ಹೆಚ್ಚಿನ ಮಾಹಿತಿ ಬಹಿರಂಗಪಡಿಸಲು ಸಾಧ್ಯವಿಲ್ಲ
> **ಭಾರತೀಯ ವಿದೇಶಾಂಗ ಸಚಿವಾಲಯ**

ರಾಜತಾಂತ್ರಿಕ ಗೆಲುವು

ಮರಣ ದಂಡನೆ ಶಿಕ್ಷೆಯನ್ನು ತಗ್ಗಿಸಿರುವುದು ಭಾರತಕ್ಕೆ ದೊರೆತ ದೊಡ್ಡ ರಾಜತಾಂತ್ರಿಕ ಗೆಲುವು ಎಂದು ಪರಿಗಣಿಸಲಾಗಿದೆ. ದುಬೈನಲ್ಲಿ ನಡೆದ ಸಿಒಪಿ28 ಶೃಂಗಸಭೆಯ ವೇಳೆ ಡಿಸೆಂಬರ್ 1ರಂದು ಕತಾರ್ ದೊರೆ ಶೇಖ್ ತಮೀಮ್ ಬಿನ್ ಹಮದ್ ಅಲ್ ಥನಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಭೇಟಿಯಾಗಿದ್ದರು. ಉಭಯ ನಾಯಕರ ಮಾತುಕತೆಯ ನಂತರ, ‘ಕತಾರ್‌ನಲ್ಲಿರುವ ಭಾರತೀಯ ಸಮುದಾಯದವರ ಯೋಗಕ್ಷೇಮದ ಬಗ್ಗೆ ಚರ್ಚಿಸಿದ್ದೇವೆ’ ಎಂದೂ ಮೋದಿ ಹೇಳಿದ್ದರು.

ರಾಜೀನಾಮೆ ವದಂತಿ ಅಲ್ಲಗಳೆದ ಲಲನ್ ಸಿಂಗ್

ನವದೆಹಲಿ (ಪಿಟಿಐ): ಜನತಾದಳ (ಸಂಯುಕ್ತ) ಅಧ್ಯಕ್ಷ ಸ್ಥಾನಕ್ಕೆ ತಾವು ರಾಜೀನಾಮೆ ನೀಡಬಹುದೆಂಬ ವರದಿಗಳನ್ನು ಲಲನ್ ಸಿಂಗ್ ಎಂದೇ ಜನಪ್ರಿಯರಾಗಿರುವ ರಾಜೀವ್ ರಂಜನ್ ಸಿಂಗ್ ಅಲ್ಲಗಳೆದರು. ಆಡಳಿತಾರೂಢ ಬಿಜೆಪಿ ಪರ ಮಾಧ್ಯಮದವರು ಹೆಣೆದಿರುವ ಕಟ್ಟು ಕತೆ ಇದು ಎಂದರು.

ಜೆಡಿ (ಯು) ಪಕ್ಷದ ರಾಷ್ಟ್ರದ ಕಾರ್ಯಕಾರಿಣಿ ಸಭೆಗೆ ಮೊದಲು ಪಕ್ಷದ ಅಧ್ಯಕ್ಷ ಸ್ಥಾನದಿಂದ ಅವರು ಕೆಳಗಿಳಿಯಬಹುದೆಂಬ ವದಂತಿಗಳ ನಡುವೆಯೇ ಅವರು, ‘ನಾನು ರಾಜೀನಾಮೆ ನೀಡಬೇಕೆಂದಿದ್ದರೆ, ಮಾಧ್ಯಮದವರನ್ನು ಕರೆದು ಪತ್ರದಲ್ಲಿ ಏನು ಬರೆಯಬೇಕೆಂದು ಸಲಹೆ ಕೇಳುತ್ತೇನೆ. ಆಗ ನೀವು ಬಿಜೆಪಿ ಕಚೇರಿಗೆ ಹೋಗಿ ಏನು ಬರೆಯಬೇಕೆಂಬ ಬಗ್ಗೆ ಮಾಹಿತಿ ತರಬಹುದು’ ಎಂದು ಹೇಳಿದರು.

ಕೇಂದ್ರ ಗಾಜಾಕ್ಕೂ ದಾಳಿ ವಿಸ್ತರಣೆ

ಇಸ್ರೇಲ್ ದಾಳಿಗೆ 25 ಮಂದಿ ಸಾವು

ಜೆರುಸಲೇಂ (ಎಪಿ): ಗಾಜಾದ ನಗರಗಳು, ಪಟ್ಟಣಗಳು ಮತ್ತು ನಿರಾಶ್ರಿತರ ಕೇಂದ್ರಗಳ ಮೇಲೆ ಇಸ್ರೇಲ್ ಪಡೆಗಳು ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಿವೆ.

ಬುಧವಾರ, ಗುರುವಾರ ರಾತ್ರಿಯಿಡೀ ಇಸ್ರೇಲ್ ಪಡೆಗಳು ಬಾಂಬ್‌ಗಳ ಸುರಿಮಳೆಗೈದಿವೆ. ದೀರ್ ಅಲ್–ಬಲಾಹ್ ಪಟ್ಟಣದ ಬಳಿ ಐವರು ಮಕ್ಕಳು, ಏಳು ಮಹಿಳೆಯರು ಸೇರಿ 25 ಮಂದಿ ಬಲಿಯಾಗಿದ್ದಾರೆ.

‘ರಾತ್ರಿಯಿಡೀ ನರಮೇಧ ನಡೆದಿದೆ. ವಾಯುದಾಳಿಗೆ ಒಳಗಾದ ನಿರಾಶ್ರಿತರ ಕೇಂದ್ರದಲ್ಲಿದ್ದವರ ಆಕ್ರಂದನ ಮುಗಿಲು ಮುಟ್ಟಿತ್ತು. ಆದರೆ, ಅವರನ್ನು ಸುರಕ್ಷಿತವಾಗಿ ಹೊರತರಲು ಅಗತ್ಯವಿರುವ ಸಾಧನ ಇರಲಿಲ್ಲವಾದ್ದರಿಂದ, ಅವರನ್ನು ಹೊರಗೆ ಕರೆತರಲು ಸಾಧ್ಯವಾಗಲಿಲ್ಲ’ ಎಂದು ನುಸೀರತ್ ಪ್ರದೇಶದ ನಿವಾಸಿ ಸಯೀದ್ ಮುಸ್ತಾಫಾ ಹೇಳಿದ್ದಾರೆ.

ಈ ಭಾಗದಲ್ಲಿ ನೆಲೆಕಂಡುಕೊಂಡಿದ್ದ ಸಾವಿರಾರು ಮಂದಿ ತಮ್ಮ ಮನೆಗಳು ಮತ್ತು ನಿರಾಶ್ರಿತರ ಕೇಂದ್ರಗಳನ್ನು ಈಜಿಪ್ಟ್ ಗಡಿ ಮತ್ತು ದಕ್ಷಿಣ ಮೆಡಿಟರೇನಿಯನ್ ಕರಾವಳಿ ಪ್ರದೇಶದಲ್ಲಿರುವ ವಲಸಿಗರ ಕೇಂದ್ರಗಳತ್ತ ಗುಳೆ ಹೊರಟಿದ್ದಾರೆ ಎಂದು ವರದಿಗಳು ತಿಳಿಸಿವೆ.




ದಕ್ಷಿಣ ಗಾಜಾ ಪಟ್ಟಿಯ ರಫಾ ನಗರದ ಮೇಲೆ ಬುಧವಾರ ರಾತ್ರಿ ಇಸ್ರೇಲ್ ನಡೆಸಿದ ಬಾಂಬ್ ದಾಳಿಯಿಂದ ದಟ್ಟ ಹೊಗೆ ಆವರಿಸಿತ್ತು – ಎಎಫ್‌ಪಿ ಚಿತ್ರ

ಈ ಯುದ್ಧದಲ್ಲಿ ಪ್ಯಾಲೆಸ್ಟೀನ್‌ನ 20 ಸಾವಿರಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಅಲ್ಲದೆ ಉತ್ತರ ಗಾಜಾದಲ್ಲಿದ್ದ 23 ಲಕ್ಷ ಜನರ ಪೈಕಿ ಶೇ 85ರಷ್ಟು ಮಂದಿ ಇತರೆ ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ. ಇದೇ ರೀತಿಯ ಪರಿಸ್ಥಿತಿ ದಕ್ಷಿಣದಲ್ಲೂ ಎದುರಾಗಬಹುದು ಎಂದು ಹಲವರು ಆತಂಕ ವ್ಯಕ್ತಪಡಿಸಿದ್ದಾರೆ.

ಯುದ್ಧ ವಿಮಾನಗಳ ಹಾರಾಟ: ಕೇಂದ್ರ ಗಾಜಾದಲ್ಲಿ ಇಸ್ರೇಲ್ ಯುದ್ಧ ವಿಮಾನಗಳು ಹಾರಾಡುತ್ತಿದ್ದರೆ, ಬುರೀಜ್ ಮತ್ತು ನುಸೀರತ್ ನಿರಾಶ್ರಿತರ ಕ್ಯಾಂಪ್‌ಗಳ ಬಳಿ ಫಿರಂಗಿದಾಣಗಳನ್ನು ನಿರ್ಮಿಸಲಾಗಿದೆ ಎಂದು ಸ್ಥಳೀಯ ನಿವಾಸಿಗಳು ಹೇಳಿದ್ದಾರೆ. ಮತ್ತೊಂದೆಡೆ ಈ ದಾಳಿಯನ್ನು ಕೇಂದ್ರ ಗಾಜಾಕ್ಕೂ ವಿಸ್ತರಿಸುವುದಾಗಿ ಇತ್ತೀಚೆಗಷ್ಟೇ ತಿಳಿಸಿರುವ ಇಸ್ರೇಲ್, ಯುದ್ಧ ಟ್ಯಾಂಕರ್‌ಗಳು ಮತ್ತು ಸೇನಾಪಡೆಗಳು ಕೇಂದ್ರ ಗಾಜಾಕ್ಕೆ ತೆರಳುವ ಮುನ್ನ ವೈಮಾನಿಕ ಮತ್ತು ಶೆಲ್ ದಾಳಿ ನಡೆಸಿದೆ.

ಆಹಾರ ಕೊರತೆ: ‘ಗಾಜಾದ ನಾಲ್ವರ ಪೈಕಿ ಒಬ್ಬರು ಹಸಿವಿನಿಂದ ಬಳಲುವಂತಾಗಿದೆ’ ಎಂದು ವಿಶ್ವಸಂಸ್ಥೆಯ ಅಧಿಕಾರಿಗಳು ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,654
ಇಂದಿನ ಅಂತ್ಯ	21,778
▲	123
ದಿನದ ಗರಿಷ್ಠ	21,787

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹625
12 ಮೊಟ್ಟೆಗೆ	₹82
ಮೈಸೂರು	
100 ಮೊಟ್ಟೆಗೆ	₹625

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1610)
ಸೋಯಾ (ರಿಫೈನ್ಡ್)	₹875 (875)
ಸೂರ್ಯಕಾಂತಿ (ರಿಫೈನ್ಡ್)	₹890 (890)
ಪಾಮೋಲಿನ್	₹818 (820)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹307-465
ದ್ವಿತಳಿ (ಬಿ.ವಿ)	₹356-578

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151.00
ಆರ್‌ಎಸ್‌ಎಸ್-5	₹147.00
ಗುಡ್ ಲಾಟ್	₹130.00

ವಿನಿಮಯ ದರ

$ ಡಾಲರ್	83.20
£ ಪೌಂಡ್	106.44
€ ಯುರೊ	92.59
¥ ಯೆನ್ (100ಕ್ಕೆ)	59

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹8159-8200
ಪುತ್ತೂರು	₹5500-9200
ತಿಪಟೂರು	₹7000-8500
ತುರುವೇಕೆರೆ	₹8000-8300

ಮುಂಬೈ ಧಾರಣೆ

ಶೇಂಗಾ

28-12-2023

ಜಾವಾ 70/80(ಹೊಸ)	12300-11700
ಜಾವಾ 80/90(ಹೊಸ)	11000-10800
ದಪ್ಪ ಮಧ್ಯಪ್ರದೇಶ(ಹೊಸ)	9900-9900
ದಪ್ಪ ಗುಜರಾತ್(ಹೊಸ)	10900-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1610)
ಒಂದು ವಾರದ ಡೆಲಿವರಿ	1625 (1600)
ಸೋಯಾ ಕಚ್ಚಾ	835 (832)
ಪಾಮ್ ವಾರದ ಡೆಲಿವರಿ	820 (820)
ಸೂರ್ಯಕಾಂತಿ ಎಣ್ಣೆ ಕಚ್ಚಾ	815 (820)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
63,300 (62,800)
ಬೆಳ್ಳಿ ಕೆ.ಜಿ 74,700 (74,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಭಾರತ್ ಬ್ರ್ಯಾಂಡ್‌ನಡಿ ಮಾರಾಟಕ್ಕೆ ನಿರ್ಧಾರ ● ಇನ್ನೂ ನಿಗದಿಯಾಗದ ಬೆಲೆ

ಅಕ್ಕಿ ದರ ಇಳಿಕೆಗೆ ಕಸರತ್ತು

ನವದೆಹಲಿ (ಪಿಟಿಐ): ದೇಶದಲ್ಲಿ ಅಕ್ಕಿ ತುಟ್ಟಿಯಾಗುತ್ತಿರುವ ಬೆನ್ನಲ್ಲೇ ಭಾರತೀಯ ಆಹಾರ ನಿಗಮದ ದಾಸ್ತಾನಿನಲ್ಲಿರುವ ಅಕ್ಕಿಯನ್ನು 'ಭಾರತ್ ಬ್ರ್ಯಾಂಡ್' ಹೆಸರಿನಡಿ ಮಾರಾಟ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಆದರೆ, ಒಂದು ಕೆ.ಜಿ ಅಕ್ಕಿಗೆ ಎಷ್ಟು ದರ ನಿಗದಿಪಡಿಸಬೇಕು ಎಂಬುದು ಇನ್ನೂ ನಿರ್ಧಾರವಾಗಿಲ್ಲ ಎಂದು ಕೇಂದ್ರ ಆಹಾರ ಸಚಿವಾಲಯ ಹೇಳಿದೆ.

ಅಕ್ಕಿಯ ವಾರ್ಷಿಕ ಹಣದುಬ್ಬರವು ಶೇ 13ರಷ್ಟಿದೆ. ಅಲ್ಲದೇ, ಲೋಕಸಭೆಯ ಮುಂಬರುವ ಚುನಾವಣೆಯಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆಯೇ ಚರ್ಚಾ ವಿಷಯವಾಗುವ ಸಾಧ್ಯತೆಯಿದೆ. ಹಾಗಾಗಿ, ಚಿಲ್ಲರೆ ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ಅಕ್ಕಿ ಮಾರಾಟಕ್ಕೆ ಕೇಂದ್ರ ಮುಂದಾಗಿದೆ ಎಂದು ಹೇಳಲಾಗಿದೆ.

ಈಗಾಗಲೇ, ಕೇಂದ್ರವು ಭಾರತ್ ಬ್ರ್ಯಾಂಡ್ ಹೆಸರಿನಡಿ ಗೋಧಿ ಹಿಟ್ಟು ಹಾಗೂ ಬೇಳೆಯನ್ನು ಮಾರಾಟ ಮಾಡುತ್ತಿದೆ. ನೋಡಲ್ ಏಜೆನ್ಸಿಗಳಾದ ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ (ನಾಫೆಡ್) ಮತ್ತು ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳವು (ಎನ್‌ಸಿಸಿಎಫ್) ಭಾರತ್ ಬ್ರ್ಯಾಂಡ್‌ನ ಮಾರಾಟ ಮಳಿಗೆಗಳ ನಿರ್ವಹಣೆಯ ಹೊಣೆ ಹೊತ್ತಿವೆ.

ದೇಶೀಯ ಮಾರುಕಟ್ಟೆಯಲ್ಲಿ ಅಕ್ಕಿಯ ಚಿಲ್ಲರೆ ಧಾರಣೆ ಹೆಚ್ಚುತ್ತಿದೆ. ಹಾಗಾಗಿ, ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ (ಒಎಂಎಸ್‌ಎಸ್) ಇ-ಟೆಂಡರ್ ಮೂಲಕ ಅಕ್ಕಿ ಮಾರಾಟಕ್ಕೆ ನಿಗಮವು ಮುಂದಾಗಿತ್ತು. ಆದರೆ, ಇದಕ್ಕೆ ನಿರೀಕ್ಷಿತಮಟ್ಟದಲ್ಲಿ ಖರೀದಿಯ ಉತ್ಸಾಹ ಕಂಡುಬರಲಿಲ್ಲ.

'ಚಿಲ್ಲರೆ ದರದಡಿ ಭಾರತ್ ಬ್ರ್ಯಾಂಡ್ ಹೆಸರಿನಲ್ಲಿ ಅಕ್ಕಿ ಮಾರಾಟಕ್ಕೆ ಪ್ರಸ್ತಾವ ಸಲ್ಲಿಕೆಯಾಗಿದೆ' ಎಂದು ಅಧಿಕಾರಿ ಒಬ್ಬರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಒಎಂಎಸ್‌ಎಸ್‌ನಡಿ ನಿಗಮವು ಗುಣಮಟ್ಟದ ಒಂದು ಕೆ.ಜಿ ಅಕ್ಕಿಗೆ ₹29 ಕನಿಷ್ಠ ಬೆಲೆ ನಿಗದಿಪಡಿಸಿತ್ತು. ಭಾರತ್ ಅಕ್ಕಿಯನ್ನು ಇದೇ ದರದಲ್ಲಿ ಮಾರಾಟ ಮಾಡಬಹುದು ಅಥವಾ ಇದಕ್ಕಿಂತಲೂ ದರ ಇಳಿಕೆಯಾಗಬಹುದು. ಕೇಂದ್ರ ಆಹಾರ ಸಚಿವರು ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

ಮುಖ್ಯಾಂಶಗಳು


- ಅಕ್ಕಿಯ ವಾರ್ಷಿಕ ಹಣದುಬ್ಬರ ಶೇ 13ಕ್ಕೆ ಹೆಚ್ಚಳ
- ಚುನಾವಣೆಗೂ ಮುನ್ನ ದರ ಇಳಿಸಲು ಕೇಂದ್ರ ಸರ್ಕಸ್
- ನಿಗಮವು ಒಎಂಎಸ್‌ಎಸ್ ನಡಿ ಕೆ.ಜಿಗೆ ನಿಗದಿಪಡಿಸಿದ್ದ ಮೊತ್ತ ₹29



3.04 ಲಕ್ಷ ಟನ್ ಮಾರಾಟಕ್ಕೆ ನಿರ್ಧಾರ

ಭಾರತೀಯ ಆಹಾರ ನಿಗಮವು ಪ್ರಸಕ್ತ ವರ್ಷದಲ್ಲಿ ಒಎಂಎಸ್‌ಎಸ್ ನಡಿ 3.04 ಲಕ್ಷ ಟನ್ ಅಕ್ಕಿ ಮಾರಾಟ ಮಾಡಲಿದೆ. ಅಲ್ಲದೇ, ಈ ಯೋಜನೆಯಡಿ ನೋಡಲ್ ಏಜೆನ್ಸಿಯು 82.89 ಲಕ್ಷ ಟನ್‌ನಷ್ಟು ಗೋಧಿಯನ್ನು ಮಾರಾಟ ಮಾಡಿದೆ ಎಂದು ಕೇಂದ್ರ ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ.

ಜಾಗತಿಕ ಹತ್ತರಲ್ಲಿ ಸ್ಥಾನ: ರಿಲಯನ್ಸ್ ಗುರಿ– ಮುಕೇಶ್



ನವದೆಹಲಿ (ಪಿಟಿಐ): 'ವಿಶ್ವದ ಅತಿದೊಡ್ಡ ತೈಲ ಸಂಸ್ಕರಣಾ ಸಮುಚ್ಚಯ ನಿರ್ಮಾಣದಿಂದ ಹಿಡಿದು ದೇಶದ ಅತಿದೊಡ್ಡ ಮೊಬೈಲ್ ನೆಟ್‌ವರ್ಕ್ ಆಪರೇಟರ್ ಆಗಿ ರಿಲಯನ್ಸ್ ಇಂಡಸ್ಟ್ರೀಸ್ ಬೆಳೆದಿದೆ. ನಮಗೆ ಇಷ್ಟಕ್ಕೇ ಸಂತೃಪ್ತಿ ಆಗುವುದಿಲ್ಲ. ವಿಶ್ವದ ಪ್ರಮುಖ ಹತ್ತು ಉದ್ಯಮ ಸಮೂಹಗಳಲ್ಲಿ ಒಂದಾಗಿ ಬೆಳೆಯಬೇಕಿದೆ' ಎಂದು ಉದ್ಯಮಿ ಮುಕೇಶ್ ಅಂಬಾನಿ ಆಶಿಸಿದ್ದಾರೆ.

ರಿಲಯನ್ಸ್ ಸಮೂಹದ ಸ್ಥಾಪಕ ಧೀರೂಭಾಯಿ ಅಂಬಾನಿ ಅವರ ಜನ್ಮ ದಿನದ ಅಂಗವಾಗಿ ಗುರುವಾರ ನಡೆದ ರಿಲಯನ್ಸ್ ಕುಟುಂಬ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಡಿಜಿಟಲ್ ದತ್ತಾಂಶ ವೇದಿಕೆ ಮತ್ತು ಕೃತಕ ಬುದ್ಧಿಮತ್ತೆ (ಎ.ಐ) ಅಳವಡಿಕೆಗೆ ಸಂಬಂಧಿಸಿದಂತೆ ಜಾಗತಿಕ ನಾಯಕರ ಪಟ್ಟಿಯಲ್ಲಿ ರಿಲಯನ್ಸ್ ಕೂಡ ಸ್ಥಾನ ಪಡೆಯುವ ಗುರಿ ಹೊಂದಿದೆ ಎಂದರು.

ಸೆನ್ಸೆಕ್ಸ್ 371, ನಿಫ್ಟಿ 123 ಅಂಶ ಏರಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ, ಸಾರ್ವಕಾಲಿಕ ಮಟ್ಟದಲ್ಲಿ ಗುರುವಾರ ವಹಿವಾಟನ್ನು ಅಂತ್ಯಗೊಳಿಸಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಇಳಿಕೆ, ವಿದೇಶಿ ಹಣದ ಒಳಹರಿವು ಹೆಚ್ಚಳ ಸೇರಿದಂತೆ ಜಾಗತಿಕ ಮಟ್ಟದಲ್ಲಿನ ಸಕಾರಾತ್ಮಕ ಬೆಳವಣಿಗೆಗಳು ಷೇರುಪೇಟೆಯಲ್ಲಿ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿವೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಇಂಧನ, ಲೋಹ ಹಾಗೂ ಎಫ್‌ಎಂಸಿಜಿ ಗಳಿಕೆಯು ಸೂಚ್ಯಂಕಗಳ ಏರಿಕೆಗೆ ಮುನ್ನುಡಿ ಬರೆದವು.

ಸೆನ್ಸೆಕ್ಸ್ 371 ಅಂಶ ಏರಿಕೆ ಕಂಡು ಸಾರ್ವಕಾಲಿಕ ಮಟ್ಟವಾದ 72,410ಕ್ಕೆ ತಲುಪಿತು. ದಿನದ ಆರಂಭಿಕ ವಹಿವಾಟಿನಲ್ಲಿ 445 ಅಂಶ ಏರಿಕೆ ಕಂಡು, 72,484 ಅಂಶಕ್ಕೆ ಮುಟ್ಟಿತ್ತು.

ನಿಫ್ಟಿ 123 ಅಂಶ ಹೆಚ್ಚಾಗಿ 21,778 ಅಂಶಗಳಲ್ಲಿ ಸಾರ್ವಕಾಲಿಕ ಮಟ್ಟ ದಾಖಲಿಸಿತು. ಸತತ ಐದು ದಿನಗಳ ಏರಿಕೆಯ ಅಂತರದಲ್ಲಿ ಸೆನ್ಸೆಕ್ಸ್ 1,904 ಅಂಶ (ಶೇ 2.70) ಏರಿಕೆಯಾಗಿದ್ದರೆ, ನಿಫ್ಟಿ 628 ಅಂಶ ಏರಿಕೆ (ಶೇ 2.97) ಕಂಡಿದೆ. ಹೂಡಿಕೆದಾರರ ಸಂಪತ್ತು ₹12.80 ಲಕ್ಷ ಕೋಟಿ ಹೆಚ್ಚಳವಾಗಿದೆ.

ರೂಪಾಯಿ ಏರಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿನ ಗುರುವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 14 ಪೈಸೆ ಹೆಚ್ಚಾಗಿದೆ. ಪ್ರತಿ ಒಂದು ಡಾಲರ್‌ಗೆ ₹83.20ರಂತೆ ವಿನಿಮಯಗೊಂಡಿತು.

ಕಳೆದ ಎರಡು ದಿನಗಳಿಂದ ರೂಪಾಯಿ ಮೌಲ್ಯ ಕುಸಿದಿತ್ತು.

ವಿದೇಶಿ ಹೂಡಿಕೆಯ ಒಳಹರಿವು ಹೆಚ್ಚಳ ಹಾಗೂ ಕಚ್ಚಾ ತೈಲದ ಬೆಲೆ ಇಳಿಕೆಯು ರೂಪಾಯಿ ಚೇತರಿಕೆಗೆ ನೆರವಾಗಿದೆ ಎಂದು ವಿದೇಶಿ ವಿನಿಮಯ ಮಾರುಕಟ್ಟೆಯ ವಿಶ್ಲೇಷಕರು ತಿಳಿಸಿದ್ದಾರೆ.

₹401 ಕೋಟಿ ಜಿಎಸ್‌ಟಿ ಬಾಕಿ: ಜೊಮಾಟೊಗೆ ಷೋಕಾಸ್ ನೋಟಿಸ್

ನವದೆಹಲಿ (ಪಿಟಿಐ): ಆನ್‌ಲೈನ್ ಆಹಾರ ವಿತರಣಾ ಸಂಸ್ಥೆಯಾದ ಜೊಮಾಟೊ ಲಿಮಿಟೆಡ್‌ಗೆ ₹401.7 ಕೋಟಿ ಜಿಎಸ್‌ಟಿ ಪಾವತಿ ಬಾಕಿ ಸಂಬಂಧ ಪುಣೆ ವಿಭಾಗದ ಜಿಎಸ್‌ಟಿ ಗುಪ್ತಚರ ಮಹಾ ನಿರ್ದೇಶನಾಲಯವು ಷೋಕಾಸ್ ನೋಟಿಸ್ ನೀಡಿದೆ.

ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಸೆಕ್ಷನ್ 74(1) ಅನ್ವಯ ಈ ನೋಟಿಸ್ ಜಾರಿಗೊಳಿಸಲಾಗಿದೆ.

2019ರ ಅಕ್ಟೋಬರ್ 29ರಿಂದ 2022ರ ಮಾರ್ಚ್ 31ರವರೆಗೆ ತೆರಿಗೆ ಸೇರಿದಂತೆ ಬಡ್ಡಿ ಹಾಗೂ ದಂಡವನ್ನು ಈ ಮೊತ್ತ ಒಳಗೊಂಡಿದೆ. ನಿಗದಿತ ಅವಧಿಯಲ್ಲಿ ವಿತರಣಾ ಪಾಲುದಾರರ ಪರವಾಗಿ ಜೊಮಾಟೊ ಕಂಪನಿಯೇ ಗ್ರಾಹಕರಿಂದ ಈ ಶುಲ್ಕ ಸಂಗ್ರಹಿಸಿದೆ ಎಂದು ನೋಟಿಸ್‌ನಲ್ಲಿ ಪ್ರಸ್ತಾಪಿಸಲಾಗಿದೆ.


ಇದು ಕಂಪನಿ ಪಾವತಿಸಬೇಕಿರುವ ಬಾಕಿ ಮೊತ್ತವಲ್ಲ. ವಿತರಣಾ ಶುಲ್ಕಕ್ಕೆ ಸಂಬಂಧಿಸಿ ಪಾಲುದಾರರು ಸಂಗ್ರಹಿಸಿರುವ ಮೊತ್ತವಾಗಿದೆ ಎಂದು ಕಂಪನಿ ಸ್ಪಷ್ಟಪಡಿಸಿದೆ.

'ಒಪ್ಪಂದದ ನಿಯಮಾವಳಿಗಳು ಮತ್ತು ಷರತ್ತಿನ ಅನ್ವಯ ಗ್ರಾಹಕರಿಗೆ ವಿತರಣಾ ಸೇವೆಯನ್ನು ಪಾಲುದಾರರೇ ಒದಗಿಸಿದ್ದಾರೆ. ಕಂಪನಿ ಒದಗಿಸಿಲ್ಲ. ಕಾನೂನು ಮತ್ತು ತೆರಿಗೆ ತಜ್ಞರ ಸಲಹೆ ಪಡೆದು ನೋಟಿಸ್‌ಗೆ ಉತ್ತರಿಸಲಾಗುವುದು' ಎಂದು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	590
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-35500
ಹಳತು	41000-43000
ಚಿತ್ರದುರ್ಗ	
ಅಪಿ	47909-48319
ಬೆಟ್ಟೆ	37139-37579
ಕೆಂಪುಗೋಟು	30610-31059
ರಾಶಿ	47429-47869
ಹೊನ್ನಾವರ	
ಹಳೆಚಾಲಿ	36000-38000
ಕುಮಟ	
ಚಿಪ್ಪು	22099-32249
ಕೋಕ	17260-30789
ಹಳೆಚಾಲಿ	36269-38169
ಹೊಸಚಾಲಿ	32169-34024
ಪುತ್ತೂರು	
ಕೋಕ	11000-25000
ಹೊಸತು	27000-36500
ಸಾಗರ	
ಬಿಳಿಗೋಟು	23989-33199
ಚಾಲಿ	30699-38199
ಕೋಕ	20199-34989
ಕೆಂಪುಗೋಟು	24699-37699
ರಾಶಿ	38800-48899
ಸಿಪ್ಪೆಗೋಟು	10786-20419
ಶಿವಮೊಗ್ಗ	
ಬೆಟ್ಟೆ	47100-53850
ಗೊರಬಲು	16009-40799
ಹೊಸತು	35899-48399
ರಾಶಿ	36519-48405
ಸರಕು	45500-78996
ಸಿದ್ದಾಪುರ	
ಬಿಳಿಗೋಟು	31899-33000
ಚಾಲಿ	36799-37599
ಕೋಕ	28019-31899
ಕೆಂಪುಗೋಟು	32000-32699
ರಾಶಿ	43689-47819
ತಟ್ಟಿಬೆಟ್ಟೆ	40009-40009
ಶಿರಸಿ	
ಬೆಟ್ಟೆ	38409-40999
ಬಿಳಿಗೋಟು	27099-35658
ಚಾಲಿ	36698-38899
ಕೆಂಪುಗೋಟು	32299-32299
ರಾಶಿ	45611-48389
ಯಲ್ಲಾಪುರ	
ಅಪಿ	64269-64269
ಬಿಳಿಗೋಟು	24299-34299
ಚಾಲಿ	35126-38709
ಕೋಕ	18899-30099
ಕೆಂಪುಗೋಟು	24099-34307
ರಾಶಿ	46001-52900
ತಟ್ಟಿಬೆಟ್ಟೆ	36809-45809

ಕಾಫಿ (50 ಕೆ.ಜಿಗೆ ₹ ಗಳಲ್ಲಿ)



	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14100	14200	-	197.75
ಎಸಿ	7840	7600	-	
ಆರ್‌ಪಿ	10600	10900	-	ಲಂಡನ್
ಆರ್‌ಸಿ	6760	7000	-	2869 ಡಾಲರ್ಸ್

'ಅಧಿಕ ಠೇವಣಿ ಮೇಲೆ ಅವಲಂಬನೆ ಬೇಡ'

ಬ್ಯಾಂಕ್‌ಗಳಿಗೆ ಆರ್‌ಬಿಐ ಡೆಪ್ಯುಟಿ ಗವರ್ನರ್ ಸ್ವಾಮಿನಾಥನ್ ಕಿವಿಮಾತು



ಮುಂಬೈ (ಪಿಟಿಐ): 'ಬ್ಯಾಂಕ್‌ಗಳು ಅಧಿಕ ಮೊತ್ತದ ಠೇವಣಿಗಳ ಮೇಲೆ ಹೆಚ್ಚು ಅವಲಂಬನೆಯಾಗುವುದು ಕಡಿಮೆಯಾಗಬೇಕಿದೆ. ಇಲ್ಲವಾದರೆ ಭವಿಷ್ಯದಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ' ಎಂದು ಆರ್‌ಬಿಐನ ಡೆಪ್ಯುಟಿ ಗವರ್ನರ್ ಸ್ವಾಮಿನಾಥನ್ ಜೆ. ಸಲಹೆ ನೀಡಿದ್ದಾರೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಗುರುವಾರ ಇಲ್ಲಿ ಆಯೋಜಿಸಿದ್ದ ಬ್ಯಾಂಕಿಂಗ್ ಹಾಗೂ ಆರ್ಥಿಕ ಸಮಾವೇಶದಲ್ಲಿ ಅವರು ಮಾತನಾಡಿದರು.

ಅಧಿಕ ಮೊತ್ತದ ಠೇವಣಿಗಳ ಮೇಲೆ ಬ್ಯಾಂಕ್‌ಗಳ ಅವಲಂಬನೆಯ ಪ್ರವೃತ್ತಿ ಹೆಚ್ಚುತ್ತಿದೆ. ಇದು ಸರಿಯಾದ ನಡೆಯಲ್ಲ. ಸಾಲದ ದರ ಕಡಿಮೆಯಾದಾಗಲೂ ಠೇವಣಿ ಮೇಲಿನ ಬಡ್ಡಿದರ ಹೆಚ್ಚಾಗಿಯೇ ಇರುತ್ತದೆ. ಹಾಗಾಗಿ, ಬಡ್ಡಿದರದ ಅಪಾಯವನ್ನು ಸಮರ್ಪಕವಾಗಿ ನಿಭಾಯಿಸಬೇಕಿದೆ ಎಂದು ಹೇಳಿದರು.

ಬಡ್ಡಿದರ ಕಡಿಮೆಯಾದಾಗಲೂ ದೀರ್ಘಕಾಲದ ಠೇವಣಿಗಳ ನಿರ್ವಹಣೆಯ ಜವಾಬ್ದಾರಿ ಬ್ಯಾಂಕ್‌ನ ಮೇಲಿರುತ್ತದೆ. ಹಾಗಾಗಿ, ಬ್ಯಾಂಕ್ ಗಳಿಸುವ ಕಡಿಮೆ ಆದಾಯವನ್ನು ಈ ಠೇವಣಿಗಳ ಬಡ್ಡಿಗೆ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಆಪತ್ತು ನಿಯಂತ್ರಣಕ್ಕೆ ಬದ್ಧ: 'ಜಾಗತಿಕ ಮಟ್ಟದಲ್ಲಿ ಭಾರತವು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ. ಇದಕ್ಕೆ ಎದುರಾಗುವ ಸಂಭವನೀಯ ಆಪತ್ತುಗಳನ್ನು ಆರಂಭಿಕ ಹಂತದಲ್ಲಿಯೇ ನಿಯಂತ್ರಿಸಲು ಆರ್‌ಬಿಐ ಬದ್ಧವಾಗಿದೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಬೆಲೆ ಸ್ಥಿರತೆ, ಮಧ್ಯಮಾವಧಿ ಸಾಲ ವಿತರಣೆ, ಆರ್ಥಿಕ ವಲಯದ ಚೇತರಿಕೆ, ಹೊಸ ಅವಕಾಶಗಳ ಸೃಷ್ಟಿಗೆ ಒತ್ತು ನೀಡುವುದು ಆರ್‌ಬಿಐನ ಹಣಕಾಸು ನೀತಿಯ ಪ್ರಧಾನ ಆದ್ಯತೆಗಳಾಗಿವೆ ಎಂದು ಆರ್‌ಬಿಐನ ಆರ್ಥಿಕ ಸ್ಥಿರತೆ ವರದಿಯ ಮುನ್ನುಡಿಯಲ್ಲಿ ಹೇಳಿದ್ದಾರೆ.

ಎಸ್‌ಬಿಐ ನಿಶ್ಚಿತ ಠೇವಣಿ: ಬಡ್ಡಿದರ ಹೆಚ್ಚಳ

ಮುಂಬೈ (ಪಿಟಿಐ): ದೇಶದ ಸರ್ಕಾರಿ ಸ್ವಾಮ್ಯದ ಅತಿದೊಡ್ಡ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಆಯ್ದ ಅವಧಿಯ ನಿಶ್ಚಿತ ಠೇವಣಿಗಳ (ಎಫ್.ಡಿ) ಮೇಲಿನ ಬಡ್ಡಿದರದಲ್ಲಿ 50 ಮೂಲ ಅಂಕಗಳವರೆಗೆ ಹೆಚ್ಚಳ ಮಾಡಿದೆ.

ಪರಿಷ್ಕೃತ ಬಡ್ಡಿದರವು ಬುಧವಾರದಿಂದಲೇ ಜಾರಿಗೆ ಬಂದಿದೆ. ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಮಾಹಿತಿ ಪ್ರಕಾರ, 180ರಿಂದ 210 ದಿನಗಳ ಅವಧಿಯ ಠೇವಣಿ ಮೇಲಿನ ವಾರ್ಷಿಕ ಬಡ್ಡಿದರವು ಸದ್ಯ ಶೇ 5.25ರಷ್ಟಿದ್ದು, ಅದನ್ನು ಶೇ 5.75ಕ್ಕೆ ಹೆಚ್ಚಿಸಲಾಗಿದೆ.

7ರಿಂದ 45 ದಿನಗಳ ವರೆಗಿನ ಠೇವಣಿ ಮೇಲಿನ ಬಡ್ಡಿದರವನ್ನು ಶೇ 3ರಿಂದ ಶೇ 3.50ಕ್ಕೆ ಹೆಚ್ಚಿಸಲಾಗಿದೆ.

46ರಿಂದ 179 ದಿನಗಳ ಠೇವಣಿ (ಪರಿಷ್ಕೃತ ಬಡ್ಡಿದರ ಶೇ 4.75), 211 ದಿನಗಳಿಂದ ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ಠೇವಣಿ (ಪರಿಷ್ಕೃತ ಬಡ್ಡಿದರ ಶೇ 6) ಹಾಗೂ ಮೂರು ವರ್ಷಗಳಿಂದ ಐದು ವರ್ಷಗಳಿಗಿಂತ ಕಡಿಮೆ ಅವಧಿಯ ಠೇವಣಿಯ (ಪರಿಷ್ಕೃತ ದರ ಶೇ 6.75) ಬಡ್ಡಿದರವನ್ನೂ ಹೆಚ್ಚಿಸಲಾಗಿದೆ.

ತೊಗರಿ, ಉದ್ದು ಆಮದಿಗೆ ನಿರ್ಬಂಧ ಇಲ್ಲ: ಕೇಂದ್ರ



ನವದೆಹಲಿ (ಪಿಟಿಐ): 2025ರ ಮಾರ್ಚ್ 31ರವರೆಗೆ ತೊಗರಿ ಮತ್ತು ಉದ್ದಿನ ಬೇಳೆಯ ಆಮದಿಗೆ ಸಂಬಂಧಿಸಿದಂತೆ ಯಾವುದೇ ನಿರ್ಬಂಧ ವಿಧಿಸಿಲ್ಲ. ಬೆಲೆ ನಿಯಂತ್ರಣದ ಮೂಲಕ ಸ್ಥಳೀಯ ಮಾರುಕಟ್ಟೆಗೆ ಚೈತನ್ಯ ತುಂಬಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

ತೊಗರಿ ಮತ್ತು ಉದ್ದಿನ ಬೇಳೆಯನ್ನು ಕೇಂದ್ರ ಸರ್ಕಾರವು ಆಮದು ನಿರ್ಬಂಧಗಳ ಪಟ್ಟಿಯಿಂದ ಹೊರಗಿಟ್ಟಿದೆ. 'ಈ ಎರಡು ಸರಕುಗಳನ್ನು 2024ರ ಮಾರ್ಚ್ 31ರವರೆಗೂ ಮುಕ್ತ ಆಮದು ನೀತಿಯಡಿ ಇಡಲಾಗಿತ್ತು. ಮತ್ತೆ ಈ ಅವಧಿಯನ್ನು ವಿಸ್ತರಿಸಲಾಗಿದೆ' ಎಂದು ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ಬರ್ಗರ್, ಮಾರ್ಕೊ ಮಿಂಚಿನ ದಾಳಿ; ವಿರಾಟ್ ದಿಟ್ಟ ಹೋರಾಟ, 3ನೇ ದಿನವೇ ಮುಗಿದ ಪಂದ್ಯ

ವೇಗಿಗಳ ಆರ್ಭಟಕ್ಕೆ ಮಣಿದ ಭಾರತ

ಪ್ರಜಾವಾಣಿ ವಾರ್ತೆ



ದಕ್ಷಿಣ ಆಫ್ರಿಕಾ ಆಟಗಾರರ ವಿಜಯೋತ್ಸವ –ಪಿಟಿಐ ಚಿತ್ರ

ಸೆಂಚುರಿಯನ್: ಎಡಗೈ ವೇಗದ ಜೋಡಿ ನಾಂದ್ರೆ ಬರ್ಗರ್ ಮತ್ತು ಮಾರ್ಕೊ ಯಾನ್ಸನ್ ಅವರ ದಾಳಿಯ ಮುಂದೆ ಭಾರತದ ಬ್ಯಾಟರ್‌ಗಳು ಪೆವಿಲಿಯನ್‌ಗೆ 'ಪಥಸಂಚಲನ' ನಡೆಸಿದರು. ದಿಟ್ಟ ಬ್ಯಾಟಿಂಗ್‌ನಿಂದ ಅರ್ಧಶತಕ ಗಳಿಸಿದ ವಿರಾಟ್ ಕೊಹ್ಲಿ ಮಾತ್ರ ನೆನಪಿನಲ್ಲಿ ಉಳಿದರು.

ಆದರೆ ಇಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ರೋಹಿತ್ ಶರ್ಮಾ ಬಳಗವು ಇನಿಂಗ್ಸ್ ಮತ್ತು 32 ರನ್‌ಗಳಿಂದ ಆತಿಥೇಯ ದಕ್ಷಿಣ ಆಫ್ರಿಕಾ ತಂಡಕ್ಕೆ ಶರಣಾಯಿತು. ಮೂರನೇ ದಿನವೇ ಪಂದ್ಯ ಮುಕ್ತಾಯವಾಯಿತು. ಡೀನ್ ಎಲ್ಗರ್ (185; 287ಎ, 4X28) ಮತ್ತು ಮಾರ್ಕೊ ಯಾನ್ಸೆನ್ (ಅಜೇಯ 84; 14ಎ, 4X11, 6X1) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 108.4 ಓವರ್‌ಗಳಲ್ಲಿ 408 ರನ್ ಗಳಿಸಿತು. ಅದರೊಂದಿಗೆ 163 ರನ್‌ಗಳ ಮುನ್ನಡೆ ಸಾಧಿಸಿತು.

ಇದಕ್ಕುತ್ತರವಾಗಿ ಎರಡನೇ ಇನಿಂಗ್ಸ್ ಆರಂಭಿಸಿದ ಭಾರತ ತಂಡವು 34.1 ಓವರ್‌ಗಳಲ್ಲಿ 131 ರನ್ ಗಳಿಸಿ ಆಟ ಮುಗಿಸಿತು.

ಪಿಚ್ ವೇಗಿಗಳ ಸ್ವರ್ಗದಂತಾಗಿತ್ತು. ಅನಿರೀಕ್ಷಿತ ಬೌನ್ಸ್ ಮತ್ತು ಮೊನಚಾದ ಸ್ವಿಂಗ್‌ಗಳನ್ನು ಎದುರಿಸುವಲ್ಲಿ ಭಾರತದ ಬ್ಯಾಟರ್‌ಗಳು ವಿಫಲರಾದರು. ಬರ್ಗರ್ (33ಕ್ಕೆ4) ಮತ್ತು ಮಾರ್ಕೊ (36ಕ್ಕೆ3) ಅವರು ಬ್ಯಾಟರ್‌ಗಳಿಗೆ ನೆಲೆಯೂರಲು ಬಿಡಲಿಲ್ಲ. ಈ ಪಂದ್ಯದಲ್ಲಿ ಬರ್ಗರ್ ಒಟ್ಟು ಏಳು ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು.

ಅವರಿಬ್ಬರಿಗೂ ಕಗಿಸೊ ರಬಾಡ (32ಕ್ಕೆ2) ಕೂಡ ಉತ್ತಮ ಜೊತೆ ನೀಡಿದರು. ಇದರಿಂದಾಗಿ ಕೆಂಪು ಚೆಂಡಿನ ಹೊಳಪು ಮಾಸುವ ಮುನ್ನವೇ ಪ್ರವಾಸಿ ಬಳಗದಲ್ಲಿ ನಿರಾಶೆಯ ಮಬ್ಬುಗತ್ತಲು ಆವರಿಸಿತು. ರೋಹಿತ್ ನಾಯಕತ್ವದಲ್ಲಿ ಇದೇ ಮೊದಲ ಬಾರಿ ತಂಡವು ಇನಿಂಗ್ಸ್ ಸೋಲು ಅನುಭವಿಸಿತು. ಆತಿಥೇಯ ಬೌಲರ್‌ಗಳು ವಿಜೃಂಭಿಸಿದ ಪಿಚ್‌ನಲ್ಲಿ ಭಾರತದ ಬೌಲರ್‌ಗಳು ಮಾರ್ಕೊ ಅವರನ್ನು ನಿಯಂತ್ರಿಸಲು ಪರದಾಡಿದರು.



ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಎರಡನೇ ದಿನದಾಟದ ಅಂತ್ಯಕ್ಕೆ ದಕ್ಷಿಣ ಆಫ್ರಿಕಾ ತಂಡವು 5 ವಿಕೆಟ್‌ಗಳಿಗೆ 256 ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಡೀನ್ ಎಲ್ಗರ್ 140 ಮತ್ತು ಮಾರ್ಕೊ 3 ರನ್ ಗಳಿಸಿದ್ದರು. ಗುರುವಾರ ಬೆಳಿಗ್ಗೆ ಇವರಿಬ್ಬರ ಜೊತೆಯಾಟವನ್ನು ಮುರಿಯಲು ಬೌಲರ್‌ಗಳು ಹರಸಾಹಸ ಪಟ್ಟರು. ಇವರಿಬ್ಬರೂ 6ನೇ ವಿಕೆಟ್ ಜೊತೆಯಾಟದಲ್ಲಿ 111 ರನ್ ಸೇರಿಸಿದರು. ದ್ವಿಶತಕದತ್ತ ಸಾಗಿದ್ದ ಡೀನ್ ವಿಕೆಟ್ ಗಳಿಸಿದ ಶಾರ್ದೂಲ್ ಠಾಕೂರ್ ಈ ಜೊತೆಯಾಟವನ್ನು ಮುರಿದರು.

ಮಾರ್ಕೊ ಮತ್ತು ಜೆರಾಲ್ಡ್ (19 ರನ್) ತಂಡದ ಮೊತ್ತವನ್ನು ಮತ್ತಷ್ಟು ಹೆಚ್ಚಿಸಿದರು. ಕೊನೆಯ ಕ್ರಮಾಂಕದ ಬ್ಯಾಟರ್‌ಗಳು ಹೆಚ್ಚು ಹೊತ್ತು ಆಡದಂತೆ ಬೂಮ್ರಾ (69ಕ್ಕೆ4) ತಡೆಯೊಡ್ಡಿದರು.

ವಿರಾಟ್ ಹೋರಾಟ: ಚೇಸಿಂಗ್ ಮಾಸ್ಟರ್ ವಿರಾಟ್ ಆತಿಥೇಯ ವೇಗಿಗಳ ಎಸೆತಗಳನ್ನು ಅಪಾರ ಆತ್ಮವಿಶ್ವಾಸದಿಂದ ಎದುರಿಸಿದರು. ಕ್ಲೋಸ್ ಇನ್ ಫೀಲ್ಡಿಂಗ್ ಕೋಟೆಯನ್ನು ಚಾಣಾಕ್ಷತೆಯಿಂದ ಮೀರಿ ನಿಂತರು. 14ನೇ ಓವರ್‌ನಲ್ಲಿ ನಾಂದ್ರೆ ಬರ್ಗರ್ ಬೌಲಿಂಗ್‌ನಲ್ಲಿ ಲಭಿಸಿದ್ದ ಜೀವದಾನವನ್ನು ಸಮರ್ಥವಾಗಿ ಬಳಸಿಕೊಂಡರು.

ಆದರೆ ಉಳಿದ ಬ್ಯಾಟರ್‌ಗಳು ಇಂತಹ ಆಟವಾಡಲಿಲ್ಲ. ಬ್ಯಾಟರ್ ಶುಭಮನ್ (26; 37ಎ) ಮತ್ತು ಕೊಹ್ಲಿ ಅವರಿಬ್ಬರೇ ಎರಡಂಕಿ ಮೊತ್ತ ಗಳಿಸಿದ ಬ್ಯಾಟರ್‌ಗಳು. ನಾಯಕ ರೋಹಿತ್ ಹಾಗೂ ಅಶ್ವಿನ್ ಖಾತೆಯನ್ನೇ ತೆರೆಯಲಿಲ್ಲ. ಯಶಸ್ವಿ, ಶ್ರೇಯಸ್, ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ರಾಹುಲ್ ಕೂಡ ಒಂದಂಕಿ ಗಳಿಸಿದರು. ವಿರಾಟ್ ಇನಿಂಗ್ಸ್‌ನಲ್ಲಿ ಕೊನೆಯವರಾಗಿ ಔಟಾದರು. ಎರಡೂ ಇನಿಂಗ್ಸ್‌ಗಳಲ್ಲಿ ಪ್ರಸಿದ್ಧ ಕೃಷ್ಣ ಔಟಾಗದೇ ಉಳಿದರು. ಆದರೆ ಒಂದೂ ರನ್ ಗಳಿಸಲಿಲ್ಲ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 245 (67.4 ಓವರ್‌ಗಳಲ್ಲಿ). ದಕ್ಷಿಣ ಆಫ್ರಿಕಾ 408 (108.4 ಓವರ್‌ಗಳಲ್ಲಿ) (ಬುಧವಾರ 5 ವಿಕೆಟ್‌ಗಳಿಗೆ 256)

ಡೀನ್ ಎಲ್ಗರ್ ಸಿ ರಾಹುಲ್ ಬಿ ಠಾಕೂರ್ 185 (287ಎ, 4x28)
ಯಾನ್ಸೆನ್ ಔಟಾಗದೆ 84 (147ಎ, 4x11, 6x1)
ಕೋಯೆಝಿ ಸಿ ಸಿರಾಜ್ ಬಿ ಅಶ್ವಿನ್ 19 (18ಎ, 4x2, 6x1)
ರಬಾಡ ಬಿ ಬೂಮ್ರಾ 1 (9ಎ)
ಬರ್ಗರ್ ಬಿ ಬೂಮ್ರಾ 0 (20ಎ)
ತೆಂಬಾ ಬವುಮಾ ಗೈರು
ಇತರೆ: 24 (ಲೆಗ್ ಬೈ 13, ನೋಬಾಲ್ 9, ವೈಡ್ 2)
ವಿಕೆಟ್ ಪತನ: 6-360 (ಡೀನ್ ಎಲ್ಗರ್; 94.5), 7-391 (ಜೆರಾಲ್ಡ್ ಕೋಯೆಝಿ; 99.1), 8-392 (ಕಗಿಸೊ ರಬಾಡ; 100.5), 9-408 (ನಾಂದ್ರೆ ಬರ್ಗರ್; 108.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 26.4–5–69–4, ಮೊಹಮ್ಮದ್ ಸಿರಾಜ್ 24–1–91–2, ಶಾರ್ದೂಲ್ ಠಾಕೂರ್ 19–2–101–1, ಪ್ರಸಿದ್ಧ ಕೃಷ್ಣ 20–2–93–1, ರವಿಚಂದ್ರನ್ ಅಶ್ವಿನ್ 19–6–41–1

ಎರಡನೇ ಇನಿಂಗ್ಸ್: ಭಾರತ 131 (34.1 ಓವರ್‌ಗಳಲ್ಲಿ)

ಜೈಸ್ವಾಲ್ ಸಿ ವೆರೈನ್ ಬಿ ಬರ್ಗರ್ 5 (18ಎ, 4x1)
ರೋಹಿತ್ ಬಿ ರಬಾಡ 0 (8ಎ)
ಶುಭಮನ್ ಬಿ ಯಾನ್ಸೆನ್ 26 (37ಎ, 4x6)
ವಿರಾಟ್ ಸಿ ರಬಾಡ ಬಿ ಯಾನ್ಸೆನ್ 76 (82ಎ, 4X12, 6X1)
ಶ್ರೇಯಸ್ ಬಿ ಯಾನ್ಸೆನ್ 6 (12ಎ, 4x1)
ರಾಹುಲ್ ಸಿ ಮರ್ಕರಂ ಬಿ ಬರ್ಗರ್ 4 (24ಎ, 4X1)
ಅಶ್ವಿನ್ ಸಿ ಬೆಡಿಂಗಾಮ್ ಬಿ ಬರ್ಗರ್ 0 (1ಎ)
ಶಾರ್ದೂಲ್ ಸಿ ಬೆಡಿಂಗಾಮ್ ಬಿ ರಬಾಡ 2 (8ಎ)
ಬೂಮ್ರಾ ರನ್‌ಔಟ್ (ಎಲ್ಗರ್/ರಬಾಡ) 0 (5ಎ)
ಸಿರಾಜ್ ಸಿ ವೆರೈನ್ ಬಿ ಬರ್ಗರ್ 4 (5ಎ, 4X1)
ಪ್ರಸಿದ್ಧ ಕೃಷ್ಣ ಔಟಾಗದೆ 0 (5ಎ)
ಇತರೆ: 8 (ಲೆಗ್‌ಬೈ 2, ವೈಡ್ 6
ವಿಕೆಟ್ ಪತನ: 1–5 (ರೋಹಿತ್ ಶರ್ಮಾ: 2.5), 2–13 (ಯಶಸ್ವಿ ಜೈಸ್ವಾಲ್; 5.3), 3–52 (ಶುಭಮನ್ ಗಿಲ್; 13.6), 4–72 (ಶ್ರೇಯಸ್ ಅಯ್ಯರ್ 17.5) 5–96 (ಕೆ.ಎಲ್. ರಾಹುಲ್; 25.5), 6–96 (ಆರ್. ಅಶ್ವಿನ್; 25.6), 7–105 (ಶಾರ್ದೂಲ್ ಠಾಕೂರ್; 28.3), 8–113 (ಜಸ್‌ಪ್ರೀತ್ ಬೂಮ್ರಾ; 30.2), 9–121 (ಮೊಹಮ್ಮದ್ ಸಿರಾಜ್; 31.5), 10–131 (ವಿರಾಟ್ ಕೊಹ್ಲಿ; 34.1)
ಬೌಲಿಂಗ್: ಕಗಿಸೊ ರಬಾಡ 12–3–32–2, ನಾಂದ್ರೆ ಬರ್ಗರ್ 10–3–33–4, ಮಾರ್ಕೊ ಯಾನ್ಸೆನ್ 7.1–1–36–3, ಜೆರಾಲ್ಡ್ ಕೋಯೆಝಿ 5–0–28–0
ಪಂದ್ಯದ ಆಟಗಾರ: ಡೀನ್ ಎಲ್ಗರ್

ಫಲಿತಾಂಶ: ದ. ಆಫ್ರಿಕಾಕ್ಕೆ ಇನಿಂಗ್ಸ್ ಮತ್ತು 32 ರನ್ ಜಯ

ಭಾರತ 'ಎ' ಹೋರಾಟ

ಬೆನೋನಿ (ದಕ್ಷಿಣ ಆಫ್ರಿಕಾ): ದಕ್ಷಿಣ ಆಫ್ರಿಕಾ 'ಎ' ತಂಡದ 263 ರನ್‌ಗಳಿಗೆ ಉತ್ತರವಾಗಿ ಭಾರತ 'ಎ' ತಂಡ, ಎರಡನೇ 'ಟೆಸ್ಟ್' ಪಂದ್ಯದಲ್ಲಿ ಮೂರನೇ ದಿನವಾದ ಗುರುವಾರ ಆಟ ಮುಗಿದಾಗ 4 ವಿಕೆಟ್‌ಗೆ 159 ರನ್ ಗಳಿಸಿತ್ತು. ಶುಕ್ರವಾರ ಈ ಪಂದ್ಯದ ಕೊನೆಯ ದಿನವಾಗಿದೆ.

ಸ್ಕೋರುಗಳು: ದಕ್ಷಿಣ ಆಫ್ರಿಕಾ 'ಎ': 102.3 ಓವರುಗಳಲ್ಲಿ 263 (ಆವೇಶ್ ಖಾನ್ 54ಕ್ಕೆ5, ಅಕ್ಷರ್ ಪಟೇಲ್ 46ಕ್ಕೆ2); **ಭಾರತ 'ಎ':** 49 ಓವರುಗಳಲ್ಲಿ 4 ವಿಕೆಟ್‌ಗೆ 159 (ಸಾಯಿ ಸುದರ್ಶನ್ 30, ರಜತ್ ಪಾಟೀದಾರ್ 33, ಸರ್ಫರಾಜ್ ಖಾನ್ 34).

ಟೆನಿಸ್: ಪಾಕ್‌ಗೆ ಪಂದ್ಯ ಬಿಟ್ಟು ಕೊಡುವ ಸಾಧ್ಯತೆ

ನವದೆಹಲಿ (ಎಎಫ್‌ಪಿ): ಬದ್ಧ ಎದುರಾಳಿ ಪಾಕಿಸ್ತಾನ ವಿರುದ್ಧದ ಡೇವಿಸ್ ಕಪ್ ಟೆನಿಸ್‌ನ ವಿಶ್ವಗುಂಪಿನ (ಒಂದು) ಪಂದ್ಯವನ್ನು ಭಾರತ ಬಿಟ್ಟುಕೊಡುವ ಸಾಧ್ಯತೆಯಿದೆ. ಪಾಕ್ ಪ್ರಯಾಣಕ್ಕೆ ಕೇಂದ್ರ ಸರ್ಕಾರದ ಅನುಮತಿಗಾಗಿ ಕಾಯುತ್ತಿರುವುದಾಗಿ ಅಖಿಲ ಭಾರತ ಟೆನಿಸ್ ಸಂಸ್ಥೆ ಗುರುವಾರ ತಿಳಿಸಿದೆ.

ಫೆಬ್ರುವರಿ 3 ಮತ್ತು 4ರಂದು ಇಸ್ಲಾಮಾಬಾದಿನಲ್ಲಿ ನಿಗದಿಯಾಗಿರುವ ಈ ಪಂದ್ಯವನ್ನು ತಟಸ್ಥ ತಾಣಕ್ಕೆ ಸ್ಥಳಾಂತರಿಸುವಂತೆ ಭಾರತದ ಕೋರಿಕೆಯನ್ನು ಐಟಿಎಫ್ ಟ್ರಿಬ್ಯೂನಲ್ ತಿರಸ್ಕರಿಸಿದ ನಂತರ ಎಐಟಿಎ, ಪಾಕಿಸ್ತಾನಕ್ಕೆ ಪ್ರಯಾಣಿಸಲು ಅನುಮತಿ ನೀಡುವ ಬಗ್ಗೆ ಕ್ರೀಡಾ ಸಚಿವಾಲಯದ ಸಮ್ಮತಿಗಾಗಿ ಕಾಯುತ್ತಿದೆ. 'ಮನವಿ ಈಗಲೂ ಸಚಿವಾಲಯದ ಮುಂದಿದೆ. ನಾವು ನಿರ್ಧಾರಕ್ಕೆ ಕಾಯುತ್ತಿದ್ದೇವೆ' ಎಂದು ಎಐಟಿಎ ಮಹಾ ಪ್ರಧಾನ ಕಾರ್ಯದರ್ಶಿ ಅನಿಲ್ ಧುಪರ್ ಎಎಫ್‌ಪಿಗೆ ತಿಳಿಸಿದರು.

ಭಾರತ ತಂಡದ 18 ಸದಸ್ಯರಿಂದ ವೀಸಾಗಳಿಗೆ ವಿನಂತಿ ಬಂದಿದೆ ಎಂದು ಪಾಕಿಸ್ತಾನ ಟೆನಿಸ್ ಫೆಡರೇಷನ್‌ನ ಅಧ್ಯಕ್ಷ ಸಮೀಮ್ ಸೈಫುಲ್ಲಾ ಖಾನ್ ತಿಳಿಸಿದರು.

ಮಹಿಳಾ ಏಕದಿನ ಕ್ರಿಕೆಟ್: ಆಸ್ಟ್ರೇಲಿಯಾಕ್ಕೆ ಭರ್ಜರಿ ಜಯ

ಮುಂಬೈ (ಪಿಟಿಐ): ಫೋಬಿ ಲಿಚ್‌ಫೀಲ್ಡ್ ಮತ್ತ ಎಲಿಸ್ ಪೆರ್ರಿ ಅವರ ನಡುವಣ 2ನೇ ವಿಕೆಟ್‌ಗೆ 148 ರನ್ ಜೊತೆಯಾಟದ ನೆರವಿನಿಂದ ಆಸ್ಟ್ರೇಲಿಯಾ ತಂಡ ಗುರುವಾರ ನಡೆದ ಮಹಿಳೆಯರ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವನ್ನು 21 ಎಸೆತಗಳಿರುವಂತೆ ಆರು ವಿಕೆಟ್‌ಗಳಿಂದ ಸೋಲಿಸಿತು.

ಗೆಲುವಿಗೆ 283 ರನ್ ಗಳಿಸ ಬೇಕಾಗಿದ್ದ ಆಸ್ಟ್ರೇಲಿಯಕ್ಕೆ ಫೋಬಿ (89 ಎಸೆತಗಳಲ್ಲಿ 78) ಮತ್ತು ಎಲಿಸ್ (72 ಎಸೆತಗಳಲ್ಲಿ 75) ಆಸರೆಯಾದರು. ನಂತರ ಬೆತ್ ಮೂನಿ (42) ಮತ್ತು ತಹ್ಲಿಯಾ ಮೆಕ್‌ಗ್ರಾ (ಔಟಾಗದೇ 68) ನಾಲ್ಕನೇ ವಿಕೆಟ್‌ಗೆ 88 ರನ್ ಸೇರಿಸಿ ಗೆಲುವನ್ನು ಸುಲಭಗೊಳಿಸಿದರು.

ಇದಕ್ಕೆ ಮೊದಲು ಭಾರತದ ಪರ ಜೆಮಿಮಾ ರಾಡ್ರಿಗಸ್ (77 ಎಸೆತಗಳಲ್ಲಿ 82) ಮತ್ತು 9ನೇ ಕ್ರಮಾಂಕದಲ್ಲಿ ಆಡಿದ ಪೂಜಾ ವಸ್ತ್ರಾಕರ್ (46 ಎಸೆತಗಳಲ್ಲಿ 62) ಉಪಯುಕ್ತ ಆಟವಾಡಿದ್ದರು. ಆರಂಭಿಕ ಆಟಗಾರ್ತಿ ಯಸ್ತಿಕಾ ಭಾಟಿಯಾ (49) ಪ್ರಮುಖ ಕಾಣಿಕೆ ನೀಡಿದ ಇನ್ನೊಬ್ಬ ಆಟಗಾರ್ತಿ.



ಫೋಬಿ ಲಿಚ್‌ಫೀಲ್ಡ್ –ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರುಗಳಲ್ಲಿ 8 ವಿಕೆಟ್‌ಗೆ 282 (ಯಸ್ತಿಕಾ ಭಾಟಿಯಾ 49, ಜೆಮಿಮಾ ರಾಡ್ರಿಗಸ್ 82, ಪೂಜಾ ವಸ್ತ್ರಾಕರ್ ಔಟಾಗದೇ 62); **ಆಸ್ಟ್ರೇಲಿಯಾ:** 46.3 ಓವರುಗಳಲ್ಲಿ 4 ವಿಕೆಟ್‌ಗೆ 285 (ಎಲಿಸ್ ಪೆರಿ 75, ಫೋಬಿ ಲಿಚ್‌ಫೀಲ್ಡ್ 78, ಬೆತ್ ಮೂನಿ 42, ತಹ್ಲಿಯಾ ಮೆಕ್‌ಗ್ರಾ ಔಟಾಗದೇ 68). **ಫಲಿತಾಂಶ:** ಆಸ್ಟ್ರೇಲಿಯಾ ತಂಡಕ್ಕೆ 6 ವಿಕೆಟ್ ಜಯ **ಪಂದ್ಯದ ಆಟಗಾರ್ತಿ:** ಫೋಬಿ ಲಿಚ್‌ಫೀಲ್ಡ್



ಬೆಂಗಳೂರು ಜೈನ್ ವಿವಿ ತಂಡವು ಗುರುವಾರ ಮುಕ್ತಾಯವಾದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ 60–58ರಿಂದ ಮದ್ರಾಸ್ ವಿವಿ ತಂಡವನ್ನು ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. (ಮಂಡಿಯೂರಿ ಕುಳಿತವರು, ಎಡದಿಂದ) ದೀಕ್ಷಾ, ನವೋಮಿ, (ಕುಳಿತವರು) ಲೋಕೇಶ್ (ಸಹಾಯಕ ಕೋಚ್), ಶಂಕರ್ ಯು.ವಿ. (ನಿರ್ದೇಶಕ), ಪುನೀತ್ ಸುರೇಶ್ (ಕೋಚ್), ತವ್ಲೀನ್ (ನಿಂತವರು) ಶಿವಾನಿ, ಅಭಾ, ಹೇಮಾಂಗ್ನೆ, ಸಿಯಾ, ಸುಶ್ಮಿತಾ, ಚಂದನಾ, ಅನನ್ಯಾ ಮಂಡಲ್, ನೇತ್ರಾ

ಕ್ರೀಡಾ ಸಚಿವಾಲಯದ ಕ್ರಮ 'ಅಸಮರ್ಪಕ': ಆರೋಪ

'ಅಮಾನತು ಪ್ರಶ್ನಿಸಿ ಕೋರ್ಟ್ ಮೊರೆ'

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ ನೂತನ ಆಡಳಿತ ಸಮಿತಿಯನ್ನು ಅಮಾನತು ಮಾಡಿರುವ ಕೇಂದ್ರ ಕ್ರೀಡಾ ಸಚಿವಾಲಯದ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗುವುದಾಗಿ ಚುನಾಯಿತ ಅಧ್ಯಕ್ಷ ಸಂಜಯ್ ಕುಮಾರ್ ಸಿಂಗ್ ಹೇಳಿದ್ದಾರೆ.

ಅಮಾನತುಗೊಳಿಸಲು ಸಚಿವಾಲಯವು 'ಸಮರ್ಪಕ ಪ್ರಕ್ರಿಯೆ' ಪಾಲಿಸಿಲ್ಲ ಎಂದು ಅವರು ದೂರಿದ್ದಾರೆ.

'ಪ್ರಜಾಪ್ರಭುತ್ವದ ಕಾನೂನಿನ ಅನ್ವಯ ನಡೆದ ಚುನಾವಣೆಯಲ್ಲಿ ನಾವು ಜಯಿಸಿದ್ದೇವೆ. ಜಮ್ಮು–ಕಾಶ್ಮೀರ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಚುನಾವಣಾಧಿಕಾರಿಯಾಗಿದ್ದರು. ಐಒಎ (ಭಾರತ ಒಲಿಂಪಿಕ್ ಸಂಸ್ಥೆ) ಮತ್ತು ಯುಡಬ್ಲ್ಯುಡಬ್ಲ್ಯು (ವಿಶ್ವ ಕುಸ್ತಿ ಸಂಘಟನೆ) ವೀಕ್ಷಕರೂ ಹಾಜರಿದ್ದರು. 22 ರಾಜ್ಯ ಸಂಸ್ಥೆಗಳು (ಒಟ್ಟು 25 ಇವೆ. ಮೂರು ಸಂಸ್ಥೆಗಳ ಗೈರು) ಚುನಾವಣೆಯಲ್ಲಿ ಭಾಗವಹಿಸಿದ್ದವು. 47 ಮತಗಳು ಚಲಾವಣೆಯಾದವು. ಅದರಲ್ಲಿ ನಾನು 40 ಮತ ಗಳಿಸಿದೆ' ಎಂದು ಸಂಜಯ್ ವಿವರಿಸಿದ್ದಾರೆ.

'ಇಷ್ಟೆಲ್ಲ ಪ್ರಕ್ರಿಯೆ ಆದ ನಂತರವೂ ನಮ್ಮನ್ನು ಅಮಾನತುಗೊಳಿಸಿರುವುದನ್ನು ಒಪ್ಪುವುದಿಲ್ಲ. ಪ್ರಜಾಪ್ರಭುತ್ವದಡಿ ಚುನಾಯಿತಗೊಂಡಿರುವ ಸಮಿತಿಗೆ ತನ್ನ ವಾದವನ್ನು ಮಂಡಿಸುವ ಅವಕಾಶವನ್ನೂ ನೀಡಲಾಗಿಲ್ಲ. ಇದು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ. ಭಾರತದ ಸಂವಿಧಾನ ದಡಿಯಲ್ಲಿ ಎಲ್ಲರಿಗೂ ಸಾಮಾಜಿಕ ನ್ಯಾಯ ಪಡೆಯುವ ಹಕ್ಕು ಇದೆ' ಎಂದಿದ್ದಾರೆ.

'ಡಬ್ಲ್ಯುಎಫ್‌ಐ ಒಂದು ಸ್ವಾಯತ್ತ ಸಮಿತಿಯಾಗಿದೆ. ಸರ್ಕಾರ ಸರಿಯಾದ ಕ್ರಮವನ್ನು ಅನುಸರಿಸಿಲ್ಲ. ಈ ಕುರಿತು ಸರ್ಕಾರ ದೊಂದಿಗೆ ಚರ್ಚೆ ನಡೆಸುತ್ತೇವೆ. ಒಂದೊಮ್ಮೆ ಸಮಿತಿಯನ್ನು ಅಮಾನತು ಮಾಡಿರುವ ಆದೇಶ ಹಿಂಪಡೆಯದಿದ್ದರೆ ಕಾನೂನು ಸಲಹೆ ಪಡೆಯುತ್ತೇವೆ ಮತ್ತು ಕೋರ್ಟ್ ಮೆಟ್ಟಿಲೇರುತ್ತೇವೆ' ಎಂದಿದ್ದಾರೆ.

ತಮ್ಮ ಅಧ್ಯಕ್ಷತೆಯ ಸಮಿತಿಯ ಮೇಲೆ ಅಮಾನತು ಇರುವವರೆಗೂ ಮೂವರು ಸದಸ್ಯರ ಅಡ್‌ಹಾಕ್ ಸಮಿತಿಯನ್ನು ಒಪ್ಪಿಕೊಳ್ಳುವುದಿಲ್ಲ ಎಂದೂ ಹೇಳಿದ್ದಾರೆ.

ರಾಹುಲ್ 'ಜು ಜಿತ್ಸು' ಕೌಶಲ ಪ್ರದರ್ಶನ: ಕಾಂಗ್ರೆಸ್ ಧುರೀಣ ಬುಧವಾರ ಹರಿಯಾಣದ ಜಜ್ಜರ್ ಜಿಲ್ಲೆಯಲ್ಲಿ ಬಜರಂಗ್ ಮತ್ತು ಇತರ ಕುಸ್ತಿಪಟುಗಳ ಭೇಟಿಯ ಸಂದರ್ಭದಲ್ಲಿ ಕುಸ್ತಿ ಅಖಾಡದಲ್ಲಿ ಜಪಾನಿನ ಸಮರ ಕಲೆ 'ಜು ಜಿತ್ಸು' ಕೌಶಲವನ್ನು ಪ್ರದರ್ಶಿಸಿದ್ದರು.

ಈ ಕುರಿತು ಬಜರಂಗ್ ಪೂನಿಯಾ ಗುರುವಾರ 'ಎಕ್ಸ್' ವಿಡಿಯೊ ಹಂಚಿಕೊಂಡು, 'ರಾಹುಲ್ ಗಾಂಧಿ ಅವರು 'ಜು ಜಿತ್ಸು'ನಲ್ಲಿನ 'ಲಾಕ್ಸ್' ಮತ್ತು 'ಚೋಕ್ಸ್' ತಂತ್ರವನ್ನು ಪ್ರದರ್ಶಿಸುವುದನ್ನು ಕಾಣಬಹುದು. ಈ ವೇಳೆ 'ಧೋಬಿ ಪಚಾಡ್' ಮತ್ತು 'ಧಕ್'ನಂತಹ ಕೆಲವು ಕುಸ್ತಿ ನಡೆಗಳನ್ನು ಅವರು ಕಲಿತರು' ಎಂದಿದ್ದಾರೆ.

'ಕುಸ್ತಿಪಟುಗಳ ಪ್ರತಿಭಟನೆಗೆ ಕಾಂಗ್ರೆಸ್ ಕುಮ್ಮಕ್ಕು'

ಹರಿಯಾಣದ ಜಾಜರ್‌ನಲ್ಲಿ ಬುಧವಾರ ಬಜರಂಗ್ ಅವರ ಅಖಾಡಕ್ಕೆ ಕಾಂಗ್ರೆಸ್ ಧುರೀಣ ರಾಹುಲ್ ಗಾಂಧಿ ಭೇಟಿ ನೀಡಿದ್ದನ್ನು ಸಂಜಯ್ ಕುಮಾರ್ ಸಿಂಗ್ ಟೀಕಿಸಿದ್ದಾರೆ.

'ಕುಸ್ತಿಪಟುಗಳ ಪ್ರತಿಭಟನೆಗೆ ಕಾಂಗ್ರೆಸ್, ಟೂಲ್ ಕಿಟ್ ಗ್ಯಾಂಗ್ ಮತ್ತು ಎಡಪಕ್ಷಗಳ ಕುಮ್ಮಕ್ಕು ಇರುವುದು ಈಗ ಸ್ಪಷ್ಟವಾಗಿದೆ. ಈ ಮೂವರು ಕುಸ್ತಿಪಟುಗಳು (ಬಜರಂಗ್ ಪೂನಿಯಾ, ವಿನೇಶಾ ಫೋಗಾಟ್ ಮತ್ತು ಸಾಕ್ಷಿ ಮಲಿಕ್) ಅವರು ರಾಜಕೀಯ ಪಕ್ಷದ ಮಡಿಲಲ್ಲಿದ್ದುಕೊಂಡು ಆಟವಾಡುತ್ತಿದ್ದಾರೆ. ನಾಲ್ಕನೇ ಕುಸ್ತಿಪಟು ಯಾರಾದರೂ ಇದ್ದರೆ ದಯವಿಟ್ಟು ತೋರಿಸಿ. ಈ ಮೂವರಿಗೂ ಜೂನಿಯರ್ ಕುಸ್ತಿಪಟುಗಳು ಬೆಳೆಯಬಾರದು ಎಂಬ ದುರುದ್ದೇಶವಿದೆ. ಜೂನಿಯರ್ ಕುಸ್ತಿಪಟುಗಳ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಯತ್ನ ಅವರದ್ದು' ಎಂದಿದ್ದಾರೆ.

'ಬಜರಂಗ್ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲು ನೇರವಾಗಿ ಅರ್ಹತೆ ಪಡೆದರು. ಟ್ರಯಲ್ಸ್‌ನಲ್ಲಿ ಭಾಗವಹಿಸಲಿಲ್ಲ. ಆದರೆ ಅಲ್ಲಿ ಅವರು ಸೋತರು. ಅವರು ಕುಸ್ತಿ ಕ್ರೀಡೆಯಲ್ಲಿ ಇಲ್ಲ. ರಾಜಕೀಯದಲ್ಲಿದ್ದಾರೆ. ನಿಮಗೆ ಕುಸ್ತಿ ಬಗ್ಗೆ ನಿಜಕ್ಕೂ ಕಾಳಜಿ ಇದ್ದರೆ ಬನ್ನಿ, ದಾರಿ ಮುಕ್ತವಾಗಿದೆ. ರಾಜಕೀಯ ಮಾಡುವುದೇ ಆದರೆ ಬಹಿರಂಗವಾಗಿ ಮಾಡಿ' ಎಂದು ಸಂಜಯ್ ಸವಾಲು ಹಾಕಿದ್ದಾರೆ.



ಸಂಜಯ್ ಕುಮಾರ್ ಸಿಂಗ್

ಬಜರಂಗ್ ಪೂನಿಯಾ ತಮ್ಮ ಪದ್ಮಶ್ರೀ ಪ್ರಶಸ್ತಿಯನ್ನು ರಸ್ತೆಬದಿಯಲ್ಲಿ ಇಟ್ಟು ಹೋಗಿದ್ದನ್ನು ಸಂಜಯ್ ಟೀಕಿಸಿದರು.

'ಅದು ಅವರ ವೈಯಕ್ತಿಕ ಸಂಗತಿ ಇರಬಹುದು. ಆದರೆ, ಖೇಲ್ ರತ್ನದೊಂದಿಗೆ ದೇಶದ ಜನರ ಭಾವನೆಗಳು ಇರುತ್ತವೆ. ಅದು ಕೇವಲ ಒಬ್ಬ ವ್ಯಕ್ತಿಯ ಸ್ವತ್ತಲ್ಲ. ಇಡೀ ಸಮಾಜದ್ದು. ಪದ್ಮಶ್ರೀ ಪ್ರಶಸ್ತಿಯನ್ನು ರಸ್ತೆಯಲ್ಲಿ ಬಿಟ್ಟು ಹೋಗಿದ್ದು ಸರಿಯಲ್ಲ' ಎಂದಿದ್ದಾರೆ.

2ನೇ ಟೆಸ್ಟ್: ಆಸ್ಟ್ರೇಲಿಯಾ ನೆರವಿಗೆ ಸ್ಮಿತ್– ಮಾರ್ಷ್

ಮೆಲ್ಬರ್ನ್ (ಎಪಿ): ಎರಡನೇ ಇನಿಂಗ್ಸ್‌ನಲ್ಲಿ 16 ರನ್‌ಗಳಾಗುಷ್ಟರಲ್ಲಿ 4 ವಿಕೆಟ್ ಕಳೆದುಕೊಂಡಿದ್ದ ಆಸ್ಟ್ರೇಲಿಯಾಕ್ಕೆ ಅನುಭವಿಗಳಾದ ಸ್ಟೀವ್ ಸ್ಮಿತ್ ಮತ್ತು ಮಿಚೆಲ್ ಮಾರ್ಷ್ ಆಸರೆಯಾದರು. ಪಾಕಿಸ್ತಾನ ವಿರುದ್ಧ 2ನೇ ಟೆಸ್ಟ್ ಪಂದ್ಯದ 3ನೇ ದಿನವಾದ ಗುರುವಾರ ಆಟ ಮುಗಿದಾಗ ಆಸ್ಟ್ರೇಲಿಯಾ ಒಟ್ಟಾರೆ 6 ವಿಕೆಟ್‌ಗೆ 187 ರನ್ ಗಳಿಸಿದ್ದು, ಒಟ್ಟಾರೆ 241 ರನ್‌ಗಳ ಮುನ್ನಡೆ ಹೊಂದಿದೆ.

ಮಾರ್ಷ್ 4 ರನ್‌ಗಳಿಂದ ಶತಕ ಕಳೆದುಕೊಂಡರೆ, ಸ್ಮಿತ್ 50 ರನ್ ಹೊಡೆದು ಔಟ್ ಆದರು. ಐದನೇ ವಿಕೆಟ್‌ಗೆ ಉಪಯುಕ್ತ 153 ರನ್ ಸೇರಿಸಿದ್ದರು.

ಇದಕ್ಕೆ ಮೊದಲು ಪ್ಯಾಟ್ ಕಮಿನ್ಸ್ (48ಕ್ಕೆ5) ಟೆಸ್ಟ್ ಜೀವನದಲ್ಲಿ ಹತ್ತನೇ ಬಾರಿ ಐದು ವಿಕೆಟ್‌ಗಳ ಗೊಂಚಲು ಪಡೆದು, ಆಸ್ಟ್ರೇಲಿಯಾಕ್ಕೆ 54 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆಯಲು ನೆರವಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 318, ಪಾಕಿಸ್ತಾನ: 73.5 ಓವರುಗಳಲ್ಲಿ 264 (ಮೊಹಮ್ಮದ್ ರಿಜ್ವಾನ್ 42, ಅಮೀರ್ ಜಮಾಲ್ ಔಟಾಗದೇ 33; ಪ್ಯಾಟ್ ಕಮಿನ್ಸ್ 48ಕ್ಕೆ5, ನೇಥನ್ ಲಯನ್ 73ಕ್ಕೆ4); ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 62.3 ಓವರುಗಳಲ್ಲಿ 6 ವಿಕೆಟ್‌ಗೆ 187 (ಸ್ಟೀವನ್ ಸ್ಮಿತ್ 50, ಮಿಚೆಲ್ ಮಾರ್ಷ್ 96; ಶಹೀನ್ ಶಾ ಅಫ್ರೀದಿ 58ಕ್ಕೆ3, ಮೀರ್ ಹಮ್ಝಾ 27ಕ್ಕೆ3).

ಫುಟ್‌ಬಾಲ್ ಮಾಜಿ ಆಟಗಾರ ಪ್ರಬೀರ್ ಇನ್ನಿಲ್ಲ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಾಜಿ ಡಿಫೆಂಡರ್ ಪ್ರಬೀರ್ ಮಜುಂದಾರ್ (77) ಅನಾರೋಗ್ಯದಿಂದ ಗುರುವಾರ ನಿಧನರಾದರು. ಅವರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ.

ಟೆಹ್ರಾನ್‌ನಲ್ಲಿ ನಡೆದ 1974ರ ಏಷ್ಯನ್ ಕ್ರೀಡಾಕೂಟದಲ್ಲಿ ಅವರು ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಅವರು ಈಸ್ಟ್ ಬೆಂಗಾಲ್ ಮತ್ತು ಈಸ್ಟರ್ನ್ ರೈಲ್ವೇಸ್‌ನ ತಂಡಕ್ಕಾಗಿಯೂ ಆಡಿದ್ದರು.

7ರಂದು ರಾಜ್ಯ ಚೆಸ್ ಟೂರ್ನಿ

ಬೆಂಗಳೂರು: ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಸಂಸ್ಥೆಯ ಆಶ್ರಯದಲ್ಲಿ ಜನವರಿ 7ರಂದು ರಾಮೋಹಳ್ಳಿಯ ಕ್ಯಾಂಪಸ್‌ನಲ್ಲಿ ಜನವರಿ 7ರಂದು ರಾಜ್ಯ ಮಟ್ಟದ ಚೆಸ್ ಟೂರ್ನಿ ನಡೆಯಲಿದೆ. 7 ರಿಂದ 19 ವರ್ಷ ವಯೋಮಿತಿಯ ಈ ಟೂರ್ನಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ನಡೆಯಲಿದೆ.

ಆರು ವಿಭಾಗಗಳಲ್ಲಿ 400ಕ್ಕೂ ಹೆಚ್ಚು ಉದಯೋನ್ಮುಖ ಆಟಗಾರರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಸಂಸ್ಥೆಯ ಅಧ್ಯಕ್ಷ ಆರ್.ಉಪೇಂದ್ರ ಶೆಟ್ಟಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಮತ್ತು ಬಿಯುಡಿಸಿಎ ಸಹಯೋಗದಲ್ಲಿ ಟೂರ್ನಿ ನಡೆಯಲಿದೆ. ಆಸಕ್ತರು ಜನವರಿ 5ರ ಒಳಗೆ ಸಂತೋಷ್ (9686664985) ಅಥವ ನಳಿನಿ (9740182248) ಅವರ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು.



ದಕ್ಷಿಣ ವಲಯ ಈಜು: ಚಿಂತನ್, ಅನಿಶ್ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಚಿಂತನ್ ಎಸ್.ಶೆಟ್ಟಿ ಮತ್ತು ಅನಿಶ್ ಅನಿರುದ್ಧ ಕೋರೆ, ಬಸವನಗುಡಿ ಈಜು ಕೇಂದ್ರದಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಗುರುವಾರ ನೂತನ ಕೂಟ ದಾಖಲೆ ಬರೆದರು. ಕರ್ನಾಟಕದ ಬಾಲಕರ ತಂಡ ಒಂದನೇ ಗುಂಪಿನ 4x 100 ಮೀ. ಫ್ರೀಸ್ಟೈಲ್ ರಿಲೇಯಲ್ಲೂ ದಾಖಲೆ ಸ್ಥಾಪಿಸಿತು.

ಗುರುವಾರ ಒಟ್ಟು ನಾಲ್ಕು ದಾಖಲೆಗಳು ಮುಳುಗಿದವು. ಮೊದಲ ದಿನ ಬಾಲಕರ ಎರಡನೇ ಗುಂಪಿನ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ದಾಖಲೆ ಸ್ಥಾಪಿಸಿದ್ದ ಅನಿಶ್, ಎರಡನೇ ದಿನ 50 ಮೀ. ಬಟರ್‌ಫ್ಲೈ ಸ್ಪರ್ಧೆಯನ್ನು 27.80 ಸೆ.ಗಳಲ್ಲಿ ಮುಗಿಸಿ, ತಮಿಳನಾಡಿನ ಕೆ.ದಿವಾಕರ್ ಹೆಸರಿನಲ್ಲಿದ್ದ ದಾಖಲೆ (27.86ಸೆ.) ಮುರಿದರು. ಒಂದನೇ ಗುಂಪಿನ ಇದೇ ಸ್ಪರ್ಧೆಯಲ್ಲಿ ಚಿಂತನ್ ಶೆಟ್ಟಿ 26.14 ಸೆ.ಗಳಲ್ಲಿ ಗುರಿತಲುಪಿ, ಆಂಧ್ರದ ಎಂ.ವಾಸುರಾಮ್ ಹೆಸರಿನಲ್ಲಿದ್ದ ದಾಖಲೆ (26.67 ಸೆ.) ಮುಳುಗಿಸಿದರು.

ಚಿಂತನ್, ದಿನದ ಕೊನೆಯಲ್ಲಿ ಅಲೈಸ್ಟರ್ ಸಾಮ್ಯುಯೆಲ್ ರೇಗೊ, ಶ್ರೇಯಸ್ ಮಂಜುನಾಥ್, ಧೋನೀಶ್ ಎನ್. ಜೊತೆಗೂಡಿ ಬಾಲಕರ 4x100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲೂ ದಾಖಲೆ (3ನಿ.43.22 ಸೆ.) ಸ್ಥಾಪಿಸಲು ನೆರವಾದರು. ಹಳೆ ದಾಖಲೆ (3:45.45) ಕರ್ನಾಟಕದ ಹೆಸರಿನಲ್ಲೇ ಇತ್ತು.

ಬಾಲಕಿಯರ ಮೂರನೇ ಗುಂಪಿನಲ್ಲಿ ತೆಲಂಗಾಣದ ಶಿವಾನಿ ಕರ್‍ರಾ 400 ಮೀ. ಫ್ರೀಸ್ಟೈಲ್‌ನಲ್ಲಿ ದಾಖಲೆ ಬರೆದರು. ಶಿವಾನಿ 5ನಿ.06.19 ಸೆ.ಗಳಲ್ಲಿ ದೂರ ಪೂರೈಸಿ, ಕಳೆದ ವರ್ಷ ಆಂಧ್ರಪ್ರದೇಶದ ಕೆ.ಲಾಸ್ಯಶ್ರೀ ಹೆಸರಿನಲ್ಲಿದ್ದ ದಾಖಲೆ (5:06.79) ಮುರಿದರು.



ಪುರುಷರ 50 ಮೀ. ಬಟರ್‌ಫ್ಲೈ (ಎರಡನೇ ಗುಂಪು) ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದ ಅನಿಶ್ ಅನಿರುದ್ಧ ಕೋರೆ –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಫಲಿತಾಂಶಗಳು (ಕರ್ನಾಟಕದ ಸ್ಪರ್ಧಿಗಳು): ಬಾಲಕರು: ಒಂದನೇ ಗುಂಪು: 200 ಮೀ. ಫ್ರೀಸ್ಟೈಲ್: ಅಲೈಸ್ಟರ್ ಸಾಮ್ಯುಯೆಲ್ ರೇಗೊ –1, ಧೋನೀಶ್ ಎನ್. –2, ಕಾಲ: 2ನಿ.01. 42ಸೆ.; 800 ಮೀ. ಫ್ರೀಸ್ಟೈಲ್: ಯಜತ್ ಅಯ್ಯಪ್ಪ ಕೆ.ಪಿ–1, ರೇಣುಕಾಚಾರ್ಯ ಹೊದಮನಿ –2, ಕಾಲ: 9ನಿ.08.46 ಸೆ.; 50 ಮೀ. ಬಟರ್‌ಫ್ಲೈ: ಚಿಂತನ್ ಎಸ್. ಶೆಟ್ಟಿ –1, ಸ್ವರೂಪ್ ಧನುಚೆ –2, ಕಾಲ: 26.14 ಸೆ. ನೂತನ ದಾಖಲೆ, ಹಳೆಯದು: 26.67 ಸೆ.; 50 ಮೀ. ಬ್ರೆಸ್ಟ್‌ಸ್ಟ್ರೋಕ್: ಸೂರ್ಯ ಜೋಯಪ್ಪ ಒ.ಆರ್. –1, ವಿಶಾಖನ್ ಶರವಣನ್ –3, ಕಾಲ: 31.81 ಸೆ.; 200 ಮೀ. ಬ್ಯಾಕ್‌ಸ್ಟ್ರೋಕ್: ಕುಶಲ್ ಕೆ. –1, ಯಜತ್ ಅಯ್ಯಪ್ಪ –2, ಕಾಲ: 2ನಿ.17.76 ಸೆ.; 4x100 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ (ಅಲೈಸ್ಟರ್, ಶ್ರೇಯಸ್ ಮಂಜುನಾಥ್, ಧೋನೀಶ್, ಚಿಂತನ್)–1, ಕಾಲ: 3ನಿ.43.32 ಸೆ., ನೂತನ ದಾಖಲೆ, ಹಳೆಯದು: 3ನಿ.45.45 ಸೆ.

2ನೇ ಗುಂಪು: 200 ಮೀ. ಫ್ರೀಸ್ಟೈಲ್: ಶರಣ್ ಎಸ್. –1, ಸಾತ್ವಿಕ್ ನಾಯಕ್ ಸುಜೀರ್ –2, ಕಾಲ: 2ನಿ.06.57 ಸೆ.; 800 ಮೀ. ಫ್ರೀಸ್ಟೈಲ್: ಶರಣ್ ಎಸ್. –1, ಧ್ರುಪದ್ –2, ಕಾಲ: 9ನಿ.16.71 ಸೆ.; 50 ಮೀ. ಬಟರ್‌ಫ್ಲೈ: ಅನಿಶ್ ಅನಿರುದ್ಧ –1, ದಕ್ಷ್ ಮಟ್ಟ –2, ಕಾಲ: 27.80 ಸೆ., ನೂತನ ದಾಖಲೆ, ಹಳೆಯದು: 27.86 ಸೆ.; 50 ಮೀ. ಬ್ರೆಸ್ಟ್‌ಸ್ಟ್ರೋಕ್: ದಕ್ಷ್ ಮಟ್ಟಾ –1, ಸಪ್ತಾಶ್ವ ಬ್ಯಾನರ್ಜಿ –2, ಕಾಲ: 34.03 ಸೆ.; 200 ಮೀ. ಬ್ಯಾಕ್‌ಸ್ಟ್ರೋಕ್: ಸಮರ್ಥ್ ಗೌಡ ಬಿ.ಎಸ್.–1, ಸಾತ್ವಿಕ್ ನಾಯಕ್ ಸುಜೀರ್ –2, ಕಾಲ: 2ನಿ.22.66 ಸೆ.; 4x100 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ (ರಿಶಿತ್ ರಂಗನ್, ಅನಿಶ್ ಕೋರೆ, ಅಗಸ್ತ್ಯ ಮಂಜುನಾಥ್, ಸಾತ್ವಿಕ್ ನಾಯಕ್)–1, ಕಾಲ: 3ನಿ.57.91 ಸೆ.

ಬಾಲಕಿಯರು: ಒಂದನೇ ಗುಂಪು: 200 ಮೀ. ಫ್ರೀಸ್ಟೈಲ್: ಸಮನ್ವಿ ಇ.ಎಸ್. –1, ಜೇಗಶ್ರೀ ಪೂಜಾ –2, ಕಾಲ: 2ನಿ.19.01 ಸೆ.; 800 ಮೀ. ಫ್ರೀಸ್ಟೈಲ್: ಜನ್ಯಾ ಬಿ.ಎಸ್. –1, ಆಸ್ರಾ ಸುಧೀರ್ –2, ಕಾಲ: 10ನಿ.00.81ಸೆ.; 50 ಮೀ. ಬಟರ್‌ಫ್ಲೈ: ನೈಶಾ ಶೆಟ್ಟಿ –1, ಇಂಚರಾ ಫಣೀಂದ್ರನಾಥ್ –2, ಕಾಲ: 30.44 ಸೆ.; 50 ಮೀ. ಬ್ರೆಸ್ಟ್‌ಸ್ಟ್ರೋಕ್: ಪ್ರತೀಕ್ಷಾ ಶೆಣೈ –1, ಜೇಗಶ್ರೀ ಪೂಜಾ –3, ಕಾಲ: 37.73 ಸೆ.; 200 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಜಿ. ಶಾ –1, ಶ್ರುತಿ ಕೆ.ಆರ್. –2, ಕಾಲ: 2ನಿ.39.60 ಸೆ.; 4x100 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ (ಜೇಗಶ್ರೀ ಪೂಜಾ, ಸಾಕ್ಷಿ ಎಸ್.ದ್ಯಾಮಣ್ಣನವರ, ಸಮನ್ವಿ, ನೈಶಾ)–1, ಕಾಲ: 4ನಿ.25.68 ಸೆ.

ಎರಡನೇ ಗುಂಪು: 200 ಮೀ. ಫ್ರೀಸ್ಟೈಲ್: ತ್ರಿಶಾ ಸಿಂಧು ಎಸ್. –1, ಶಮನಿ ಎಚ್. ಗೌಡ –2, ಕಾಲ: 2ನಿ.20.53 ಸೆ.; 800 ಮೀ. ಫ್ರೀಸ್ಟೈಲ್: ತನಿಶಾ ವಿನಯ್ –2, ಹಿತಶ್ರೀ ಎನ್. –3, ಕಾಲ: 10ನಿ.26.44 ಸೆ; 50 ಮೀ. ಬಟರ್‌ಫ್ಲೈ: ಚರಿತಾ ಫಣೀಂದ್ರನಾಥ್ –1, ತಿಸ್ಯಾ ಸೋನಾರ್ –3, ಕಾಲ: 30.19 ಸೆ.; 50 ಮೀ. ಬ್ರೆಸ್ಟ್‌ಸ್ಟ್ರೋಕ್: ಹಿಯಾ ಮನ್‌ಚಂದಾ –2, ಗಗನಾ ಸಿ.ಎಂ. –2, ಕಾಲ: 37.89 ಸೆ.; 200 ಮೀ. ಬ್ಯಾಕ್‌ಸ್ಟ್ರೋಕ್: ತಾನ್ಯಾ ಎಂ.ಎನ್. –2, ಕಾಲ: 2ನಿ.33.82 ಸೆ.; 4x100 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ (ಚರಿತಾ, ತ್ರಿಶಾ, ಶಮನಿ, ತಿಸ್ಯಾ)–1, ಕಾಲ: 4ನಿ.21.64 ಸೆ.



